SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 5 Pages:56
December - 2023, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2023
ಬೆಲೆ ರೂ. 20/-



## ವೈಕುಂಠ ಏಕಾದಶಿ ಸಂದರ್ಭವಾಗಿ
## ಸ್ವರ್ಣರಥೋತ್ಸವ 23-12-2023

## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಪತಿ, ಶ್ರೀಕಪಿಲೇಶ್ವರ ಸ್ವಾಮಿಯವರ ತೆಪ್ಪೋತ್ಸವಗಳು

## 22-12-2023 ರಿಂದ 26-12-2023 ರ ವರೆಗೆ

ತಿರುಪತಿಯ ಅಲಿಪಿರಿಯ ಸಮೀಪದಲ್ಲಿ ಶೇಷಾಚಲವನ್ನು ಆನಿಕೊಂಡೇ ಶ್ರೀಕಪಿಲೇಶ್ವರಾಲಯವಿದೆ. ಶ್ರೀ ಕಪಿಲ ಮಹರ್ಷಿಯ ತಪಸ್ಸಿಗೆ ಮೆಚ್ಚಿ ಶಿವನು ಇಲ್ಲಿ ಸ್ವಯಂಭುವಾಗಿ ನೆಲೆಸಿದ್ದಾನೆ. ಇಲ್ಲಿ ಪವಿತ್ರವಾದ ಸರೋವರವಿದೆ. ಇದನ್ನು ಕಪಿಲತೀರ್ಥ ಎಂದು ಕರೆಯುತ್ತಾರೆ. ಪವಿತ್ರವಾದ ಕಾರ್ತೀಕ ಮಾಸದಲ್ಲಿ ಅಧಿಕ ಸಂಖ್ಯೆಯಲ್ಲಿ ಭಕ್ತರು ಇಲ್ಲಿ ಪುಣ್ಯ ಸ್ನಾನಗಳನ್ನು ಆಚರಿಸುತ್ತಾರೆ. ತಿರುಪತಿ ಬಸ್ಟ್ಯಾಂಡು, ರೈಲ್ವೆಸ್ಟೇಷನ್ನಿನಿಂದ ಹತ್ತು ನಿಮಿಷಗಳಿಗೊಮ್ಮೆ ಈ ಆಲಯವನ್ನು ತಲುಪುವುದಕ್ಕೆ ವಾಹನಗಳ ಸೌಕರ್ಯವಿದೆ. ವಿಶೇಷವಾಗಿ ಧರ್ನುಮಾಸದ ಆರ್ದ್ರಾನಕ್ಷತ್ರದ ಸಂದರ್ಭದಲ್ಲಿ ಇಲ್ಲಿ ಉತ್ಸವಗಳು ನಡೆಯುತ್ತದೆ. ಶ್ರೀ ಕಪಿಲೇಶ್ವರ ಸ್ವಾಮಿ ಮತ್ತು ಇತರ ಪರಿವಾರ ದೇವತೆಗಳೊಂದಿಗೆ ಶ್ರೀ ಕಾಮಾಕ್ಷಿ ದೇವಿಗೆ ಪ್ರದೋಷ ಕಾಲದಲ್ಲಿ ಮಾರ್ಗಶಿರ ಮಾಸದ ಹುಣ್ಣಿಮೆಯಂದು 5 ದಿನಗಳ ಕಾಲ ಕಪಿಲತೀರ್ಥ ಪುಷ್ಕರಣಿಯಲ್ಲಿ ತೆಪ್ಪೋತ್ಸವಗಳು ನಡೆಯುತ್ತದೆ. ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ 27-12-2023 ರಂದು ಆರುದ್ರ ದರ್ಶನ ಮಹೋತ್ಸವ ನಡೆಯಲಿದೆ.



| | | |
|---|---|---|
| 22-12-2023 | ಶುಕ್ರವಾರ | ಶ್ರೀವಿಘ್ನೇಶ್ವರಸ್ವಾಮಿಯವರಿಗೆ |
| | | ಶ್ರೀ ಚಂದ್ರಶೇಖರ ಸ್ವಾಮಿಯವರಿಗೆ |
| 23-12-2023 | ಶನಿವಾರ | ಶ್ರೀಸುಬ್ರಮಣ್ಯ ಸ್ವಾಮಿಯವರಿಗೆ |
| 24-12-2023 | ಭಾನುವಾರ | ಶ್ರೀ ಸೋಮಸ್ಕಂದ ಸ್ವಾಮಿಯವರಿಗೆ |
| 25-12-2023 | ಸೋಮವಾರ | ಶ್ರೀ ಕಾಮಾಕ್ಷಿ ಅಮ್ಮನವರಿಗೆ |
| 26-12-2023 | ಮಂಗಳವಾರ | ಶ್ರೀಚಂಡೀಶ್ವರ ಸ್ವಾಮಿಯವರಿಗೆ |
| | | ಶ್ರೀ ಚಂದ್ರಶೇಖರ ಸ್ವಾಮಿಯವರಿಗೆ |

## 27-12-2023 ಬುಧವಾರ ಶ್ರೀ ಕಪಿಲೇಶ್ವರ ಸ್ವಾಮಿಯವರ ಆರುದ್ರದರ್ಶನ ಮಹೋತ್ಸವ





ಜಯಜಯತು ಶ್ರೀರಾಮ
ಜಯಜಯತು ಘನಶ್ಯಾಮ ॥ಪ॥

ಜಯಜಯತು ಮುನಿಪ್ರೇಮ - ರಿಪು ಭೀಮ
ಜಯಜಯತು ಸುರಸ್ತೋಮ ವಿನಮಿತ ಮಂಗಳ ನಾಮ
ಜಯತು ಸದ್ಗುಣಧಾಮ- ರಘುರಾಮ ॥ 1॥

ಆನಂದ ಜ್ಞಾನದನೆ - ಆನಂದ ಮಾಸದನೆ
ಆನಂದ ಸಿದ್ಧಿದನೆ - ಅನಘನೇ
ಆನಂದ ಮಂದಿರನೆ - ಆನಂದ ಚಂದಿರನೆ
ಆನಂದ ಸುಂದರನೆ - ಅಘುಹಾನೇ ॥2॥

ಸುರಾರಿದರ್ಪಹರ - ಪುರಾರಿ ಮಿತ್ರವರ
ದರಾರಿ ಅಭಯಕರ - ಸುಕುಮಾರ
ಕಾರುಣ್ಯಪಾಂಗವರ - ಲಾವಣ್ಯ ರೂಪಧರ
ವರೇಣ್ಯನಿಕರ - ಸಿರಿಕಾಂತ ॥ 3॥

# ಭಗವದ್ಗೀತೆ



**ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ।**
**ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ॥**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -10)

ಧೃತರಾಷ್ಟ್ರನೇ, ಎರಡು ದಂಡುಗಳ ನಡುವೆ
ವ್ಯಥೆಗೊಳ್ಳುತ್ತಿರುವ ಅರ್ಜುನನನ್ನು ಕುರಿತು ಕೃಷ್ಣನು
ಮುಗುಳು ನಗುತ್ತಲೇ ಹೀಗೆ ಹೇಳಿದನು.

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಕೃಪೇ ಕೃತಜಗದ್ಧಿ ತೇ ಕೃಪಣಜಂತು ಚಿಂತಾಮಣೇ ರಮಾಸಹಚರಂ ತದಾ (ಕ್ಷಿತಾ) ರಘುಧುರೀಣಯಂತ್ಯಾ ತ್ವಯಾ।**
**ವ್ಯಭಜ್ಯತ ಸರಿತ್ಪತಿಃ ಸಕೃಗವೇಕ್ಷಣಾತ್ತತ್ಕ್ಷಣಾ ಪ್ರಕೃಷ್ಟಬಹುಪಾತಕ ಪ್ರಶಮಹೇತುನಾ ಸೇತುನಾ ॥87॥**

ಈ ಪದ್ಯದಲ್ಲಿ ಶ್ರೀರಾಮಾವತಾರದಲ್ಲಿ ದಯೆಯಿದುಂಟಾದ ಮಹೋಪಕಾರವು ವರ್ಣಿಸಲ್ಪಡುವುದು, ಕರುಣೆಯೇ ಮೂರ್ತಿಮತ್ತಾಗಿ ಬಂದಿದೆಯೋ ಎಂಬಂತೆ **"ಕರುಣಾಕಾಕುತ್ಸ್ಥ"** ನೆಂದು ಪ್ರಸಿದ್ಧವಾಗಿ ವ್ಯವಹರಿಸಲ್ಪಡುವ ಅವತಾರವಿದು ಅಗತಿಕರಾಗಿ ಬಿದ್ದಿರುವ ಪ್ರಾಣಿಗಳನ್ನು ಕಾಪಾಡಿ ಅವುಗಳಿಗೆ ಇಷ್ಟವಾದುದನ್ನು ಕೊಡುವುದೇ ಕರುಣೆಯ ನೆಲೆಯಾಗಿರುವುದು. ಇದನ್ನೇ ಶರಣಾಗತ ಸಂರಕ್ಷಣವೆನ್ನುವರು. ಇಂತಹ ಶರಣಾಗತಿ ಧರ್ಮವನ್ನು ಪ್ರಪಂಚಕ್ಕೆ ತೋರಿಸಿ ತಾನೂ ಹಲವಾರು ರೀತಿಯಿಂದ ಅನುಷ್ಠಿಸಿ ತೋರಿಸುವುದಕ್ಕಾಗಿಯೇ ಶರಣಾಗತ ರಕ್ಷಣದಲ್ಲಿ ಆಸಕ್ತಿಯುಳ್ಳ ರಘುವಂಶದಲ್ಲಿ ಶ್ರೀರಾಮನು ಅವತರಿಸಿದುದು. ಹೀಗೆ ಅವತರಿಸುವಂತೆ ಮಾಡಿದುದು ದಯಾದೇವಿಯೇ. ಈ ಶರಣಾಗತಿ ಧರ್ಮಾನುಷ್ಠಾನಕ್ಕೆ ಲಕ್ಷ್ಮೀಯ ಸಹಾಯವು ಅನಿವಾರ್ಯವಾದುದು. **"ಅಗ್ರತಸ್ತೇಗಮಿಷ್ಯಾಮಿ"** - ಎಂದಲ್ಲವೇ ಅವಳ ಮಾತು. ಆದ್ದರಿಂದ ಅವಳನ್ನು ಅನುಸರಿಸಿ ನಡೆಯುವಂತೆ ದಯಾದೇವಿಯು ಪರಮಪುರುಷನನ್ನು ಅವತಾರಗೊಳಿಸಿದಳು. ರಾವಣನಿಂದ ಪೀಡೆಯುಂಟಾದ ಆ ಕಾಲದಲ್ಲಿ ಭೂಲೋಕದಲ್ಲಿ ಅವತರಿಸಿದ ರಾಮನಿಂದ ರಾವಣ ಸಂಹಾರವೇ ಮೊದಲಾದ ಅನೇಕ ಕಾರ್ಯಗಳು ನಡೆದರೂ ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಸೇತುಬಂಧನವೇ ಎಂದು ಆಚಾರ್ಯರ ಅಭಿಪ್ರಾಯ. ಋಷಿಗಳೊಡನೆ ಸೇರಿ ಇದ್ದುದೂ ರಾವಣವನ್ನು ಸಂಹರಿಸಿದುದೇ ಮೊದಲಾದ ಕಾರ್ಯಗಳಿಂದ ಆ ಕಾಲದಲ್ಲಿದ್ದವರಿಗೆ ಮಾತ್ರವೇ ಲಾಭವೇ ಹೊರತು ಈಚಿನವರಾದ ನಮ್ಮಂತವರಿಗೆ ಯಾವುದೊಂದು ಪ್ರಯೋಜನವೂ ಇಲ್ಲ . ಸೇತು ಬಂಧನವೋ ಎಂದರೆ ಕಲ್ಪಾವಸಾನದವರೆಗೆ ಸರ್ವರಿಗೂ ಉತ್ತಮವಾದ ಫಲವನ್ನು ಕೊಡುವಂತಹುದು. **"ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ "** ಎಂದು ಪ್ರಮಾಣಗಳು ಘೋಷಿಸುವಂತೆ ಒಂದು ಸಲ ಸೇತುವೆಯನ್ನು ನೋಡಿದರೆ ಅದೇ ಆ ಕ್ಷಣದಲ್ಲಿಯೇ ಬ್ರಹ್ಮಹತ್ಯೆಯೇ ಮೊದಲಾದ ಕೋಟಿಪಾಪಗಳೂ ನಾಶವಾಗುವುವು. ಅಂತಹ ಸೇತುವು ಭಗವಂತನ ಒಂದು ದಯಾಕಟಾಕ್ಷವಿಶೇಷದಿಂದ ಅ ಕ್ಷಣದಲ್ಲಿಯೇ ನಿರ್ಮಿತವಾಗಿ, ಅದರಿಂದ ಸಮುದ್ರವು ಎರಡು ಭಾಗವಾಗಿ ಮಾಡಲ್ಪಟ್ಟಿತು. ಆ ಸೇತುವೆಯನ್ನೇ ಸೇವಿಸಿ ಇಂದಿನವರೆಗೂ ಸಮಸ್ತ ಜನರೂ ತಮ್ಮ ಸಮಸ್ತಪಾಪಗಳನ್ನು ಕಳೆದುಕೊಂಡು ಉತ್ತಮಗತಿಯನ್ನು ಪಡೆದಿರುವರಲ್ಲವೆ ! ಆದ್ದರಿಂದ ಶ್ರೀರಾಮಾವತಾರದ ಕಾರ್ಯಗಳಲ್ಲಿ ಈ ಕಾರ್ಯವೇ ಅತ್ಯಂತ ಶ್ರೇಷ್ಠವಾದುದೆಂದೂ ದಯಾದೇವಿಗೆ ಇದರಲ್ಲಿಯೇ ಮುಖ್ಯವಾದ ಉದ್ದೇಶ್ಯವೆಂದೂ ಹೇಳಬಹುದು.

తిరుమలే తిరుపతి దేవస్థానగళు


# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಕಾರ್ತೀಕ - ಮಾರ್ಗಶಿರ ಮಾಸ ಸಂಚಿಕೆ

ಸಂಪುಟ : 03 ಡಿಸೆಂಬರ್ - 2023 ಸಂಚಿಕೆ : 05




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


ಸಂಪಾದಕೀಯ 06
ಆನೆಗುಡ್ಡೆ ಶ್ರೀವಿನಾಯಕ ದೇವರ ವಿಜೃಂಭಣೆಯ ಬ್ರಹ್ಮರಥೋತ್ಸವ -ವೇ. ಸುಬ್ರಮಣ್ಯ ಉಪಾಧ್ಯಾಯ 07
ಪರಮ ಕರುಣಾಸಮುದ್ರ ಶ್ರೀರಾಮ -ಕಾಳ್ಯೂರ್ ರಘೂತ್ತಮಚಾರ್ 09
ಏಕಾದಶೀ ವ್ರತ - ಪ್ರಭಂಜನ ಗುತ್ತಲ್ 11
ಗೋದೆಯ ಶರಣಾಗತಿ ಮಹಿಮೆ - ಶ್ರೀಮತಿ. ಎಸ್. ಕಲ್ಯಾಣಿ 12
ಶ್ರೀ ವೈಷ್ಣವರ ವಿಶಿಷ್ಟ ಪೂಜೆ ಆನೆ ಹಬ್ಬ - ಶ್ರೀಮತಿ. ಕೆ.ವಿ. ಪದ್ಮಾವತಿ 15
ಭಕ್ತಿ ಒಂದು ಚಿಂತನೆ - ಬಿ. ವಿಜೇಂದ್ರನಾಥ್ 18
ಶ್ರೀವೇಣುಗೋಪಾಲ ಕೃಷ್ಣಸ್ವಾಮಿ ದೇವಾಲಯ - ಶ್ರೀಮತಿ. ಪಿ. ಭಾರ್ಗವಿ 21
ತಿಮ್ಮಲಾಪುರದ ಶ್ರೀನಿವಾಸ ದೇವರ ಮಹಿಮೆ -ಶ್ರೀಧರ ರಾಯಸಂ 23
ಕಾರ್ತೀಕ ಮಾಸದ ಕಡಲೆಕಾಯಿ ಪರೀಷೆ - ಶ್ರೀಮತಿ. ಪಾರಿಜಾತ ಬಿ.ಎಸ್. 25
ವೈಕುಂಠ ಏಕಾದಶಿ - ಡಾ॥ ವಾದಿರಾಜ ವಿ. ಅಗ್ನಿಹೋತ್ರಿ 31
ಮದ್ದೂರಿನ ಉಗ್ರನರಸಿಂಹ ಮತ್ತು ವರದರಾಜಸ್ವಾಮಿ ದೇವಾಲಯಗಳು - ಕೆಂಗೇರಿ ಚಕ್ರಪಾಣಿ 36
ತಿರುಮಲೆ ಕಾಲಮಾನಾಚರಣೆಗಳು - ಶ್ರೀಮತಿ 39
ಆಳ್ವಾರುಗಳು ಕಂಡ ತಿರುವೇಂಗಡ -ಎಂ. ಆರ್. ನರಸಿಂಹನ್ 41
ತಿರುಕಣ್ಣಂಗುಡಿ -ಸೂರ್ಯವಂಶಿ 43
ರಾಶಿ ಫಲಗಳು - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ 46
ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು - ಡಾ॥ ಅನಸೂಯ ಎಸ್. ರಾಜೀವ್ 47
ನೀತಿಕಥೆ - ಎಂದೆಂದಿಗೂ ಒಗ್ಗಟ್ಟಿನಲ್ಲಿ ಬಲವಿದೆ - ಎ.ಆರ್. ರಘುರಾಮ 48
ಚಿತ್ರಕಥೆ - ಕತ್ತೆಯೇ ಗುರು - ಶ್ರೀಮತಿ. ಎಸ್.ಸುರೇಖ 52


ಮುಖಚಿತ್ರ - ಸ್ವಾಮಿಯವರ ಸ್ವರ್ಣರಥೋತ್ಸವ, ತಿರುಮಲೆ
ಹಿಂಬದಿಚಿತ್ರ - ಗೀತೋಪದೇಶ, ಚಿತ್ರಕಲೆ


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

# ಸಂಪಾದಕೀಯ

## ಶ್ರೀ ಹರಿಯನ್ನು ಆರಾಧಿಸುವ ಮಾಸ "ಧನುರ್ಮಾಸ"

"ಮಾಸಾನಾಂ ಮಾರ್ಗಶ್ರೀಷೋ೯ಹಂ" ಮಾಸಗಳಲ್ಲೆಲ್ಲಾ ಮಾರ್ಗಶಿರ ಮಾಸ ಮಕುಟದಂತದ್ದು. ಈ ಮಾಸ ಮಹಾವಿಷ್ಣುವಿಗೆ ಬಹಳ ಪ್ರೀತಿಕರವಾದುದು. ಈ ಮಾಸದಲ್ಲಿ ಆಚರಿಸುವಂತಹಾ ಪೂಜೆಗಳೊಂದಿಗೆ, ಆಚರಿಸುವ ಉಪವಾಸಗಳು ಸಕಲ ಶುಭವನ್ನು ಉಂಟು ಮಾಡುತ್ತವೆ. ಇನ್ನೂ ಈ ಮಾಸದಲ್ಲೇ ಕುಮಾರಸ್ವಾಮಿ,ಕಾಲಭೈರವ,ತ್ರಿಮೂರ್ತಿ ರೂಪನಾದ ದತ್ತಾತ್ರೇಯನೊಂದಿಗೆ ಶ್ರೀಮದ್ಭಗವದ್ಗೀತೆಯೂ ಈ ಮಾಸದಲ್ಲೇ ಅವತರಿಸುವುದು ವೈಕುಂಠ ಏಕಾದಶಿ ವ್ರತ, ಹನುಮವ್ರತ ಸಂಭವಿಸುವುದು ಬಹಳ ವಿಶೇಷವಾದುದು. ಶ್ರೀವಿದ್ಯಾಶಾಸ್ತ್ರದ ಪ್ರಕಾರ ಹೇಮಂತ ಋತುವಿನಲ್ಲಿ ಮಾರ್ಗಶಿರ ಪುಷ್ಯಮಾಸಗಳಿಗೆ "ಸಹಶ್ರೀ" "ಸಹಶ್ರೀ" ಎಂಬ ಎರಡು ಹೆಸರುಗಳನ್ನು ತಿಳಿಸಿದ್ದಾರೆ. ವೇದಗಳ ಪ್ರಕಾರ ಈ ಹೆಸರನ್ನು ಈ ಎರಡು ತಿಂಗಳುಗಳಿಗೆ ನೀಡಿದ್ದಾರೆ. ಸಹಃ ಎಂದರೆ ಬಲ ಎಂದರ್ಥಃ ಯಾವುದನ್ನಾದರೂ ಸಹಿಸುವಂತಹಾ ಬಲವನ್ನು ಹೊಂದಿರುವುದು ಎಂದರ್ಥ ಅದಕ್ಕೆ ಸಹ್ಯ ಎಂಬ ಹೆಸರು ಕಂಡು ಬರುತ್ತಿದೆ. ಅಂದರೆ ಈ ಮಾಸವು ಶಕ್ತಿಯನ್ನು ನೀಡುವಂತದೆಂದು ತಿಳಿಸುತ್ತಿದೆ. ವಸಂತಮಾಸವು ಚಿಗುರಿನೊಂದಿಗೆ ಪ್ರಾರಂಭವಾದರೂ ಹೇಮಂತವು ನೀಡುವಂತಹಾ ಕಾಲ ಆದ್ದರಿಂದಲೇ ಈ ಮಾಸಕ್ಕೆ ಪ್ರಾಮುಖ್ಯತೆ ಇದೆ. ಈ ಋತುವಿನಲ್ಲಿ ಬರುವ ಸಂಕ್ರಮಣಕ್ಕೂ ಅತ್ಯಂತ ಮಹತ್ವವಿದೆ.ಸೂರ್ಯನು ಆಯಾ ರಾಶಿಗಳಲ್ಲಿ ಪ್ರವೇಶಿಸುವ ಸಮಯವನ್ನು 'ಸಂಕ್ರಮಣ' ಎನ್ನುತ್ತಾರೆ.

ಮೊದಲನೆಯದು 'ಧನುಸ್ಸಂಕ್ರಮಣ' ವಾದರೆ ಎರಡನೆಯದು 'ಮಕರ ಸಂಕ್ರಮಣ' ನಮ್ಮ ಒಂದು ವರ್ಷದ ಕಾಲವನ್ನು ದೇವತೆಗಳಿಗೆ ಒಂದು ದಿನವೆಂದು ನಂಬುತ್ತಾರೆ. ಈ ದಿನಕ್ಕೆ ಧನುಸಂಕ್ರಮಣದಿಂದ ಬರುವ ಒಂದು ತಿಂಗಳ ಕಾಲ ದೇವತೆಗಳಿಗೆ 'ಬೆಳಗಿನ ಝಾವದಂತದ್ದು, ಹಾಗೆಯೇ "ಸೂರ್ಯೋದಯ"ಮಕರ ಸಂಕ್ರಮಣ ಎಂದು ಧಾರ್ಮಿಕ ಗ್ರಂಥಗಳು ಸಾರುತ್ತಿವೆ.ಸೂರ್ಯನು ಧನಸ್ಸು ರಾಶಿಯಲ್ಲಿ ಪ್ರವೇಶಿಸುವುದರೊಂದಿಗೆ "ಧನುರ್ಮಾಸ" ಪ್ರಾರಂಭವಾಗುತ್ತದೆ. ಧನುರ್ಮಾಸವು ಶ್ರೀಮಹಾವಿಷ್ಣುವಿನ ಆರಾಧನೆಗೆ ಅತ್ಯಂತ ವಿಶೇಷವಾದ ಮಾಸ "ಧನು" ಎಂದರೆ ಯೋಗಶಾಸ್ತ್ರದ ಪ್ರಕಾರ "ಬೆನ್ನುಮೂಳೆ" "ಮೇರು" ಎಂದರ್ಥ! ಅಂತಹಾ ಸಾಧನೆಗೆ ಸಂಕೇತ ಈ ಬಿಲ್ಲು ! ಸಾಧನೆಗೆ ಸರಿಯಾದ ಸಮಯ ಬ್ರಾಹ್ಮೀ ಮೂಹೂರ್ತ।

ಧ್ಯಾನವೇ ಧನುರ್ಮಾಸದ ವ್ರತ, ಈ ವ್ರತವನ್ನು ಆಚರಿಸಿದ್ದು ಪೆರಿಯಾಳ್ವಾರ್ ಅವರ ದತ್ತು ಪುತ್ರಿಯಾದ ಗೋದಾದೇವಿ (ಆಂಡಾಳ್) ಭೂದೇವಿಯ ಅವತಾರ, ಧನುರ್ಮಾಸದ ಮೂವತ್ತು ದಿನಗಳೂ ಗೋದಾದೇವಿ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ತನ್ನ ಸಖಿಯರನ್ನು ಎಬ್ಬಿಸಿ ಎಲ್ಲರೂ ಸ್ನಾನವನ್ನು ಆಚರಿಸಿ ಕೃಷ್ಣನ ಕೀರ್ತನೆಯೊಂದಿಗೆ ಕೃಷ್ಣನ ಧ್ಯಾನದೊಂದಿಗೆ ಆತನಲ್ಲಿ ಐಕ್ಯವಾಗುವುದೇ ಉದ್ದೇಶವೆನ್ನುವಂತೆ ಹಾಡಿದ ಮೂವತ್ತು ಪಾಶುರಗಳ ಗೀತಿಕಾವ್ರತವೇ "ತಿರುಪ್ಪಾವೈ" (ಶ್ರೀವ್ರತಂ) ಎಂದು ಕರೆಯುತ್ತಾರೆ. ತನ್ನ ಸಖಿಯರನ್ನು ಎಬ್ಬಿಸುವುದು, ಅಂದರೆ ನಮ್ಮಲ್ಲಿನ ಭಕ್ತಿ ಭಾವನೆಗಳನ್ನು ಸಾತ್ವಿಕ ಪ್ರವೃತ್ತಿಯನ್ನು ಹೊಡೆದೆಬ್ಬಿಸಿ ಒಂದಾಗಿಸಬೇಕು. ಅವರೆಲ್ಲರೊಂದಿಗೆ ಸೇರಿ ಸ್ನಾನವನ್ನು ಆಚರಿಸಿ ಅಂದರೆ ಭಗವದ್ಭಾವನೆಯಲ್ಲಿ ಸಂಕೀರ್ತನಾರವಳಿಯಲ್ಲಿ ನಮ್ಮಲ್ಲಿನ ಭಾವನೆಗಳನ್ನು ಮುಳುಗಿಸಬೇಕು, ಹಾಯಾಗಿ ತಲೆದೂಗಬೇಕು. ಆಂಡಾಳಮ್ಮನ ಹಾಡುಗಳನ್ನು ಪಠಿಸಿದರೆ, ಜಾಗೃತವಾದ ಭಾವನೆಗಳನ್ನು ಒಂದಾಗಿಸಿ ದೇಹವೆಂಬ ದೇವಾಲಯದಲ್ಲಿ ಚೈತ್ಯವನ್ನು ಪಡೆದ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದುವುದೇ ಸಾಧನೆಯ ಕ್ರಮ ಸಿದ್ಧಿಯೂ ಉಂಟಾಗುತ್ತದೆ. ತಿರುಮಲೆಯ ಸ್ವಾಮಿಯ ದೇವಾಲಯದಲ್ಲೂ ಈ ಮಾಸದಲ್ಲಿ ಗೋದಾದೇವಿ ಕೀರ್ತಿಸಿದ "ತಿರುಪ್ಪಾವೈ" ಅನ್ನು ಒಂದು ತಿಂಗಳಕಾಲ "ಸುಪ್ರಭಾತಕ್ಕೆ" ಬದಲಾಗಿ ಅನುಸಂಧಾನ ಮಾಡುವುದು ಸಂಪ್ರದಾಯ।

ಇನ್ನು ಸಮಸ್ತ ಜೀವರಾಶಿಗಳಿಗೆ ವ್ಯಕ್ತಿತ್ವ ವಿಕಾಸವನ್ನು ಉಂಟುಮಾಡುವ ಕಲ್ಪವೃಕ್ಷವಾದ 'ಭಗವದ್ಗೀತೆ' ಸಾಕ್ಷಾತ್ತು ಶ್ರೀ ಕೃಷ್ಣಭಗವಾನನ ಬಾಯಿಂದ ಹೊರಹೊಮ್ಮಿದ ಅಮೃತದ ವಾಣಿ ಇದು ಮಾರ್ಗಶಿರ ಶುದ್ಧ ಏಕಾದಶಿಯಂದು ಉದಿಸಿತೆಂದು ಹಿರಿಯರು ಹೇಳುತ್ತಾರೆ. ಈ ಏಕಾದಶಿಯಂದು ಗೀತಾಪಾರಾಯಣ ಮಾಡುವುದು ಅಥವಾ ಗೀತೆಯ ಸಾರವನ್ನು ಅರ್ಥಮಾಡಿಕೊಳ್ಳುವುದು ಶ್ರೇಯಸ್ಸಿಗೆ ದಾರಿಯಾಗುತ್ತದೆ.ಈ ಏಕಾದಶಿಯಂದೇ 'ವೈಕುಂಠ ಏಕಾದಶಿ' ಅಥವಾ "ಮುಕ್ಕೋಟಿ ಏಕಾದಶಿ" ಬರುವುದೂ ಒಂದು ಪರಮಪವಿತ್ರವಾದ ವಿಷಯ. ತಿರುಮಲೆಯ ಶ್ರೀನಿವಾಸನ ಸನ್ನಿಧಿಯಲ್ಲಿ ಈ ಪರ್ವದಿನದಂದು ವೈಕುಂಠ ದ್ವಾರವು ತೆರೆಯಲ್ಪಡುತ್ತದೆ. ಇದು ಭಕ್ತಿ ಮುಕ್ತಿದಾಯಕ ತಿರುಮಲೆ ತಿರುಪತಿ ದೇವಸ್ಥಾನದವರು ವಿಶೇಷವಾಗಿ ಭಕ್ತರನ್ನು ಅನುಗ್ರಹಿಸುವುದಕ್ಕೆ "ವೈಕುಂಠದ್ವಾರವನ್ನು ಹತ್ತು ದಿನಗಳ ಕಾಲ ತೆರೆದಿಡುವುದು ಸಂತೋಷದಾಯಕವಾದುದು. ಈ ಸದಾವಕಾಶವನ್ನು ಭಕ್ತರೆಲ್ಲರೂ ಉಪಯೋಗಿಸಿಕೊಳ್ಳಬೇಕು.ಇದೇ ತಿಂಗಳಿನಲ್ಲಿ ತ್ರಿಮೂರ್ತಿಗಳ ಅಂಶದೊಂದಿಗೆ ಅವತರಿಸಿದ ದತ್ತಾತ್ರೇಯ ಜಯಂತಿಯೂ ಬರುವುದು ಇನ್ನೂ ವಿಶೇಷ। ಅಂದು ದತ್ತನ ನಾಮಸ್ಮರಣೆಯನ್ನು ಮಾಡುವುದು ಸಕಲ ಪಾಪಹರಣಕ್ಕೆ ಕಾರಣವಾಗುತ್ತದೆ.

ಈ ರೀತಿ ಮಾರ್ಗಶಿರ ಮಾಸದಲ್ಲಿ ಬರುವ ಹಬ್ಬಗಳು, ಪರ್ವದಿನಗಳ ವಿಶಿಷ್ಟತೆ ಪ್ರಾಶಸ್ತ್ಯವನ್ನು ಗಮನಿಸಿ ಹಿತವಾದ ಧರ್ಮವನ್ನು ಅನುಸರಿಸೋಣ ! ಧನ್ಯರಾಗೋಣ।

ಓಂ ನಮೋ ವೆಂಕಟೇಶಾಯ

# ಆನೆಗುಡ್ಡೆ ಶ್ರೀ ವಿನಾಯಕ ದೇವರ ವಿಜೃಂಭಣೆಯ ಬ್ರಹ್ಮರಥೋತ್ಸವ

- ವೇ. ಸುಬ್ರಮಣ್ಯ ಉಪಾಧ್ಯಾಯ
9481517415

**ಕುಂಭಾಸಿಯಲಿ ನೆಲೆಸಿಹ ಗಣಪನೆ
ನಂಬಿದವರ ಪಾಲಿನ ಕಲ್ಪತರು ನೀನೇ**





ದೇಶದ ಉದ್ದಗಲದಲ್ಲಿ ಹಲವಾರು ಗಣಪನ ಆಲಯಗಳಿದ್ದರೂ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕುಂಭಾಸಿಯಾನೆ ಆನೆಗುಡ್ಡೆಯ ವಿನಾಯಕ ದೇವಸ್ಥಾನ ಹಲವು ಕಾರಣಗಳಿಂದ ವಿಶೇಷತೆಯನ್ನು ಹೊಂದಿದೆ. ಕುಂದಾಪುರದಿಂದ 9 ಕಿ.ಮೀ. ದೂರದಲ್ಲಿ ನಿಸರ್ಗದ ಸುಂದರ ಪರಿಸರದಲ್ಲಿರುವ ಕುಂಭಾಸಿಯು ಪುರಾಣ ಪ್ರಸಿದ್ಧ ಕ್ಷೇತ್ರ ಮಹಾಭಾರತದ ಭೀಮಸೇನನು ಕುಂಭಾಸುರನೆಂಬ ರಾಕ್ಷಸನನ್ನು ಅಸಿ(ಕತ್ತಿ)ಯಿಂದ ಸಂಹರಿಸಿದ ಕಾರಣದಿಂದ ಈ ಪ್ರದೇಶಕ್ಕೆ ಕುಂಭಾಸಿ ಎಂಬ ಹೆಸರು ಬಂತು ಎಂದು ಉಡುಪಿ ಅಷ್ಟಮಠದ ಯತಿಗಳಲ್ಲಿ ಒಬ್ಬರಾದ ವಾದಿರಾಜರು ರಚಿಸಿದ ತೀರ್ಥ ಪ್ರಬಂಧ ಗ್ರಂಥದಿಂದ ತಿಳಿದು ಬರುತ್ತದೆ. ಗಣಪತಿ ಆನೆಯ ರೂಪದಲ್ಲಿ ಪ್ರತ್ಯಕ್ಷನಾಗಿ ಭೀಮಸೇನನಿಗೆ ಕತ್ತಿಯನ್ನು ನೀಡಿದ ಕಾರಣಕ್ಕಾಗಿ ಈ ಕ್ಷೇತ್ರಕ್ಕೆ ಆನೆಗುಡ್ಡೆ ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ಮತ್ತೊಂದು ಪೌರಾಣಿಕ ಆಖ್ಯಾನದಂತೆ ಪರಶುರಾಮ ಸೃಷ್ಟಿಯ ಸಪ್ತ ಮೋಕ್ಷ ಕ್ಷೇತ್ರಗಳಲ್ಲಿ ಒಂದಾಗಿದೆ. ಇಲ್ಲಿನ ಗಣಪತಿ ವಿಗ್ರಹ ರೂಪದಲ್ಲಿರದೆ ಸ್ವಯಂವ್ಯಕ್ತವಾಗಿದ್ದು ದರ್ಶನ ಮಾತ್ರದಿಂದಲೆ ಆಸ್ತಿಕರ ಮನೋಗತ ನೆರವೇರುತ್ತದೆ ಎಂಬುದು ಭಕ್ತರ ಅಂಬೋಣ.ಅಭಿಷೇಕ ಸಮಯದಲ್ಲಿ ಶ್ರೀದೇವರ ವಿಶ್ವರೂಪ ಕಾಣಬಹುದು. ಮಾಧ್ವ ಸಂಪ್ರದಾಯದ ತಂತ್ರಸಾರ ಪದ್ಧತಿಯಂತೆ ನಡೆಯುವ ಪೂಜಾಕೈಂಕರ್ಯಗಳು ಉಡುಪಿ ಅಷ್ಟಮಠಗಳಂತೆ ಪರ್ಯಾಯ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ. ಉಪಾಧ್ಯಾಯ ನಾಲ್ಕು ಮನೆತನದ ಮೂಲ ಕುಟುಂಬಗಳು ಪ್ರತಿ ವರ್ಷದ ಮಿಥುನ ಮಾಸದಿಂದ ಮತ್ತೊಂದು ಮಿಥುನ ಮಾಸದವರೆಗೆ ಪೂಜಾ ಹಕ್ಕನ್ನು ಪಡೆದು ಕೊಳ್ಳುತ್ತದೆ.

ಈ ಗಣಪನಿಗೆ ನಡೆಯುವ ವಿಶೇಷ ಸೇವೆಯೆಂದರೆ ಮೂಡು ಗಣಪತಿ ಹಾಗೂ ಮುಡಿ ಅಕ್ಕಿ ಕಡುಬು ಸೇವೆ ಮೂರು ಗಣಪತಿ ಸೇವೆ ಸಂದರ್ಭದಲ್ಲಿ ಭಕ್ತರು ನೂರಾ ಇಪ್ಪತ್ತೈದು ಅಥವಾ ಒಂದು ಸಾವಿರ ತೆಂಗಿನಕಾಯಿಗಳನ್ನು ದೇವರಿಗೆ ಅರ್ಪಿಸುತ್ತಾರೆ. ಅರ್ಚಕರು ಅವನ್ನು ಒಡೆದು ದೇವರು ಮುಂದೆ ರಾಶಿ ಹಾಕಿ ಮಂಗಳಾರತಿ ನೆರವೇರಿಸುವಾಗ ಆ ಒಡೆದ ಕಾಯಿ ಹೋಳುಗಳಲ್ಲೆ ಗಣಪನನ್ನು ಕಾಣುತ್ತಾರೆ. ಹರಕೆಯಾಗಿ ಕಟ್ಟಿಕೊಳ್ಳುವ ಮುಡಿ ಅಕ್ಕಿ ಕಡುಬು ಸೇವೆಯಾಗಿ ಭಕ್ತರು ಹನ್ನೆರಡು ಮುಡಿ ಅಕ್ಕಿ ಕಡುಬನ್ನು ಅರ್ಪಿಸಿ ನಂತರ ಪ್ರಸಾದ ಸ್ವೀಕರಿಸಿ ಸಂತೃಪ್ತಿ ಪಡೆಯುತ್ತಾರೆ.

ಇದಲ್ಲದೆ ಗಣಪನ ಸನ್ನಿಧಿಯಲ್ಲಿ ಸತ್ಯಗಣಪತಿವ್ರತ, ಸಂಕಷ್ಟಹರ ಚತುರ್ಥಿ, ಕಾರ್ತೀಕದ ಬಹುಳ ಚತುರ್ಥಿಯಂದು ನಡೆಯುವ ದೀಪೋತ್ಸವ ಶ್ರಾವಣದ ಸಹಸ್ರಾವರ್ತನ ಉಪನಿಷದಭಿಷೇಕ, ಲಕ್ಷದೂರ್ವಾರ್ಚನೆ, ವೈಶಾಖದ ವಸಂತಾರಾಧನೆ ಸಂದರ್ಭದಲ್ಲಿ ದೇವಾಲಯದಲ್ಲಿ ಭಕ್ತರು ಸಹಸ್ರೋಪಾದಿಯಲ್ಲಿ ನೆರೆದಿರುತ್ತಾರೆ.ಭಕ್ತರ ಅನುಕೂಲಕ್ಕಾಗಿ ದೇವಳದ ಸಮೀಪ ವಸತಿಗೃಹ ನಿರ್ಮಿಸಲಾಗಿದೆ.

ಪ್ರತಿನಿತ್ಯ ಇಲ್ಲಿ ಗಣಯಾಗ (ಏಕಾದಶಿಯಂದು ಹೊರತು ಪಡಿಸಿ)ಮಹಾಮಂಗಳಾರತಿ ನಂತರ ಲಂಬೋದರ ಪ್ರಸಾದ ಶಾಲೆಯಲ್ಲಿ ಮಹಾಪ್ರಸಾದ ಅನ್ನ ಸಂತರ್ಪಣೆ ನಡೆಯುವುದು. ಸುಮುಖಯಾಗ ಮಂಟಪದಲ್ಲಿ ಅಗ್ನಿ ಮುಖೇನ ಗಣಪತಿ ದೇವರೇ ಇಲ್ಲಿ ಆಹುತಿಗಳನ್ನು ಸ್ವೀಕರಿಸುವಂತೆ








ತೋರುವ ಆ ದೃಶ್ಯ ಹೃದಯಂಗಮವಾಗಿರುತ್ತದೆ. ಆಡಳಿತ ಸಮಿತಿಯ ವತಿಯಿಂದ ಮೂರು ದಶಕದ ಹಿಂದೆ ಪೇಜಾವರ ಶ್ರೀಗಳಿಂದ ಜೀರ್ಣೋದ್ಧಾರದ ಕೈಂಕರ್ಯಕ್ಕೆ ಶಿಲಾನ್ಯಾಸ, ಸ್ವಾಗತ ಗೋಪುರ, ಗರ್ಭಗೃಹದ ಸುತ್ತ ಪೌಳಿ, ತೀರ್ಥಮಂಟಪದ ಕಂಬಗಳಿಗೆ ಬೆಳ್ಳಿ ಕುಸರಿ ಕೆಲಸದಿಂದ ಬೆಳ್ಳಿ ಹೊದಿಕೆ ಹಾಗೂ ಶ್ರೀದೇವರಿಗೆ ಸುವರ್ಣಮುಖ ಸಮರ್ಪಿಸಲಾಗಿದೆ. ದೇವಾಲಯದ ಸನಿಹದಲ್ಲೆ ವಾದಿರಾಜರ ಜನ್ಮ ಸ್ಥಳ ಹೂವಿನ ಕೆರೆ ಮಠವಿದೆ.

ಪ್ರತಿ ವರ್ಷ ಇಲ್ಲಿ ಮಾರ್ಗಶಿರ ಶುದ್ಧ ಚತುರ್ಥಿಯಂದು ವೈಭವದ ಬ್ರಹ್ಮರಥೋತ್ಸವ ತದಂಗವಾಗಿ ಪ್ರತಿಪತ್ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗಿ ಅಥರ್ವಶೀರ್ಷ ಉಪನಿಷತ್‌ಹೋಮ, ಮಹಾಪೂಜೆ, ರಂಗಪೂಜೆ, ಡೋಲಾರೋಹಣ, ಪಲ್ಲಕ್ಕಿ ಉತ್ಸವ, ಕಲಶಾಭಿಷೇಕ, ಪುರಮೆರವಣಿಗೆ ನಡೆದು ಡಿ.16 ರಂದು ಯಂತ್ರೋದ್ಧಾರ ಪೂರ್ವಕ ಅಷ್ಟೋತ್ತರ ಸಹಸ್ರ ನಾಳಿಕೇರ ಮಹಾಗಣಪತಿಯಾಗ ನಡೆದು ಮಧ್ಯಾಹ್ನ ಅಭಿಜನ್ ಮುಹೂರ್ತದಲ್ಲಿ ಬ್ರಹ್ಮರಥೋತ್ಸವ, ಭಜಕರಿಂದ ಪಾನಕ ವಿತರಣೆ ಸಂಜೆ ಸುಡು ಮದ್ದು ಪ್ರದರ್ಶನ, ಮರುದಿನ ಚೂರ್ಣೋತ್ಸವ, ಅವಭೃತಸ್ನಾನ, ಮಂತ್ರಾಕ್ಷತೆ ಮುಂತಾದವು ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲಾಗಿದೆ. ಭಗವದ್ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಅನುವಂಶಿಕ ಆಡಳಿತ ಧರ್ಮದರ್ಶಿಗಳು ಹಾಗೂ ಎಲ್ಲಾ ಅರ್ಚಕರು ಮತ್ತು ಸಿಬ್ಬಂದಿ ವರ್ಗದವರ ಹಾಗೂ ಭಕ್ತ ಜನರ ಸಹಕಾರದೊಂದಿಗೆ ವೈಭವವಾಗಿ ನಡೆಯುತ್ತದೆ.



ತಿರುಪತಿ ನಗರದ ಮಧ್ಯದಲ್ಲಿ
**ಶ್ರೀ ಕೋದಂಡರಾಮಸ್ವಾಮಿಯ ಆಲಯ**
ವಿದೆ. ಇಲ್ಲಿ ಶ್ರೀಕೋದಂಡರಾಮ, ಸೀತಮ್ಮನವರು, ಲಕ್ಷ್ಮಣಸ್ವಾಮಿಯ ವಿಗ್ರಹಗಳಿವೆ. ಈ ಆಲಯವನ್ನು ಕ್ರಿ.ಶ. ೧೦ ನೆಯ ಶತಮಾನದಲ್ಲಿ ಚೋಳರಾಜರು ನಿರ್ಮಿಸಿದರು. ೧೫ನೆಯ ಶತಮಾನದಲ್ಲಿ ಶ್ರೀ ಕೃಷ್ಣದೇವರಾಯರು ಇದನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದರು. ಈ ಆಲಯದಲ್ಲಿ ಮಂಟಪದ ಮೇಲೆ ವಿಜಯನಗರ ರಾಜರ ರಾಜ ಮುದ್ರಿಕೆಗಳನ್ನು ನೋಡಬಹುದು. ಈ ಆಲಯಕ್ಕೆ ಎದುರಾಗಿ ಶ್ರೀ ಆಂಜನೇಯಸ್ವಾಮಿಯ ದೇವಾಲಯವಿದೆ. ತಿರುಪತಿ ಬಸ್ಟ್ಯಾಂಡು, ರೈಲ್ವೆ ಸ್ಟೇಷನ್ನಿನಿಂದ ಪ್ರತೀ ಹತ್ತು ನಿಮಿಷಗಳಿಗೊಮ್ಮೆ ಈ ಆಲಯಕ್ಕೆ ವಾಹನಗಳ ಸೌಕರ್ಯಗಳಿವೆ.



**ಶ್ರೀ ಕೋದಂಡರಾಮ ಸ್ವಾಮಿಯವರ ಆಲಯ, ತಿರುಪತಿ**

# ಪರಮ ಕರುಣಾ ಸಮುದ್ರ ಶ್ರೀರಾಮ

- ಕಾಳ್ಹೂರ್ ರಘೂತ್ತಮಚಾರ್
98446 62266



ಭಗವಾನ್ ಶ್ರೀರಾಮ ದೇವರು ತಮ್ಮ ಅವತಾರ ಸಮಾಪ್ತಿ ಕಾಲದಲ್ಲಿ ತಮ್ಮ ಪ್ರಜೆಗಳನ್ನು ಕುರಿತು ಈ ರೀತಿಯಾಗಿ ತಮ್ಮ ಸೇವಕರಿಂದ ಹತ್ತು ದಿಕ್ಕುಗಳಲ್ಲಿ ಕೇಳಿಸುವಂತೆ ಡಂಗೂರ ಸಾರಿದರು. "ಸಮಾಯಾತ ಸಮಾಯತ ಯೇ ಯೇ ಮೋಕ್ಷ ಪದೇಚ್ಛವಃ ಏವಂ ಅಘೋಷಯತ್ ರಾಮಃ ಧೂತೈಃ ದಿಕ್ಷು ಸಮಸ್ತಶಃ" ಅಂದರೆ ನನ್ನ ಅವತಾರಕಾಲ ಸಮಾಪ್ತಿ ಆಯಿತು. ನಾನು ಪರಂಧಾಮಕ್ಕೆ (ಮೋಕ್ಷಕ್ಕೆ) ಹೊರಡುತ್ತಿದ್ದೇನೆ. ಮೋಕ್ಷವನ್ನು ಹೊಂದುವ ಅಪೇಕ್ಷೆವುಳ್ಳವರೆಲ್ಲರೂ ನನ್ನ ಜೊತೆಗೆ ಬನ್ನಿರಿ ಎಂದು ಡಂಗೂರ ಸಾರಿದರು. ಆಗ ಅನೇಕ ಇರುವೆ ಮೊದಲಾದ ಜೀವಿಗಳು ಭಗವಂತನ ಜೊತೆಗೆ ಹೊರಟವು. ಅಂದರೆ ಸಾಧನೆ ಪೂರ್ತಿಯಾದವರು ಭಗವಂತನ ಜೊತೆಗೆ ಹೊರಟರು ಎಂದು ಅಭಿಪ್ರಾಯ. ಇಂತಹ ಪರಮ ಕರುಣಾಳು ಆದ ಭಗವಾನ್ ಶ್ರೀರಾಮನನ್ನು ನಾವುಗಳೆಲ್ಲರೂ ಆರಾಧಿಸಿ, ಭಜಿಸಿ, ಪೂಜಿಸಿ ಕೃತಕತ್ಯರಾಗೋಣ.

ನಮ್ಮ ಸಿದ್ಧಾಂತದಲ್ಲಿ ಸ್ವಾಮಿಭೃತ್ಯಭಾವ ವಿಶೇಷವಾಗಿ ಹಾಸು ಹೊಕ್ಕಾಗಿದೆ. ಅಂದರೆ ನೀನೇ ನನ್ನಸ್ವಾಮಿ! ನಾನು ನಿನ್ನ ದಾಸ ಎಂಬ ನೈಜವಾದ ಭಾವನೆಯುಕ್ತರಾಗಿ ಭಗವಂತನನ್ನು ಆರಾಧಿಸುವುದು. ಈ ಭಾವಯುಕ್ತರಾಗಿ ಆರಾಧಿಸಿದರೆ ಭಗವಂತನ ಅನುಗ್ರಹ ಸಾಧ್ಯವಾಗುತ್ತದೆ. ಇದನ್ನೇ ಜ್ಞಾನಿವರೇಣ್ಯರುಗಳು ತಿಳಿಗನ್ನಡದಲ್ಲಿ ಅರುಹಿ ಅನುಗ್ರಹಿಸಿದ್ದಾರೆ. ಇದನ್ನೇ ಶಾಸ್ತ್ರಗಳಲ್ಲಿಯೂ ಪರೋಕ್ಷ ಪ್ರತ್ಯಕ್ಷ ರೂಪದಲ್ಲಿ ತಿಳಿಸಿರುತ್ತಾರೆ. ಇದನ್ನೇ ಶ್ರೀಹನುಮಂತದೇವರು ನುಡಿದು, ನುಡಿದಂತೆ (ಅನುಸರಿಸಿ) ನಡೆದಿದ್ದಾರೆ. ದಾಸ್ಯಭಾವದಿಂದ ಶ್ರೀರಾಮ ದೇವರ ಸೇವೆಯನ್ನು ಭಕ್ತಿಯಿಂದ ಮಾಡಿದ್ದಾರೆ. ಲಂಕೆಯ ಪ್ರವೇಶಿಸಿದಾಗ ರಾವಣನು ಹನುಮಂತ ದೇವರನ್ನು ಯಾರು ನೀನು ಎಂದು ಗರ್ವದಿಂದ ಪ್ರಶ್ನಿಸಿದಾಗ ಆಗ ಅವರು ನಾನು ಶ್ರೀರಾಮನಧೂತ ಎಂದಿದ್ದಾರೆ.

"ದಾಸೋಹಂ ಕೋಸಲೇಂದ್ರಸ್ಯ" ಅಂದರೆ ನಾನು ಶ್ರೀರಾಮ ದೇವರ ದಾಸ, ಸೇವಕನೆಂದು ಗರ್ವದಿಂದ ದಿಟ್ಟತನದಿಂದ ಗತ್ತಾಗಿ ವಿನಯಶೀಲರಾಗಿ ಉತ್ತರಿಸಿದ್ದಾರೆ.

ಈಶ-ದಾಸಭಾವ ಅನ್ನುವುದು ಮೋಕ್ಷದಲ್ಲಿಯೂ ಇದೆ. ಅಲ್ಲಿಯೂ ಸಹ ನಾವು ಭಗವಂತನ ದಾಸರೇನೆ ಅವನೇ ನಮ್ಮ ಸ್ವಾಮಿಯಾಗಿಯು, ಹಾಗೂ ನಿಯಾಮಕ, ನಿಯಮ್ಯ ಭಾವ ಮುಂದುವರೆಯುತ್ತದೆ. ನಾವು ಎಂದಿಗೂ ಭಗವಂತನಾಗುವುದಿಲ್ಲ ಅವನೇ ನಮಗೆ ಗತಿ ಪ್ರದನಾಗಿದ್ದಾನೆ.

ಶ್ರೀರಾಮಚಂದ್ರದೇವರ ದಾಸ ಧೂತ, ಸೇವಕ ಎನ್ನುವ ಅಭಿಪ್ರಾಯ ತಿಳಿಯೋಣ. ಕೆಲವರ ಮನಸಿನಲ್ಲಿ ನಾನು ಸೇವಕ ಎಂದು ಹೇಳಲು ಹಿಂಜರಿಯುತ್ತಾರೆ, ಅಪಮಾನ ಎಂಬ ಭಾವನೆಯಿಂದ ಜೀವಿಸುತ್ತಿರುತ್ತಾರೆ. ಆದರೆ ಜೀವೋತ್ತಮರಾದ, ಸಕಲ ಜೀವರ ಮುಖ್ಯ ಅಸ್ಥಿತ್ವಕ್ಕೇನೆ ಮೂಲ ಮುಖ್ಯ ಕಾರಣರಾದ, ಸಕಲ ದೇವತೆಗಳಿಗೂ ನಿಯಾಮಕ



ರಾದ, ಚರಾ-ಅಚರ ಪ್ರಂಪಚಕ್ಕೂ ಮೂಲ ಮುಖ್ಯ ಕಾರಣ ರಾದ ಶ್ರೀಹನುಮಂತದೇವರು ನಾನು ರಾಮ ದೇವರ ಸೇವಕ, ದಾಸನೆಂದು ಸಂತೋಷದಿಂದ ಉತ್ತರಿಸಿದ್ದಾರೆ.

ದಾಸ ಎಂದು ಹೇಳಿದಾಗ ನಮ್ಮಗಳ ಯೋಗಕ್ಷೇಮವನ್ನು ಭಗವಂತನೇ ವಹಿಸಿಕೊಳ್ಳುತ್ತಾನೆ. ನಮಗೆ ತಲೆ ಬಿಸಿ ಇರುವುದಿಲ್ಲ. ಆದ್ದರಿಂದ ಶ್ರೀಹನುಮಂತದೇವರ ಮಾತಿನಂತೆ ನಾವುಗಳು ಜೀವಿಸಿದರೆ ಜೀವನ ಸೌಖ್ಯವಾಗಿರುತ್ತದೆ, ಮುಂದುವರೆಸುತ್ತ ತಂದೆಯ ಅಧೀನರಾಗಿ ಮಕ್ಕಳು ಇರುವುದು ಶಿಷ್ಯರು ಗುರುಗಳ ಅಧೀನರಾಗಿರುವುದು. ಗಂಡನ ಅಧೀನಳಾಗಿ ಹೆಂಡತಿ ಇರುವುದು ಭೃತ್ಯನಾದವನು ಯಜಮಾನನ ಅಧೀನರಾಗಿರುವುದು. ರಾಜರ ಅಧೀನರಾಗಿ ಪ್ರಜೆಗಳಿರುವುದು ಜಗತ್ತಿನಲ್ಲಿ ಕಂಡಿದೆ. ಈ ರೀತಿ ಜೀವಿಸುವುದು ಭೂಷಣವೇ ಹೊರತು ಭೂಷಣವಲ್ಲ.ದಾಸನ ಮಾಡಿಕೋ ಎನ್ನ ಶ್ರೀಪುರಂದರದಾಸರು ಭಗವಂತನನ್ನು ನಮ್ಮಗಳ ಪರವಾಗಿ ಪ್ರಾರ್ಥಿಸಿದ್ದಾರೆ. ಅವರ ದಾಸರಾಗಿಯೇ ಆರಾಧಿಸುತ್ತಿದ್ದಾರೆ. ದಾಸಭಾವ ಅಂದರೆ  ಸದಾಕಾಲ ಭಗವಂತನ ದಾಸನಾಗಿ ಇರುವಂತಹುದು. ಭಗವಂತನಾದ ಶ್ರೀರಾಮದೇವರ ಧೂತರಾಗಿಯೇ ಹನುಮಂತ ದೇವರು ಸದಾಕಾಲ ಇರುತ್ತಾರೆ ಇದ್ದಾರೆ. ರಾಮ ಧೂತರಾದ ಹನುಮಂತ ದೇವರ ಸಂಸ್ಮರಣೆ ನಮ್ಮಗಳಿಗೆ ಗತಿಪ್ರದವಾಗಿದೆ. ಗತಿಕೆಟ್ಟ ಸದ್ ವೈಷ್ಣವರನ್ನು ಸಲುಹಿ ಅನುಗ್ರಹಿಸಿದ್ದಾರೆ. ಗತಿಕೆಟ್ಟ ಅಂದರೆ ಜ್ಞಾನಶೂನ್ಯರಾದವರೆಂದು ಅಭಿಪ್ರಾಯ. ಇಂತಹ ರಾಮಧೂತರಾದ ಶ್ರೀಹನುಮಂತ ದೇವರ ದಾಸರಾಗಿ ನಾವುಗಳು ಜೀವಿಸಿ,ತತ್ವಜ್ಞಾನವನ್ನು ಹೊಂದೋಣ.



# ತಿರುಮಲೆಯಲ್ಲಿ ಪ್ಲಾಸ್ಟಿಕ್ ನಿಷೇಧ

ತಿರುಮಲೆಯ ಪರ್ಯಾವರಣ ಪರಿರಕ್ಷಣೆಯ ದೃಷ್ಟ್ಯಾ, ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಹಾಗಾಗಿ ಕೆಳಗಿನ ಹಲವು ಸೂಚನೆಗಳನ್ನು  ತಪ್ಪದೆ ಪಾಲಿಸಬೇಕೆಂದು ಸೂಚಿಸಲಾಗಿದೆ.  ಪ್ಲಾಸ್ಟಿಕ್ ವಸ್ತುಗಳನ್ನು ಮುಖ್ಯವಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು (ಪಾಲಿಥಿನ್ ಚೀಲಗಳು) ಬಿಸಾಡುವಾಗ  ಅವುಗಳಿಗಾಗಿ ಅಲ್ಲಲ್ಲಿ  ಇಡಲಾಗಿರುವ ಕಸದ ಬುಟ್ಟಿಗಳಲ್ಲಿ ಮಾತ್ರವೇ ಹಾಕಬೇಕು. ಎಲ್ಲೆಂದರಲ್ಲಿ ಬಿಸಾಡಬಾರದು.ಪಾದಚಾರಿಗಳು ಮೆಟ್ಟಿಲದಾರಿಯಲ್ಲಿ ಬರುವಾಗ ಪ್ಲಾಸ್ಟಿಕ್ ನೀರಿನ ಬಾಟಲುಗಳನ್ನು, ಪ್ಲಾಸ್ಟಿಕ್ ಬ್ಯಾಗ್‌ಗಳನ್ನು, ಪ್ಲಾಸ್ಟಿಕ್‌ನ ವ್ಯರ್ಥ ಪದಾರ್ಥಗಳನ್ನು ಅವುಗಳಿಗಾಗಿ ಅಲ್ಲಲ್ಲಿ ಇಟ್ಟಿರುವ ಕಸದ ಬುಟ್ಟಿಗಳಲ್ಲಿಯೇ ಹಾಕಬೇಕು. ದಾರಿಯಲ್ಲಿ ಬಿಸಾಡಬಾರದು. ತಿರುಮಲೆಯಲ್ಲಿ ವ್ಯಾಪಾರಿಗಳು, ಹೋಟೆಲ್‌ನವರು, ಪುರಪ್ರಜೆಗಳು, ನಲವತ್ತೇಳು ಮೈಕ್ರಾನುಗಳಿಗಿಂತ  ಕಡಿಮೆ ಗೇಜಿನ ಪ್ಲಾಸ್ಟಿಕ್ ವಸ್ತುಗಳನ್ನು, ಚೀಲಗಳನ್ನು, ಪ್ಲಾಸ್ಟಿಕ್ ಪೇಪರನ್ನು ಬಳಸಬಾರದು. ಟೀ-ಕಾಫಿಗಳಿಗಾಗಿ  ಪ್ಲಾಸ್ಟಿಕ್  ಕಪ್‌ಗಳನ್ನು ಬಳಸಬಾರದು. ಮುಖ್ಯವಾಗಿ ಹೋಟೆಲಿನ ಯಜಮಾನರು  ಅಂತಹ ವಸ್ತುಗಳನ್ನು ಬಳಸಿದರೆ  ಶಿಕ್ಷಾರ್ಹರಾಗುತ್ತಾರೆ. ತಿರುಮಲೆಯಲ್ಲಿ  ಪ್ಲಾಸ್ಟಿಕ್ ವಸ್ತುಗಳ  ಬಳಕೆಯನ್ನು ನಿಲ್ಲಿಸಿರಿ. ತಿರುಮಲೆಯ ಪಾವಿತ್ರ್ಯವನ್ನೂ,  ಪರಿಶುಭ್ರತೆಯನ್ನೂ ಕಾಪಾಡಿರಿ.





# ಏಕಾದಶೀ ವ್ರತ

ಪ್ರಭಂಜನ ಗುತ್ತಲ್

ಭಾರತೀಯ ಸಂಸ್ಕೃತಿಯಲ್ಲಿ ಏಕಾದಶಿಗೆ ಬಹಳ ಮಹತ್ವವುಂಟು.ಅದಕ್ಕೆ ಹರಿದಿನ ಪುಣ್ಯದಿನ ಎಂದು ಕರೆಯುತ್ತಾರೆ. ದಶಮಿ, ಏಕಾದಶಿ, ದ್ವಾದಶಿ ಇವು ಮೂರೂ ಮಹತ್ವದ ಪವಿತ್ರ ದಿನಗಳು. ಇವುಗಳಿಗೆ ತಿಥಿ ತ್ರಯ ಎಂದು ಹೆಸರು.ಇಂಥ ಪಾವನ ದಿನಗಳಲ್ಲಿ ಕೈಕೊಂಡ ಕಾರ್ಯ ಸಮಾಜಕ್ಕೆ ಕಲ್ಯಾಣವಾಗುವುದರಲ್ಲಿ ಸಂದೇಹವಿಲ್ಲ. ಏಕಾದಶಿಯು ಜಾತಕದಲ್ಲಿ ಶನಿ ಮೊದಲಾದ ಗ್ರಹಗಳ ದೋಷಗಳನ್ನೂ ಪರಿಹರಿಸುವ ಪ್ರಮುಖ ಸಾಧನ ಎಂಬ ಅಪೂರ್ವ ವಿಷಯವನ್ನು ಮಧ್ವಾಚಾರ್ಯರು ಬೆಳಕಿಗೆ ತಂದರು. ಪಾಪಗಳನ್ನು ಪರಿಹರಿಸುವ ಮೂಲಕ ನರಕದ ಹಾದಿಯನ್ನು ತಪ್ಪಿಸುವ ಸಾಧನ ಎಂಬ ಅಪೂರ್ವ ವಿಷಯವನ್ನು ಮಧ್ವಾಚಾರ್ಯರು ಬೆಳಕಿಗೆ ತಂದರು. ಪಾಪಗಳನ್ನು ಪರಿಹರಿಸುವ ಮೂಲಕ ನರಕದ ಹಾದಿಯನ್ನು ತಪ್ಪಿಸುವ ಸಾಧನ ಎಂದೂ ತೋರಿಸಿಕೊಟ್ಟರು.

ಏಕಾದಶೀ ಸಮಂ ಕಿಂಚಿತ್<br>
ಪಾಪತ್ರಾಣಂ ನ ವಿದ್ಯತೇ।<br>
ವ್ಯಾಜೇನಾಪಿ ಕೃತಾ ರಾಜನ್<br>
ನ ದರ್ಶಯತಿ ಭಾಸ್ಕರೀಮ್।

ಭಾಸ್ಕರನ ಪುತ್ರರಾದ ಯಮ ಮತ್ತು ಶನಿ ಇಬ್ಬರ ಅನುಗ್ರಹವು ಲಭಿಸುವುದು ಎಂದರ್ಥ. ಶ್ರೀ ಹರಿಯು ಸಕಲಗ್ರಹಗಳಿಗೂ ಮೂಲ ಬಲ ಅವನಿಗೆ ಪ್ರಿಯವಾದ ಹರಿದಿನದ ಆಚರಣೆಯಿಂದ ಗ್ರಹದೋಷ ಪರಿಹಾರವಾಗುವುದರಲ್ಲಿ ಸಂಶಯವೇ ಇಲ್ಲ. "ಸಕಲಗ್ರಹಬಲ ನೀನೇ ಸರಸಿಜಾಕ್ಷ" ಈ ಹರಿದಿನಗಳಲ್ಲಿ ಪ್ರಪಂಚದ ವಾತಾವರಣವೇ ಪ್ರಶಾಂತವಿದ್ದು ಸೂರ್ಯನ ಕಿರಣಗಳು ಪರಿಶುದ್ಧ ಪ್ರಮಾಣದಲ್ಲಿ ದ್ವಾವ ಪ್ರಿಥಿವಿಯನ್ನು ವ್ಯಾಪಿಸಿರುತ್ತವೆ.ಆದುದರಿಂದಲೇ ನಮ್ಮ ಹಿಂದಿನ ಮುನಿ ಮಹರ್ಷಿಗಳು ಏಕಾದಶಿ ದಿನ ಉಪವಾಸ ಮಾಡಿ ಶಾಂತ ಕಾಂತವಾಗಿ ಶರೀರ,ಮನಸ್ಸು ಹಾಗೂ ಆತ್ಮಗಳನ್ನು ಶುದ್ಧೀಕರಿಸಿ ಉದ್ಧಾರವಾಗಬೇಕೆಂದು ಅನುಶಾಸನ ಮಾಡಿದ್ದಾರೆ.ಅಂಬರೀಶ ರುಕ್ಮಾಂಗದ ಮೊದಲಾದ ಹಿಂದಿನ ಕಾಲದ ಮಹಾರಾಜರು ಈ ವ್ರತದ ಅನುಷ್ಠಾನವನ್ನು ತಮ್ಮ ರಾಜ್ಯಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಿದ್ದರೆಂಬ ಉಲ್ಲೇಖಗಳು ಇದರ ಸಾರ್ವಜನಿಕ ಮತ್ತು ಸಾರ್ವತ್ರಿಕ ಮಹತ್ವವನ್ನು ಬಿಂಬಿಸುತ್ತವೆ. ಉಪವಾಸವ್ರತವು ಆಧ್ಯಾತ್ಮಿಕ ಸಾಧನೆಗೆ ಪ್ರಮುಖ ಅಂಗ ಎಂಬ ವಿಚಾರ ಭಗವದ್ಗೀತೆಯಲ್ಲೂ ಬಂದಿದೆ.

ವಿಷಯಾ ವಿನಿವರ್ತಂತೆ ನಿರಾಹಾರಸ್ಯ ದೇಹಿನಃ<br>
ರಸವರ್ಜಮ್ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ।

ಏಕಾದಶೀ ವ್ರತವು ಜಾತಿಮತಗಳನ್ನು ಮೀರಿ ಸರ್ವರಿಗೂ ಕಡ್ಡಾಯವಾದ ಸಾರ್ವಜನಿಕ ಸಾರ್ವಕಾಲಿಕ ಮಹಾವ್ರತ ಎಂಬುದಾಗಿ ಮಧ್ವ ದರ್ಶನವು ಸಾರಿದೆ. ಶಾಸ್ತ್ರದಲ್ಲಿ ಉಪದಿಷ್ಟವಾದ ಇಂದ್ರಿಯ ನಿಗ್ರಹವೂ ಉಪವಾಸ ವ್ರತವನ್ನೇ ಸೂಚಿಸುತ್ತದೆ.ಇಂದ್ರಿಯಗಳನ್ನು ಮತ್ತು ಅವುಗಳಿಗೆ ಪ್ರೇರಕವಾದ ಮೂಲ ಪ್ರವೃತ್ತಿಗಳನ್ನು ಕ್ಷೇಮಕರವಾದ ದಾರಿಯಲ್ಲಿ ಪ್ರವೃತ್ತಿ ಗೊಳಿಸುವ ಸುಲಭವಾದ ದಾರಿಯೇ ಏಕಾದಶೀ ಉಪವಾಸ. ಹದಿನೈದು ದಿನಗಳಲ್ಲಿ ಒಂದು ದಿನ ಆಹಾರವು ತಪ್ಪಿದಲ್ಲಿ ದೇಹಕ್ಕೆ ಯಾವ ಕೆಡಕೂ ಉಂಟಾಗುವುದಿಲ್ಲ. ಮಾತ್ರವಲ್ಲದೆ ಅಂತಹ ನಿಯಮಿತ ಉಪವಾಸದಿಂದ ದೇಹದ ಆರೋಗ್ಯಕ್ಕೆ ಅತಿ ಹೆಚ್ಚಿನ ಪ್ರಯೋಜನವೇ ಇದೆ ಎಂಬುದಾಗಿ ಆಯುರ್ವೇದ, ಅಲೋಪತಿ ಮೊದಲಾದ ಎಲ್ಲಾ ವೈದ್ಯ ಪದ್ಧತಿಗಳೂ ಒಪ್ಪುತ್ತವೆ. ಉಪವಾಸದಿಂದ ದೇಹದೊಳಗಿನ ವಿಷವಸ್ತುಗಳೆಲ್ಲ ನಾಶ ಹೊಂದುವುದು ಎಂಬ ವಿಶೇಶಾಂಶವನ್ನು ವೈಜ್ಞಾನಿಕ ಸಂಶೋಧನೆ ದೃಢ ಪಡಿಸಿವೆ. Fasting can save your life (by. Dr. Herbert M. Shelton) ಎಂಬ ಪುಸ್ತಕದಲ್ಲಿ ನೂರಾರು ನಿದರ್ಶನಗಳನ್ನಿತ್ತು ಉಪವಾಸವ್ರತವು ಕ್ಯಾನ್ಸರ್ ಹೃದ್ರೋಗದಂತಹ ಮಹಾರೋಗಗಳನ್ನೂ ಸಹ ನಿವಾರಿಸುವ ಶ್ರೇಷ್ಠ ಸಾಧನ ಎಂದು ನಿರೂಪಿಸಿಲಾಗಿದೆ.

ಸದಸದ್ವಿವೇಕ ಬುದ್ಧಿಯಿಂದ ಇಂದ್ರೀಯಗಳನ್ನು ಮತ್ತು ತತ್ಪ್ರೇರಕ ಮೂಲ ಪ್ರವೃತ್ತಿಗಳನ್ನು ಉಪವಾಸವ್ರತಗಳಿಂದ ಸಂಯಮದಲ್ಲಿಡುವುದೇ ಭಾಗವತದಲ್ಲಿ ತಿಳಿಸಿರುವ ಮೂವತ್ತು ಧರ್ಮಗಳಲ್ಲಿ ಒಂದಾದ ದಮವಾಗಿದೆ.

"ದಮ ಇಂದ್ರಿಯ ನಿಗ್ರಹ "( ಭಾಗವತ)

ಹೀಗೆ ಸಕಲ ಇಂದ್ರಿಯಗಳನ್ನು ವ್ಯರ್ಥಮಾಡಿಕೊಳ್ಳದ ಅವುಗಳನ್ನು ಭಗವತ್ಸಂಭಂದಿಯಾದ ಕ್ರಿಯೆಗಳಲ್ಲಿ ತೊಡಗಿಸಿ ಸಾರ್ಥಕಗಳನ್ನಾಗಿ ಮಾಡಿಕೊಳ್ಳುವುದೇ ನಿಜವಾದ "ಬ್ರಹ್ಮಚರ್ಯ"ವಾಗಿದೆ ಇಂತಹ ಬ್ರಹ್ಮಚರ್ಯ ಧರ್ಮವನ್ನು ಪರಿಪಾಲಿಸಿದವನೇ ಅಮಲ ಭಕ್ತಿಗೆ ಅಧಿಕಾರಿಯಾಗುತ್ತಾನೆ.

- ಶ್ರೀಮದ್ಕೃಷ್ಣಾರ್ಪಣಮಸ್ತು

# ಗೋದೆಯ ಶರಣಾಗತಿ ಮಹಿಮೆ

– ಶ್ರೀಮತಿ. ಎಸ್. ಕಲ್ಯಾಣಿ




ಗೋದಾದೇವಿ ತನ್ನನ್ನು ಸ್ವತಃ ಒಬ್ಬಳು ಗೋಪಿಯೆಂದು ತಿಳಿದಿದ್ದಾಳೆ. ಎಲ್ಲ ಗೋಪಿಯರು ಹೇಗೆ ಕೃಷ್ಣನಲ್ಲಿ ಶರಣಾಗತಿಯನ್ನು ಹೊಂದಿದರೋ ಹಾಗೆಯೇ ತಾನು ಸ್ವತಃ ತನ್ನ'ತಿರುಪ್ಪಾವೈ' ಕೃತಿಯ ಮೂಲಕ ಶರಣಾಗತಿಯನ್ನು ಮಾಡುತ್ತಾಳೆ. ಅದರಲ್ಲಿ ಸ್ವರೂಪ,ಉಪಾಯ ಮತ್ತು ಪುರುಷಾರ್ಥ ಇತ್ಯಾದಿ ಮೂರು ವಿಷಯಗಳ ವಿವರಣೆ ಇದೆ.ಭಗವಂತನನ್ನೇ ಸರ್ವಸ್ವವೆಂದು ತಿಳಿದು ಅವನ ಚರಣಗಳಲ್ಲಿ ಶರಣಾಗತಳಾದಳು,ಜ್ಞಾನ,ಅನುಷ್ಠಾನ ಮತ್ತು ಅದರಿಂದ ಪಡೆಯಬಹುದಾದ ಫಲ ಎಲ್ಲವನ್ನು ಮೂವತ್ತು ಪದ್ಯಗಳಲ್ಲಿ ತಿಳಿಸಿದ್ದಾಳೆ. ಆದರೆ ಇದರ ಸಾರವೆಲ್ಲಾ ಮೊದಲ ಪದ್ಯದಲ್ಲಿ ವ್ಯಕ್ತವಾಗಿದೆ. ಪ್ರಪತ್ತಿ ನಿಷ್ಠೆಯ ಪರಿಶ್ರಮ, ಪ್ರಪತ್ತಿಯ ವಾಚಕ ಶುಭನಾಮ 'ನಾರಾಯಣ' ಶಬ್ದ, ಪ್ರಪನ್ನಾಧಿಕಾರಿಯ ಸ್ವರೂಪ ಮುಂತಾದುವನ್ನು ಮೊದಲ ಐದು ಪದ್ಯಗಳಲ್ಲಿ ವರ್ಣಿಸಿದ್ದಾಳೆ. ಬೇರೆಲ್ಲ ಉಪಾಯಗಳನ್ನು ಬಿಟ್ಟು ಕೇವಲ ನಾರಾಯಣನನ್ನೇ ಉಪಾಯವೆಂದು ತಿಳಿದು ಅವನನ್ನು ಆಶ್ರಯಿಸುವುದೇ ಅಧಿಕಾರ.ಈ ಶರಣಾಗತಿ ಅಥವಾ ಪ್ರಪತ್ತಿ ತತ್ವವನ್ನು ಆಂಡಾಳ್ ಎಂದು ಕರೆಸಿಕೊಳ್ಳುವ ಗೋದಾದೇವಿ ನಿರೂಪಿಸಿದ್ದು ಹೀಗೆ :

ಕರವೈಹಲ್ ಪಿನಶೆನ್ರುರ ಕಾನದ್ ಶೇರಂದುಣ್ಬೊಂ,
ಅರಿವೊನ್ರು ಮಿಲ್ಲಾದ ಆಯ್‌ಕುಲತ್ತು ಉನ್‌ತನ್ನೈ- ಪಿರವಿ
ಪೆರುನ್ದನ್ನೈ ಪುಣ್ಣಿಯಮ್ ಯಾಮುಡೈಯೇಮ್
ಕುರೈವೊನ್ರುಮಿಲ್ಲಾದ ಗೋವಿಂದಾ ! ಉನ್ ತನ್ನೋಡು
ಉರವೇಲ್ ನಮ್ಮಕ್ಕಿ ಒೞಿಕ್ಕವೊಳಿಯಾದು, ಅರಿಯಾದ
ಪಿಳ್ಳೈಗಳೋಮ್, ಅನ್ಬಿನಾಲ್  ಉನ್ ತನ್ನೈ
ಚಿರುಪೇರಳೈತನವುಮ್ ಶೀಱಿಯರುಳಾದೇ ಇರೈವಾ ! ನೀ
ತಾರಾಮ್ ಪರೈಯೇಲೋರೆಮ್ಬಾವಾಯ್ ॥

ನಾವು ಅರಿವಿಲ್ಲದವರಾದ್ದರಿಂದ ಗೋವುಗಳ ಹಿಂದೆ ಹಿಂದೆ ಹೋಗುತ್ತೇವೆ. ಗೋವುಗಳನ್ನು ಬಿಟ್ಟು ಪಟ್ಟಣಕ್ಕೆ ಹೋಗಲು ಮನಸ್ಸು ಬರುತ್ತಿಲ್ಲ. ಕಾಡಿನಲ್ಲಿ ಸಿಗುವ ಗೆಣಸು ಗೆಡ್ಡೆಗಳನ್ನೇ ತಿಂದು ಸಂತೃಪ್ತರಾಗಿರುತ್ತೇವೆ. ಈ ಜನ್ಮದಲ್ಲಿ ಇದೇ ಪುರುಷಾರ್ಥವೆಂದು ತಿಳಿದು ಇದರಿಂದ ನಿನ್ನನ್ನು ಹೊಂದುವುದೇ ಕರ್ಮಯೋಗವೆಂದು ಭಾವಿಸುತ್ತೇವೆ.

ಉ ಅರಿವೊನ್ರು ಮಿಲ್ಲಾದ ಆಯಕುಲತ್ತು

ಪೂರ್ವಜನ್ಮದಲ್ಲಿ ಮಾಡಿದ ಒಳ್ಳೆಯ ಕೆಲಸಗಳ ಅರಿವೂ ನಮಗಿಲ್ಲ. ಆತ್ಮಜ್ಞಾನ ಇಲ್ಲವೇ ಶಕ್ತಿಯೂ ಇಲ್ಲ. ನಾವು ಅಜ್ಞಾನಿಗಳು ತಿಳುವಳಿಕೆ ಇಲ್ಲದವರು, ಗೋಪ ಕುಲ ದಲ್ಲಿ ಹುಟ್ಟಿದ್ದೇವೆ.

ಉನ್‌ತನ್ನೈ ಪಿರವಿ ಪೆರುನ್ದನೈ
ಪುಣ್ಣಿಯಮ್ ಯಾಮುಡೈ ಯೋಮ್

ನಾವಿರುವಲ್ಲಿಯೇ ನಿನ್ನ ಸ್ಮರಣೆ ಮಾಡುತ್ತೇವೆ.ನಮ್ಮ ವರ್ಗದಲ್ಲಿ ಜನ್ಮ ತಾಳಿದ್ದು ಪುಣ್ಯವೆಂದು ಭಾವಿಸಿದ್ದೇವೆ.

ಕುರೈವೊನ್ರುಮಿಲ್ಲಾದ ಗೋವಿಂದಾ !

ಹೇ ಭಗವಂತ! ನಿನಗೆ ಯಾವ ರೀತಿಯ ದುಃಖವೂ ಇಲ್ಲ.ಎಲ್ಲ ರೀತಿಯ ಜ್ಞಾನಶಕ್ತಿಯಿಂದ ಪರಿಪೂರ್ಣನಾಗಿ ದ್ದೀಯೆ ಎಲ್ಲ ಗುಣಗಳಿಂದ ವಿಭೂಷಿತನಾಗಿದ್ದೀಯೆ. ಗೋವು ಗಳನ್ನು ಮೇಯಿಸಿದ ಗೋವಿಂದನ ಪಟ್ಟಾಭಿಷೇಕವಾಗಿದೆ. ಗೋವರ್ಧನಗಿರಿಯನ್ನು ಛತ್ರಿಯಂತೆ ಎತ್ತಿ ನಮ್ಮೆಲ್ಲರನ್ನು ರಕ್ಷಿಸಿದೆ. ನಿನ್ನ ಸೌಲಭ್ಯ ವರ್ಣನಾತೀತ. ಇದೆಲ್ಲವೂ ನಮ್ಮ ಮೇಲಿನ ನಿನ್ನ ವಾತ್ಸಲ್ಯ."ಉನ್ ತನ್ನೋಡು ಉರವೇಲ್ ನಮಕ್ಕು ವೊಳಿಯಾದು , ನಾನ್ ಉನ್ನೈಯನ್ನಿಯನಾಲೆ - ಕಂಡಾಯ್‌ನಾರಣನೆ"

- ನಮ್ಮಿಬ್ಬರ ಸಂಬಂಧ ಬೇರ್ಪಡಿಸಿದರೂ ಬೇರೆ ಯಾಗದು, ಇದೇ ಪ್ರಮಾಣ, ನೀನು ಬಿಡಲಾರೆ, ನಾನೂ ಬಿಟ್ಟಿರಲಾರೆ ಇಬ್ಬರೂ ಬಿಡಲು ಯತ್ನಿಸಿದರೂ ಸಹ ಬಿಡಲಾಗದು.

'ಅರಿಯಾದ ಪಿಳ್ಳೈಗಳೋಮ್'

ನಾವು ಏನು ಅರಿಯದ ಗೋಪ ಬಾಲೆಯರು ನಿನ್ನ ಪ್ರಿಯ ಸಖಿಯಾದ್ದರಿಂದ ಅಜ್ಞಾನದಿಂದ ಏನೇ ಹೇಳಿದ್ದರೂ ಅದನ್ನು ನೀನು ಸಹಿಸಿಕೊ ವಯಸ್ಸಿನಲ್ಲಿ ನಾವು ಚಿಕ್ಕವರು. ಪ್ರೀತಿಯಿಂದ ಸಿಕ್ಕಿರುವ ಆತ್ಮೀಯತೆಯಿಂದ ನಾನೇನು ಹೇಳು ತ್ತೇನೆ. ಅದು ಅರಿಯಲಾಗದು. ಜನ್ಮತಃ ತಿಳುವಳಿಕೆ ಇಲ್ಲದ ವಳು ನಾನು ಸ್ವಲ್ಪವನ್ನು ತಿಳಿದಿಲ್ಲ.

ಅನ್ಬಿನಾಲ್ ಉನ್ ತನ್ನೈಚಿರು
ಪೇರಳೈತ್ತನವುಮ್ ಶೀಱಿ ಅರುಳಾದೇ

ನಿನ್ನೊಂದಿಗಿನ ಪ್ರೀತಿಯ ದೆಸೆಯಿಂದ ಉಂಟಾದ ವ್ಯಾಮೋಹದ ಸಲುವಾಗಿ ನಿನ್ನನ್ನು ಪುಟ್ಟ ಹೆಸರಿನಿಂದ ಕರೆದೆ ಅದಕ್ಕಾಗಿ ಕೋಪಗೊಳ್ಳ ಬೇಡ ಗೋಪಿಯರು ಶ್ರೀಕೃಷ್ಣ



ಸೌಲಭ್ಯ ಸೌಶೀಲ್ಯಾದಿಗಳನ್ನು ಕಂಡು-ನಾವು ನಿನ್ನನ್ನು ಪರತತ್ವ ವೆಂದು ತಿಳಿದು 'ನಾರಾಯಣ' ಎಂಬ ಹೆಸರಿನಿಂದ ಕರೆದೆವು.ಈ ಅಪಚಾರಕ್ಕಾಗಿ ಕ್ಷಮೆಯನ್ನು ಬೇಡುತ್ತೇನೆ.

'ಇರೈವಾ! ನೀ ತಾರಾಯ್ ಪರೈ'

ನಮ್ಮ ಪ್ರಭುವೇ ! ನಮ್ಮ ಶರೀರಕ್ಕೆ ನೀನು ಶರೀರಿಯಲ್ಲವೇ? ಹೇಗಿದ್ದರೂ ನಿನ್ನ ಆಶ್ರಿತರ ಮಾತುಗಳನ್ನು ಸಹಿಸಿಕೊಳ್ಳುವುದು ಸ್ವಾಮಿಯ ಸೌಲಭ್ಯವಲ್ಲವೇ? ನಿನ್ನ ಕೃಪೆಯಿಂದ ನಮ್ಮನ್ನು ನಿಮ್ಮ ವರನ್ನಾಗಿಸಿಕೊಳ್ಳುವಾಗ, ನಮ್ಮನ್ನು ಬೇರೆಯಾಗಿ ತಿಳಿಯುವುದು ಸರಿಯಲ್ಲ. ನೀನು ನಮ್ಮ ಮನದಭಿಲಾಷೆಯನ್ನು ಪೂರ್ಣಗೊಳಿಸು.

ಅನ್ಯಉಪಾಯಗಳನ್ನು ಬಿಟ್ಟು, ಕೇವಲ ಭಗವಂತನನ್ನೇ ಉಪಾಯವೆಂದು ತಿಳಿದು ಶರಣಾಗತಿ ಹೊಂದುವುದು ಪ್ರಪತ್ತಿ ಮಾರ್ಗಕ್ಕೆ ಲಕ್ಷಣ. ಇದರ ಆರು ತತ್ವಗಳು ಗೋಪಿಯರಿಗೆ ತಿಳಿದಿದ್ದವು. ಗೋಪಿಯರಲ್ಲಿದ್ದ ಆ ಆರು ಅವಶ್ಯತತ್ವಗಳು ತಿರುಪ್ಪಾವೈ ಪದ್ಯಗಳಲ್ಲಿದ್ದು, ಅವುಗಳನ್ನು ಅರಿಯುವುದು ಅವಶ್ಯ.

1. ಮೋಕ್ಷ ಹೊಂದಲು ಅವಶ್ಯಕ 21 ಸುಕೃತಗಳು ನಮ್ಮವಲ್ಲ

2. ಅರಿವೊನ್ರುಮಿಲ್ಲಾದ ಆಯಿಕುಲಮ್' ಈ ಪದ್ಯದಲ್ಲಿ ನನ್ನ ಬಳಿ (ನನ್ನಲ್ಲಿ) ಅರ್ಹತೆ ಇಲ್ಲದಿದ್ದರೂ ಶರಣಾಗತಿ ಹೊಂದುವವಳೆಂದು ಯೋಚಿಸಬೇಕು.



3. ನಮ್ಮ ಸ್ವಭಾವಕ್ಕೆ ಮೂಲಭೂತ ಭಗವಂತನ ಎಲ್ಲ ಗುಣಗಳನ್ನೂ ಧ್ಯಾನಿಸಬೇಕು. ಈ ಭಾವವನ್ನು ಕುರೈವೊನ್ರು ಮಿಲ್ಲಾದ ಗೋವಿಂದ ಎನ್ನುವಲ್ಲಿ ಕಾಣಬಹುದು.

4. ನಮಗೂ-ಭಗವಂತನಿಗೂ ನಡುವಣ ಸಂಬಂಧವನ್ನು ಚೆನ್ನಾಗಿ ತಿಳಿಯಬೇಕು. ಈ ಸಂಗತಿ ಉನ್ ತನ್ನೋಡು **"ಉರವೇಳ್ ನಮಕ್ಕಿಜ್ಗೋಲಿಕೆ ವೊಲಿಯಾದು"** ಎನ್ನುವುದರಿಂದ ತಿಳಿಯಲ್ಪಡುತ್ತದೆ.

5. ಇದುವರೆಗೆ ಮಾಡಿರುವ ಅಪಚಾರಗಳಿಗಾಗಿ ಭಗವಂತನಲ್ಲಿ ಕ್ಷಮೆ ಯಾಚಿಸುವ ಅವಶ್ಯಕತೆ ಇದೆ. ಈ ವಿಷಯವನ್ನು - **"ಶಿರುಪೇರೈ ಅಲೈತ್ತನವುಮ್ ಶೀಲಿಯರುಳಾದೆ"** ಎನ್ನುವುದರಿಂದ ತಿಳಿಯಬಹುದು.

6. ಭಗವಂತನಲ್ಲಿ ಪುರುಷಾರ್ಥವನ್ನು ಬೇಡುವುದೂ ಸಹ ಒಂದು ಅಂಶ.

ಅದು ಈ ಪಾಶುರದಿಂದ ವ್ಯಕ್ತವಾಗುತ್ತದೆ.

**'ಇರೈವಾ ನೀ ತಾರಾಯ ಪರೈ',** ರೋಗಿಯೊಬ್ಬ ನೋವಿಗೆ ಕಾರಣವನ್ನು ತಿಳಿಯಲು ವೈದ್ಯರ ಬಳಿಗೆ ಹೋಗಿ ತಾನು ಸ್ವತಃ ಮಾಡಿಕೊಂಡ ಅಪಥ್ಯವನ್ನು ತಿಳಿಸುತ್ತಾನೆ. ತಿಳುವಳಿಕೆಯುಳ್ಳ ವೈದ್ಯರಿಂದ ತನ್ನ ನೋವನ್ನು ಶಮನಗೊಳಿಸಿಕೊಳ್ಳುತ್ತಾನೆ,ಅದರಂತೆಯೇ ಶರಣಾಗತಿ ಮಾರ್ಗದಲ್ಲಿ ಹೋಗುವವರೂ ತನ್ನ ತಪ್ಪುಗಳನ್ನು ಸ್ಮರಿಸಿ ಭಗವಂತನಲ್ಲಿ ಕ್ಷಮೆ ಯಾಚಿಸುತ್ತಾನೆ. ಅದರಿಂದ ಪುರುಷಾರ್ಥ ಹೊಂದುತ್ತಾನೆ. ಗೋಪಿಯರ ಪ್ರೇಮ ವೇದನೆ ಸಾಮಾನ್ಯ ಮಟ್ಟದ್ದಾಗಿರಲಿಲ್ಲ. ಅದೆಲ್ಲವೂ ಕೃಷ್ಣನ ಮೇಲಿಟ್ಟ ಪ್ರೀತಿಯಿಂದಲೇ ಅಧಿಕವಾಗಿ ಉಂಟಾದ ನೋವಾಗಿತ್ತು.

**"ಮಾಲೆ ಮಣಿವಣ್ಣಾ"** ಎನ್ನುವುದರಿಂದ ಔಷಧವು(ಪರಿಹಾರ)ಅವನೇ ಆಗಿದ್ದಾನೆ. ಯಾವಾಗ ನೋವು ನಿವಾರಣೆಯಾಗುತ್ತದೆ ಆಗ ಸಿದ್ಧಿಸುವ ಭೋಗವು ಸಹ ಅವನೇ ಆಗಿರುತ್ತಾನೆ. ಹಾಗಾಗಿ ಪ್ರಪತ್ತಿ ಮಾರ್ಗದಲ್ಲಿ ಈ ಸಾಂಸಾರಿಕ ದುಃಖವನ್ನು ಹೋಗಲಾಡಿಸಲು ಅನುಕೂಲವಾದ ಆರು ಅಂಗಗಳೂ ಸಹ ಭಗವಂತನೇ ಇವೇ ಪ್ರಪತ್ತಿ ಮಾರ್ಗದ ಅಸಾಮಾನ್ಯಶ್ರೇಷ್ಠತೆಯನ್ನು ಕೊಡುತ್ತದೆ. ಗೋಪಿಗಳ ಅಭಿಪ್ರಾಯದಂತೆ ಆಂಡಾಳ್ ಸಹ ತಿರುಪ್ಪಾವೈ ಕೃತಿಯಲ್ಲಿ ಶರಣಾಗತಿ ಧರ್ಮದ ನಿರೂಪಣೆ ಮಾಡಿದ್ದಾಳೆ. ಗೋಪಿಯರು ಕೃಷ್ಣನನ್ನು ಪಡೆದಂತೆ ಗೋದಾದೇವಿಯೂ ಸಹ ಶ್ರೀರಂಗನಾಥ ಸ್ವಾಮಿಯನ್ನು ಪಡೆಯುತ್ತಾಳೆ.

**"ಮಾಯನ್ನೈ ಮನ್ನು**
**ವಡಮಧುರೈಮೈನ್ದನ್ನೈ....**
**ತೂಯೋ ಮಾಯ್ ವನ್ದುನಾಮ್**
**ತೂಮಲರ್ ತೂವಿ ತ್ತೊಳುದು".**

ಆಳ್ವಾರರಂತೆಯೇ ಭಕ್ತಿಗೀತೆಯ ಮಾಲೆಯನ್ನು ಗೋದಾದೇವಿ ಭಕ್ತಿ ಪೂರ್ವಕವಾಗಿ ಕಟ್ಟಿದಳು. ತಾನೇ ದೇವತೆಯಾಗಿ ಪುಷ್ಪಮಾಲೆಯನ್ನು ಧರಿಸಿ ಅನುಭವಿಸಿದ ಏಕಮಾತ್ರ ಭಕ್ತ ಶಿರೋಮಣಿ ಆಂಡಾಳ್. ಪುಷ್ಪ ಮಾಲೆಯನ್ನು ಧರಿಸಿ ಭಗವಂತನಿಗೆ ಸಮರ್ಪಿಸಿದ ದೇವತೆ ಮತ್ತೊಬ್ಬ ಇಲ್ಲ. ಗೀತಮಾಲೆಯನ್ನು ಸಮರ್ಪಿಸಿದ ಆಳ್ವಾರರೂ ಇಲ್ಲ.

ಮಾದೃಶಾ ಕಿಂಚನತ್ರಾಣ ಬದ್ಧ
ಕಂಕಣಪಾಣಯೇ ।
ವಿಷ್ಣು ಚಿತ್ತ ತನೂಜಾಯೈ ಗೋದಾಯೈ
ನಿತ್ಯಮಂಗಳಂ ॥

**(ಆಧಾರಗಳಿಂದ)**

# ಶ್ರೀ ವೈಷ್ಣವರ ವಿಶಿಷ್ಟ ಪೂಜೆ ಆನೆ ಹಬ್ಬ

- ಶ್ರೀಮತಿ ಕೆ.ವಿ. ಪದ್ಮಾವತಿ



ಮೈಸೂರು ಪ್ರಾಂತ್ಯದ ಅಯ್ಯಂಗಾರರಲ್ಲಿ ಮಾತ್ರ ಈ ವಿಶಿಷ್ಟ ಪೂಜೆಯನ್ನು ಸೌರಮಾನ ಪದ್ಧತಿಯ ವೃಶ್ಚಿಕಮಾಸ (ಕಾರ್ತೀಕ) ದ ಹುಣ್ಣಿಮೆಯೆಂದು ಆಚರಿಸಲಾಗುತ್ತದೆ. ಇದು ಪೌರಾಣಿಕ ಕತೆಗೆ ಜಾನಪದ ಆಧಾರದ ನಂಬಿಕೆಯ ಲೇಪನವನ್ನು ಹಚ್ಚಿರುವ ಪ್ರಕೃತಿ ಪೂಜೆಯ ಸಂಸ್ಕೃತಿ.

ಮದುವೆ ಮಾಡುವಷ್ಟೇ ಸಂಭ್ರಮದಿಂದ ಈ ಹಬ್ಬವನ್ನು ವೈಭವದಿಂದ ಮಾಡುವರು. ಭಾದ್ರಪದ ಮಾಸದ ಗಣೇಶ ಚತುರ್ಥಿಯನ್ನು ಆಚರಿಸಿದಂತೆ ಶ್ರೀವೈಷ್ಣವರು ವಿಷ್ಣುದೀಪದ ದಿನದಂದು ಗಜರಾಜನ ಮೃಣ್ಮಯ ಮೂರ್ತಿಯನ್ನು ಮಾಡಿ ದೀಪಾರಾಧನೆಯೊಂದಿಗೆ ವಿಶೇಷವಾಗಿ ಆಚರಿಸುವರು. ಶ್ರೀಮನ್ನಾರಾಯಣನು ಪರಂಜ್ಯೋತಿ ಸ್ವರೂಪನು.ಅವನ ಪ್ರತೀಕವಾಗಿ ಎಲ್ಲೆಲ್ಲೂ ಜ್ಯೋತಿ ಬೆಳಗಿಸಿ ಪೂಜಿಸುವುದರಿಂದ ಇದನ್ನು ವಿಷ್ಣುದೀಪ ಎಂದು ಕರೆಯುತ್ತಾರೆ. ಇನ್ನು ಮಹಾಲಕ್ಷ್ಮೀಯು ಜಗನ್ಮಾತೆಯಾಗಿ ದಿಗ್ಗಜಗಳಿಂದ ಅಮೃತಾಭಿಷೇಕ ಮಾಡಿಸಿಕೊಳ್ಳುವುದರಿಂದ ಆಕೆಗೆ ಗಜಲಕ್ಷ್ಮೀ ಎಂಬ ಹೆಸರುಂಟು.

ಈ ಕೃತ್ತಿಕೋತ್ಸವದ ದಿನ ಲಕ್ಷ್ಮೀ ಸಹಿತ ನಾರಾಯಣವನ್ನು ಪೂಜಿಸುವುದರಿಂದ ಧನಧ್ಯಾನ ಸಮೃದ್ಧಿಯಾಗಿ ವಿಶೇಷ ಅನುಗ್ರಹವಾಗುವುದೆಂಬ ನಂಬಿಕೆ ಇದೆ. ಮಹಾಭಾರತದ ಐತಿಹ್ಯದಂತೆ ಗಾಂಧಾರಿಯು ಮಣ್ಣಿನ ಗಜಲಕ್ಷ್ಮೀಯನ್ನು ಪೂಜೆಮಾಡುವುದರಿಂದ ಪ್ರಭಾವಿತಳಾಗಿ ಕುಂತಿದೇವಿಯು ಸಾಹಸಿಗಳಾದ ಭೀಮಾರ್ಜುನರ ಸಹಾಯದಿಂದ ಇಂದ್ರನ ಐರಾವತವನ್ನೇ ಭೂಮಿಗೆ ತರಿಸಿ ಪೂಜೆ ಮಾಡುತ್ತಾಳೆ. ಇದರ ಕುರುಹಾಗಿ ಈ ಆಚರಣೆ ಬಂದಿರಬಹುದು.

ಮೈಸೂರು ಕಡೆಯ ಅಯ್ಯಂಗಾರರು ತಮಿಳುನಾಡಿನ ಅವರ ಸಂಪ್ರದಾಯದ ಆಚರಣೆ ಮಾಡುತ್ತಾರೆ. ಆದರೆ ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದ ಅವರಿಗೆ ದೇಶಾಚಾರ ಎಂದು ಒಂದು ಕಾರಣಕ್ಕೆ ಇದನ್ನು ಕಾರ್ತಿಕ ದೀಪೋತ್ಸವದ ಆಚರಣೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಅಯ್ಯಂಗಾರರಲ್ಲಿ ವ್ರತಾಚರಣೆಗಳಿಲ್ಲ, ಸ್ಥಳೀಯ ಬ್ರಾಹ್ಮಣರೆಲ್ಲಾ ವ್ರತಗಳಾಚರಿಸುವಾಗ ಅವರಿಗೆ ತಾವು ಬೇರೆಯೇ ಪಂಗಡವಾಗಿ ದೂರ ನಿಲ್ಲುವುದು ಸರಿಯೆನಿಸದಿರಬಹುದು. ಹೀಗಾಗಿ ಲಕ್ಷ್ಮೀ ವ್ರತದಿಂದಲೂ ಕೆಲವು ಅಂಶಗಳನ್ನು ಅಳವಡಿಸಿಕೊಂಡು ಈ ಆನೆ ಹಬ್ಬ ರೂಢಿಗೆ ಬಂದಿದೆ ಅನ್ನಿಸುತ್ತದೆ.



ಇನ್ನು ಹಬ್ಬದ ಉದ್ದೇಶದಿಂದ ಲೋಕಕ್ಕೆಲ್ಲಾ ಸುಭಿಕ್ಷೆ ಬರಲೆಂದು ಬಯಸಿ ದೀಪ ಬೆಳಗಿಸುವಾಗ ಪ್ರಕೃತಿಯ ಪ್ರತಿನಿಧಿಯಾಗಿ ಮಣ್ಣಿನಲ್ಲಿ ಆನೆ ಮಾಡಿ,ದೈವತ್ವ ಆರೋಪಿಸಿ ಪೂಜಿಸಿ ಮನೆ ಬೆಳಗಲು ಬಂದ ಸೊಸೆಯಿಂದಲೆ ದೀಪ ಬೆಳಗಿಸಿ ಅವಳಿಗೆ ಉಡುಗೊರೆಯಿತ್ತು. ಪರಿಚಿತರನ್ನೆಲ್ಲ ಕರೆದು ಆರತಿ ಮಾಡಿ, ಹೊಸ ಸೊಸೆಯನ್ನು ಎಲ್ಲರಿಗೂ ಪರಿಚಯಿಸಿ ಗೌರವಿಸುವುದು ಇನ್ನೊಂದು ಉದ್ದೇಶ.



## ಗಜರಾಜನ ಬಗ್ಗೆ ಒಂದಷ್ಟು ಮಾಹಿತಿ...



**ಜನ್ಮಜನ್ಮಾಂತರದ ಪ್ರತಿಪಾದನೆಯಲ್ಲಿ ಆನೆಯ ಜನ್ಮದ ನಂತರ ಜನ್ಮವೇ ಮನುಷ್ಯ ಜನ್ಮ ಎನ್ನುತ್ತಾರೆ. ಭಗವಂತನ ಷೋಡಶೋಪಚಾರದಲ್ಲಿ ಗಜಾರೋಹಣ ಇದೆ. ಇಂದ್ರನ ಐರಾವತ ಆನೆ. ಬುದ್ಧನಂತಹ ದಾರ್ಶನಿಕರನ್ನು ಗರ್ಭದಲ್ಲಿ ಹೊತ್ತ ಯಶೋಧರೆಯ ಸ್ವಪ್ನದಲ್ಲಿ ಗರ್ಭ ಪ್ರವೇಶ ಮಾಡಿದ್ದು ಆನೆ! ಇಂದೂ ಕೂಡ ಆನೆಯ ಸೊಂಡಲಿನಿಂದ ಹಾರ ಹಾಕಿಸಿಕೊಂಡು ಮಹನೀಯರು ಮೆರವಣಿಗೆ ಹೊರಡುವುದುಂಟು.**

ಆನೆ ಹಬ್ಬ ಆಚರಿಸುವವರು ಹಿಂದೆ ಮಣ್ಣಿನ ಆನೆಯನ್ನು ಅಂಗಡಿಯಿಂದ ಖರೀದಿಸುತ್ತಿದ್ದರು. ಈಗ ಆನೆಗಳು ಮಾರಾಟಕ್ಕೆ ದೊರೆಯದಿರುವುದರಿಂದ ಕುಂಬಾರರಿಂದ ಅಚ್ಚಿನಲ್ಲಿ ನಿರ್ಮಿತವಾದ ಆನೆಯನ್ನು ಖರೀದಿಸಿ ತರುತ್ತಾರೆ. ಅದು ಸಿಗದಿದ್ದವರು ತಮ್ಮ ಮನೆಯಲ್ಲೇ ಮಣ್ಣಿನಲ್ಲಿ ಆನೆಯನ್ನು ನಿರ್ಮಿಸಿಕೊಳ್ಳುತ್ತಾರೆ.ಮಣ್ಣಿನ ಆನೆ ಸಿಗದ ಕೆಲವರು ಮನೆಯಲ್ಲಿರುವ ಬೆಳ್ಳಿ, ಹಿತ್ತಾಳೆ, ಮರದ ಆನೆಗಳನ್ನು ದೇವರ ಮುಂದಿಟ್ಟು ಪೂಜಿಸುತ್ತಾರೆ.

ಹೊಲದಿಂದ ತಂದ ಜೇಡಿ ಮಣ್ಣಿನಲ್ಲಿ ಆನೆ (ಗಂಡಾನೆ) ಮಾಡಿ, ಅದರ ಹಣೆಗೆ ತಮ್ಮದೇ ಆದ ಲಾಂಛನದ ನಾಮವಿಟ್ಟು ಅರಿಸಿನ ಕುಂಕುಮದಿಂದ ಪೂಜಿಸಿ ಶುಭ ವೇಳೆಯಲ್ಲಿ ಹಸೆಮಣೆಯ ಮೇಲಿರಿಸುತ್ತಾರೆ. ಪೂಜೆಗೆ ಸಿದ್ಧಪಡಿಸುವ ಆನೆಗೆ ದೇವರ ಮುಂದೆ ಫಲ, ಪುಷ್ಪ, ಧೂಪ ಹಾರಗಳಿಂದ ಅಲಂಕರಿಸಿ, ಅದರ ಹೆಗಲ ಮೇಲೆ ಕೃಷ್ಣನ ವಿಗ್ರಹವನ್ನು ಇಡುತ್ತಾರೆ. ಎಲ್ಲ ತರಹದ ಆನೆಗಳನ್ನು ಅದರ ಜೊತೆಗೆ ಇರಿಸಿ ಪೂಜಿಸುತ್ತಾರೆ. ಬೆಳಗ್ಗೆ ಹಬ್ಬದಡಿಗೆ ಮಾಡಿ ನೈವೇದ್ಯ ಮಾಡುತ್ತಾರೆ. ಆನೆಗೆ ಪ್ರಿಯವಾದ ಗರಿಕೆಹುಲ್ಲು, ಬೆಲ್ಲ ಕಾಯಿ, ಕಬ್ಬಿನ ಚೂರು, ಅಕ್ಕಿಗಳನ್ನು ಮುಂದಿಟ್ಟು ಬಾಳೆಹಣ್ಣುಗಳನ್ನು ಮತ್ತು ಸಜ್ಜಪ್ಪ, ಸಿಹಿ ಅವಲಕ್ಕಿ ಜೊತೆಗೆ ಎರಯಪ್ಪ ಮುಂತಾದ ಭಕ್ಷ್ಯಗಳನ್ನು ಸಿದ್ಧಪಡಿಸಿ ನೈವೇದ್ಯ ಮಾಡುತ್ತಾರೆ.ಸಂಜೆ ಕಸಗುಡಿಸಿ ಒಟ್ಟು ಮಾಡುವ ಹಜಾರದ ಮೂಲೆಯನ್ನು ಶುಭ್ರ ಮಾಡಿ ರಂಗವಲ್ಲಿಯಿಟ್ಟು ಆ ಮೂಲೆಯಲ್ಲಿ ದೀಪಸ್ಥಂಭವಿಟ್ಟು ಪೂಜಿಸುತ್ತಾರೆ.

ಗಣೇಶನ ವಿಗ್ರಹ ವಿಸರ್ಜನೆ ಮಾಡುವಂತೆಯೇ ಈ ಆನೆಯನ್ನು ಮೂರನೆಯ ಇಲ್ಲವೇ ಐದನೆಯ ದಿನ ವಿಸರ್ಜಿಸುತ್ತಾರೆ. ಆನೆಯನ್ನು ಜಲಸ್ತಂಭನ ಮಾಡುವ ಮೊದಲು ಅದರ ಹೊಟ್ಟೆಗೆ ಮೊಸರನ್ನವನ್ನು ಲೇಪಿಸಿ "ರಾಜ್ಯದಲ್ಲಿ ಮಳೆ - ಬೆಳೆ ಚೆನ್ನಾಗಿ ಆಗಿರಲಿ ನದಿ ನೀರು ತುಂಬಿ ಹರಿಯಲಿ, ಭೂಮಿ ತಂಪಾಗಿರಲಿ'' ಎಂದು ಪ್ರಾರ್ಥಿಸಿ ಬಾಳೆಯ ತೋಟದಲ್ಲೋ, ಅವರೆಕಾಯಿ ಹೊಲದಲ್ಲೋ! ಅದೂ ಸಿಗದಿದ್ದಲ್ಲಿ ಗಿಡಮರಗಳ ಗುಂಪು ಇದ್ದಲ್ಲಿ ವಿಸರ್ಜಿಸುತ್ತಾರೆ. ಕಾಲ ಬದಲಾದಂತೆ ಇಂದು ಮನೆಯಂಗಳದಲ್ಲಿ ಬಕೆಟ್ ನೀರಿನಲ್ಲೇ ವಿಸರ್ಜಿಸಲಾಗುತ್ತದೆ. ನಂತರ ಹೊಳೆಯೂಟ ಹೊಳೆಯಲ್ಲದಿದ್ದರೆ ಕೆರೆ ಬದಿ, ಅದೂ ಇಲ್ಲದ್ದಿದರೆ ಮನೆಯಂಗಳ. ಬಾವಿ ಇದ್ದರೆ ಅದರ ಬಳಿ ಕದಂಬ, ಮೊಸರನ್ನ, ಸಕ್ಕರೆ ಪೊಂಗಲ್‌ನ ಊಟ ಮಾಡುತ್ತಾರೆ.

ತವರು ಮನೆಯಿಂದ ಬರುವ ಸೊಸೆ ಹಿತ್ತಾಳೆಯ ಹಾಗೂ ಬೆಳ್ಳಿಯ ಆನೆಯನ್ನು ದೀಪದ ಒಂದು ಜೋಡಿ ಕಂಬಗಳನ್ನು ಆರತಿಗೆ ಬೇಕಾದ ವಸ್ತುಗಳನ್ನು ತರುತ್ತಾಳೆ. ಜೊತೆಗೆ ಸಜ್ಜಪ್ಪ ಅವಲಕ್ಕಿ ಪುರಿಉಂಡೆಗಳನ್ನು ತರುತ್ತಾಳೆ. ಅವಳಿಗೆ ಗಂಡನ ಮನೆಯಿಂದ ಅವರ ಶಕ್ತ್ಯಾನುಸಾರ ಉಡುಗೊರೆ ನೀಡಲ್ಪಡುತ್ತದೆ. ಆದ್ದರಿಂದ ಇದನ್ನು 'ಸೊಸೆ ಹಬ್ಬ' ವೆಂದೂ ಕರೆಯುತ್ತಾರೆ.

ವಿಷ್ಣು ದೇವಾಲಯಗಳಲ್ಲಿ ದೊಡ್ಡದಾದ ಕೋಲು ಒಂದಕ್ಕೆ ಹೊಸ ಬಟ್ಟೆಯೊಂದನ್ನು ತುಪ್ಪದಲ್ಲಿ ಅದ್ದಿ ಗರುಡಗಂಭದ ಬಳಿ ಅದನ್ನು ಹೊತ್ತಿಸಿ ಉರಿಸುತ್ತಾರೆ. ಅದರ ಕರಿಯನ್ನು ಹಣೆಗೆ ರಕ್ಷೆಯೆಂದು ಹಚ್ಚಿಕೊಳ್ಳುತ್ತಾರೆ.

ಒಟ್ಟಾರೆ ನಮ್ಮ ಮನಸ್ಸಿನ ರಾಕ್ಷಸ ಗುಣಗಳನ್ನು ದೂರವಾಗಿಸುವ ಪ್ರಕೃತಿಯ ಪೂಜೆ ಮಾಡಿ ಸರ್ವಮಂಗಳವನ್ನು ಪ್ರಾರ್ಥಿಸಿ ಕೋರುವ ಉದ್ದೇಶದಿಂದ ಈ ಹಬ್ಬ ರೂಪುಗೊಂಡಿದೆ ಎನ್ನಬಹುದು.

ಆನೆಯ ಸೊಂಡಿಲಿನಲ್ಲಿ ಅತಿ ಸೂಕ್ಷ್ಮತೆಯನ್ನು ಗ್ರಹಿಸುವ ಸಂವೇದನಾಶೀಲ ಸಾಮರ್ಥ್ಯವನ್ನು ಪಡೆದಿರುತ್ತದೆ. ಹಾಗೆಯೇ ಮರದ ದಿಮ್ಮಿಗಳಂತಹ ಬೃಹತ್ ಗಾತ್ರವನ್ನು, ಭಾರವನ್ನು! ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಆನೆಯ ಸೊಂಡಿಲು ನೆರವಾಗುತ್ತದೆ. ಶಕ್ತಿ -

ಯುಕ್ತಿಪೂರ್ಣವಾದ ಈ ಅಂಶದ್ವಯವು ಜವಾಬ್ದಾರಿಯುತ ಹೊಣೆಗಾರಿಕೆಯನ್ನು ನಿರ್ವಹಿಸುವ ನಾಯಕತ್ವಕ್ಕೆ ಅತಿ ಅವಶ್ಯವಾದ ಲಕ್ಷಣವೂ ಹೌದು, ಗುಣವೂ ಹೌದು.

ಆನೆಯು ಜೀವಿ ವೈವಿಧ್ಯ ಸಂಕುಲದ ಅತ್ಯಂತ ಮಹತ್ವದ ಪ್ರಾಣಿ. ಕಾಡಿನ ಇತರ ಸಸ್ಯಾಹಾರಿ ಪ್ರಾಣಿಗಳಾದ ಕಾಟಿ, ಕಡವೆ, ಜಿಂಕೆ ಇತ್ಯಾದಿಗಳ ಜೀವನೋಪಾಯ ಬಹುಪಾಲು ಆನೆಯನ್ನೇ ಅವಲಂಭಿಸಿದೆ. 'ಆನೆ ತುಳಿದದ್ದೇ ಹಾದಿ' ಎಂಬ ಮಾತು ಪ್ರಚಲಿತದಲ್ಲಿದೆ. ಆನೆ ಹಿಂಡು ನಡೆದು ಹೋದ ಕಾಡಿನಲ್ಲಿ ಇತರ ಶಾಖಾಹಾರಿ ಪ್ರಾಣಿಗಳು ಹಿಂಬಾಲಿಸಿ ಆಹಾರ ದೊರಕಿಸಿಕೊಳ್ಳುವಲ್ಲಿ ಪ್ರಯೋಜನ ಪಡೆಯುತ್ತವೆ. ಆನೆಗಳು ತಮ್ಮ ಲದ್ದಿಯಿಂದ ಕಾಡಿನ ಫಲವತ್ತತೆ ಹೆಚ್ಚಿಸುವಲ್ಲಿಯೂ ಕಾರಣವಾಗಿದೆ. ಹೀಗಾಗಿ ಆನೆಯನ್ನು "ಜೀವಿ ವೈವಿಧ್ಯದ ನೆತ್ತಿಗಲ್ಲು" ಎಂದು ಕರೆಯಲಾಗಿದೆ. ಆನೆ ಸಮಾಜ ಮತ್ತು ಮಾನವ ಸಮಾಜದ ಮಧ್ಯೆ ಹಲವಾರು ವಿಷಯಗಳಲ್ಲಿ ಸಾಮ್ಯ ಕಂಡು ಬರುತ್ತದೆ. ಆನೆಯ ಹಿಂಡು 'ಮಾತೃ ಯಾಜಮಾನ್ಯ' ಎನಿಸಿದ ಹೆಚ್ಚು ಅನುಭವವುಳ್ಳ ಅತ್ಯಂತ ಹಿರಿಯ ಹೆಣ್ಣಾನೆ 'ಹೆಗ್ಗಡತಿ' ಯಿಂದ ವ್ಯವಹರಿಸಲ್ಪಡುತ್ತದೆ.

ಮಾನವ ಹಾಗೂ ಆನೆಯ ಮಧ್ಯ ಕಂಡು ಬರುವ ಹೋಲಿಕೆಯನ್ನು ದೃಢೀಕರಿಸಲು ಆನೆ ರುಂಡ ಹೊತ್ತ ಮಾನವ ದೇಹವುಳ್ಳ ಗಣೇಶನನ್ನು ಹುಟ್ಟು ಹಾಕಿರಬಹುದು ಎಂದು ತೋರುತ್ತದೆ. ಆನೆಯು ನಡೆಯುವ ಭಂಗಿಯೇ ಒಂದು ವಿಶೇಷ ಹಾವಭಾವಗಳಿಂದ ಬಳುಕುತ್ತ ನಡೆಯುವ ಆನೆಯ ದೇಹಭಾಷೆ ಅದಕ್ಕೆ ಭೂಷಣ. ಅದು ನೋಡುವವರಿಗೆ ಮನಮೋಹಕ. ಇಂಥಾ ಮೋಹಕ ನಡೆಯುಳ್ಳ ಸ್ತ್ರೀಯನ್ನು ಗಜಗಾಮಿನಿ ಎಂದು ಭಾವನಾತ್ಮಕವಾಗಿ ವರ್ಣಿಸುತ್ತದೆ ಕವಿ ಸಮಯ.

ಇನ್ನೊಂದು ಆಸಕ್ತಿ ಕೆರಳಿಸುವ ವಿಷಯವೆಂದರೆ ಆನೆಗಳು ನೀರು ಹತ್ತಿರವಿರುವ ಜಾಗದಲ್ಲಿ ಅಥವಾ ಅಜ್ಞಾತ ಸ್ಥಳಗಳಿಗೆ ತಮ್ಮ ಕೊನೆಯುಸಿರೆಳೆಯಲು ಹೋಗುವುದೆಂಬ ನಂಬುಗೆ ಇದೆ. ಕಾಡಿನಲ್ಲಿ ನಿಸರ್ಗವು ಶವಗಳನ್ನು ಸಾಗಹಾಕುವ ತನ್ನದೇ ಆದ ವಿಧಿ ವಿಧಾನಗಳನ್ನು ಹೊಂದಿದೆ. ಇದು ಅತಿ ಕ್ಷಿಪ್ರದಲ್ಲೇ ನಡೆದು ಹೋಗುವುದು.

(ಚಿತ್ರ ಮತ್ತು ಪೂರಕ ಮಾಹಿತಿ : ಬೆಂಗಳೂರು ಜಯನಗರ 4 ನೇ ಬ್ಲಾಕ್‌ನಲ್ಲಿರುವ ಹಿರಿಯ ಹವ್ಯಾಸಿ ಪತ್ರಿಕಾ ಸಂಗ್ರಹಕರಾದ ಮಂ. ಅ.ವೆಂಕಟೇಶ್‌ರವರು)

# ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ
# ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




**ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ. ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ,ಅಂಗಪ್ರದಕ್ಷಿಣೆ,ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು ಓ.ಟಿ.ಪಿ. ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು,ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.**



# ಭಕ್ತಿ ಒಂದು ಚಿಂತನೆ

ಬಿ. ವಿಜೇಂದ್ರನಾಥ್
99807 58218

ಸಾಮಾನ್ಯವಾಗಿ ನಾವು ಭಕ್ತಿ ಅಂದರೆ ತಿಳಿದುಕೊಳ್ಳುವುದು ದೇವರ ಪೂಜೆಯನ್ನು ಮಾಡುವುದು, ಗುರು ಹಿರಿಯಲ್ಲಿ ಗೌರವವನ್ನು ತೋರುವುದು ದೇವರಲ್ಲಿ ಮತ್ತೆ "ದೇವರೇ ಭಕ್ತಿಯನ್ನು ಕೊಡು" ಅಂತ ಪ್ರಾರ್ಥಿಸೋದು ಅಲ್ಲವೇ, ಭಕ್ತಿಯನ್ನು ಮಾಡಿ ಪುನಹಃ ಭಕ್ತಿಯನ್ನೇ ಬೇಡುವುದರ ಅಂತರ್ಯವೇನು? ಎಂಬ ಜಿಜ್ಞಾಸೆ ಉಂಟಾದರೆ ಶಾಸ್ತ್ರಗಳಲ್ಲಿ ಇದಕ್ಕೆ ಉತ್ತರಗಳನ್ನು ಹೇಳಿದ್ದಾರೆ. ಭಕ್ತಿಯು ಅನೇಕ ವೈವಿಧ್ಯವನ್ನು ಹೊಂದಿದೆ. ಅವು ಭಕ್ತಿ, ಪಕ್ವಭಕ್ತಿ, ಪರಿಪಕ್ವ ಭಕ್ತಿ, ಅತಿಪರಿಪಕ್ವ ಭಕ್ತಿ ಇತ್ಯಾದಿ. ಸಾಮಾನ್ಯ ಭಕ್ತಿಯನ್ನು ಮಾಡಿ ದೇವರ ಬಳಿ ಪಕ್ವಭಕ್ತಿಯನ್ನು ಪ್ರಾರ್ಥಿಸಬೇಕು. ಅದರಿಂದ ಪರಿಪಕ್ವಭಕ್ತಿಯನ್ನು ಮತ್ತು ಅದರಿಂದ ಅತಿಪರಿಪಕ್ವ ಭಕ್ತಿಯನ್ನು ಪ್ರಾರ್ಥಿಸಿ ಅಪರೋಕ್ಷ ಜ್ಞಾನವನ್ನು ಪಡೆದು ಮೋಕ್ಷವನ್ನು ಪಡೆಯಬೇಕು. ಹೀಗೆ ಭಕ್ತಿಯ ಮಜಲುಗಳು ಅನೇಕ ವಿಧವಾಗಿದೆ. ಇದರಂತೆ ಭಕ್ತರು ಕೂಡ ಅನೇಕ ವಿಧವಾಗಿದ್ದಾರೆಂಬುದನ್ನು ಶಾಸ್ತ್ರಗಳಲ್ಲಿ ತಿಳಿಸಿದ್ದಾರೆ. ಅವರುಗಳು ಯಾರೆಂದರೆ ಏಕಾಂತಭಕ್ತರು, ಅನೇಕಾಂತ ಭಕ್ತರು ಅಥವಾ ಚ್ಛಿನ್ನ ಭಕ್ತರು, ಅಚ್ಛಿನ್ನ ಭಕ್ತರು ಅಥವಾ ಕರ್ಮಯೋಗಿಗಳು, ಜ್ಞಾನಿಯೋಗಿಗಳು, ಭಕ್ತಿಯೋಗಿಗಳು ಇತ್ಯಾದಿ ಭಕ್ತಿ ಯೋಗವನ್ನು ಭಗವದ್ಗೀತೆಯಲ್ಲಿ ಭಾಗವತಾದಿ ಗ್ರಂಥಗಳಲ್ಲಿ ಅತ್ಯಂತ ವಿಸ್ತಾರವಾಗಿ ಭಗವಂತನು ಉಪದೇಶಿಸಿದ್ದಾನೆ.

**ಭಕ್ತಿಯ ಲಕ್ಷಣ**

ಭಕ್ತಿಯ ವ್ಯಾಖ್ಯಾನ ಮತ್ತು ವಿವರಣೆಯನ್ನು ಶ್ರೀಮದಾನಂದ ತೀರ್ಥ ಭಗವತ್ಪಾದರು ಶ್ರೀಮನ್ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಈ ರೀತಿ ತಿಳಿಸಿಕೊಟ್ಟಿದ್ದಾರೆ.

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವಳಿತೋಧಿಕಃ
ಸ್ನೇಹೋ ಭಕ್ತಿ ರಿತಿ ಪ್ರೋಕ್ತಸ್ತ ಯಾ ಮುಕ್ತಿರ್ನಚಾನ್ಯಥಾ॥

ಭಗವಂತ ಮಾಹಾತ್ಮೆ ಜ್ಞಾನ ಪೂರ್ವಕವೂ, ಅಚಲವೂ, ಇತರ ಸರ್ವ ವಿಷಯಗಳಿಗಿಂತ ಅಧಿಕವೂ ಆದ ಅವನಲ್ಲಿ ಮಾಡುವ ಪ್ರೇಮವು "ಭಕ್ತಿ" ಎಂದು ಕರೆಯಲ್ಪಡುತ್ತದೆ, ಇಂತಹ ಭಕ್ತಿಯಿಂದಲೇ ಮೋಕ್ಷ, ಇತರ ಸಾಧನಗಳಿಂದಲ್ಲ.

ಭಗವದ್ಗೀತೆಯ ಅಧ್ಯಾಯ - 12, ಶ್ಲೋಕ - 2 ರಲ್ಲಿ ಈ ರೀತಿ ಇದೆ.

ಮಯ್ಯಾ ವೇಶ್ಯ ಮನೋ ಯೇ
ಮಾ ನಿತ್ಯಯುಕ್ತಾ ಉಪಾಸತೇ।
ಶ್ರದ್ಧಯಾ ಪರಯೋಪೇತಾಃ ತೇ
ಮೇ ಯುಕ್ತತಮಾ ಮತಾಃ॥

ಯಾರು ನನ್ನ ಸಾಕಾರ ರೂಪದಲ್ಲಿ ತಮ್ಮ ಮನಸ್ಸನ್ನು ನಿಲ್ಲಿಸುತ್ತಾರೋ ಮತ್ತು ಅಧಿಕವಾದ ಹಾಗೂ ಅಲೌಕಿಕವಾದ ನಿಷ್ಠೆಯಿಂದ ನನ್ನನ್ನು ಪೂಜಿಸುವುದರಲ್ಲಿ ನಿರತರಾಗಿರುತ್ತಾರೋ ಅವರನ್ನು ನಾನು ಅತ್ಯಂತ ಪರಿಪೂರ್ಣರು ಎಂದು ಭಾವಿಸುತ್ತೇನೆ.

**ಕೃಷ್ಣಾಮೃತಮಹಾಹಾರ್ಣವ - ಶ್ಲೋಕ - 5**

ಸ ನಾಮ ಸುಕೃತೀ ಲೋಕೇ
ಕುಲಂ ತೇನ ಹ್ಯಲಂಕೃತಮ್।
ಆಧಾರ ಸರ್ವ ಭೂತನಾಂ
ಯೇನ ವಿಷ್ಣು ಪ್ರಸಾದಿತ॥

ಸಕಲ ಜೀವಿಗಳಿಗೂ ಆಶ್ರಯನಾದ ಶ್ರೀಹರಿಯನ್ನು ಯಾವನು ಪ್ರಸನ್ನಗೊಳಿಸುವನೋ ಅವನೇ ಲೋಕದಲ್ಲಿ ಪುಣ್ಯಶಾಲಿ, ಅವನಿಂದಲೇ ಕುಲಕ್ಕೆ ಅಲಂಕಾರ.

ಇನ್ನೂ ಬ್ರಹ್ಮಮೀಮಾಂಸಾ ಶಾಸ್ತ್ರದಲ್ಲಿ ಮೂರನೆಯ ಅಧ್ಯಾಯದ ಎರಡನೆಯ ಪಾದವು ಭಕ್ತಿಪಾದವೆಂದೇ ಪ್ರಸಿದ್ಧವಾಗಿದೆ. ಹರಿಕಥಾಮೃತಸಾರದಲ್ಲಿಯೂ "ಭಕ್ತಾಪರಾಧಸಹಿಷ್ಣು" ಎಂಬುದಾಗಿ 23 ನೇ ಸಂಧಿಯು ಪ್ರಸಿದ್ಧವಾಗಿದೆ. ಈ ಶಾಂತಿಯ ಸೂಚನೆ ಈ ರೀತಿ ಇದೆ.

ಹರಿಸಿರಿ ವಿರಿಂಚೀರಮುಖ ನಿ ರ್ಜರರ ಆವೇಶಾವತಾರಗಳ।
ಸ್ಮರಿಸು ಗುಣಗಣ ಸಾರ್ವಕಾಲದಿ ಭಕ್ತಿ ಪೂರ್ವಕದಿ॥

ಶ್ರೀ ಮಜ್ಜಯತೀರ್ಥರು ಶ್ರೀ ಮನ್ನ್ಯಾಯಸುಧೆಯಲ್ಲಿ ಈ ಶ್ಲೋಕದ ಭಾವವನ್ನು ಹೀಗೆ ವಿವರಿಸಿದ್ದಾರೆ.

ಪರಮೇಶ್ವರಭಕ್ತಿರ್ನಾಮ - ನಿರವಧಿಕಾನಂತವದ್ಯಕಲ್ಯಾಣ ಗುಣತ್ವಜ್ಞಾನಪೂರ್ವಕ ಸ್ವಾತ್ಮಾಲ್ಮೀ ಸಮಸ್ತವಸ್ತು ಭ್ಯೋಳಿ ನೇಕ ಗುಣಾಧಿಕೋ ಅಂತರಾಯಸಹಸ್ರೇಣಾಪ್ಯ ಪ್ರತಿಬದ್ಧೋ ನಿರಂತರ ಪ್ರೇಮಪ್ರವಾಹಃ॥

ದೋಷರಹಿತವಾದ, ಅನಂತಕಲ್ಯಾಣಗುಣಗಳಿಂದ ಕೂಡಿದ ಭಗವಂತನೇ ಪೂರ್ಣನೆಂಬ ನಿಶ್ಚಿತಜ್ಞಾನ ಪುರಸ್ಸರವಾಗಿ ಭಗವಂತನಲ್ಲಿ ತಾನು

ತನ್ನವರು ಮತ್ತು ಇತರ ವಸ್ತುಗಳಿಗಿಂತಲೂ ಅನಂತ ಪಟ್ಟು ಅಧಿಕವಾದ ಸಹಸ್ರಾರು ವಿಘ್ನಗಳು ಬಂದರೂ ಅವುಗಳಿಂದ ತಡೆಯನ್ನೂ ಹೊಂದದಿರುವ ನಿರಂತರ ಪ್ರೇಮ ಪ್ರವಾಹಕ್ಕೆ "ಭಕ್ತಿ" ಎಂದು ಹೆಸರು.

ಈ ಭಕ್ತಿಯ ಸ್ವರೂಪವನ್ನು ಶ್ರೀಮದಾನಂದತೀರ್ಥರು ತಮ್ಮ ಗೀತಾ ತಾತ್ಪರ್ಯಗ್ರಂಥದಲ್ಲಿ ತಿಳಿಸಿಕೊಟ್ಟಿದ್ದಾರೆ.

ಬ್ರಹ್ಮರುದ ರಮಾದಿಭ್ಯೋಳಿ ಪೃತ್ತಮತ್ತ್ವಂ ಸ್ವತಂತ್ರತಾಮ್।
ಸವಸ್ಯ ತದಧೀನತ್ವಂ ಸರ್ವಸದ್ಗುಣ ಪೂರ್ಣತಾಮ್।
ನೀರ್ತೋಷತ್ವಂಚ ವಿಜ್ಞಾಯ ವಿಷ್ಣೋಃ ತತ್ರಾಖಿಲಾಧಿಕಃ
ಸ್ನೇಹೋ ಭಕ್ತಿರತಿ ಪ್ರೋಕ್ತಃ ಸರ್ವೋಪಾಯೋತ್ತಮೋ ಮತಃ॥
ತೇನೈವ ಮೊಕ್ಷೋ ನಾನ್ಯೇವ ದೃಷ್ಟ್ಯಾದಿಃ ತತ್ರ ಸಾಧನಮ್॥

ಭಗವಂತನು ರುದ್ರ, ಬ್ರಹ್ಮ, ರಮಾದಿಗಳಿಗಿಂತಲೂ ಉತ್ತಮನು, ಸ್ವತಂತ್ರನು, ಸರ್ವವೂ ಅವನ ಅಧೀನ. ಅವನು ಸರ್ವಪೂರ್ಣ ಪರಿಪೂರ್ಣ, ನಿರ್ದೋಷ ಎಂದು ತಿಳಿದು, ಅವನಲ್ಲಿ ಸರ್ವಾಧಿಕಾ ಪ್ರೇಮವನ್ನುಂಟು ಮಾಡುವುದು ಭಕ್ತಿ ಎನಿಸುತ್ತದೆ. ಇದು ಎಲ್ಲ ಉಪಾಯಗಳಲ್ಲಿ ಉತ್ತಮವಾದ ಉಪಾಯವೂ, ಇದರಿಂದಲೇ ಮೋಕ್ಷ ದೊರೆಯುವುದು. ಅಪರೋಕ್ಷ ಜ್ಞಾನಾದಿಗಳು ಭಕ್ತಿಗೆ ಸಾಧನಗಳು.

ಇನ್ನು ಜಿತಂತೇ ಸ್ತೋತ್ರದಲ್ಲಿ ಭಕ್ತಿ ಎಂದರೆ ಹೀಗಿರಬೇಕು ಅಂದಿದ್ದಾರೆ.

ತ್ವಮೇವ ಮತಾ ಚ ಪಿತಾ ತ್ವಮೇವ
ತ್ವಮೇವ ಬಂಧು ಸಖಾ ತ್ವಮೇವ
ತ್ವಮೇವ ವಿದ್ಯಾ ದ್ರವಿಣಮ್ ತ್ವಮೇವ
ತ್ವಮೇವ ಸರ್ವ ಮಮ ದೇವ ದೇವ॥
ಯಾತ್ರ ಕುತ್ರ ಕುಲೇ ವಾಸೋ ಏಷು ಕೇಷು ಭವೋಸ್ತುಮೆ।
ತವ ದಾಸ್ಯೈಕಭಾವೇಸ್ಯಾತ್ ಸದಾ ಸರ್ವತ್ರ ಮೇ ರತಿಃ॥

ಜಗದೊಡೆಯನೆ ! ನೀನೆ ತಾಯಿ, ನೀನೆ ತಂದೆ, ನೀನೆ ಬಂಧು, ನನ್ನ ನೆಚ್ಚಿನ ಗೆಳೆಯನು ಕೂಡ ನೀನೆ, ನಾನು ಶ್ರಮಪಟ್ಟು ಸಾಧಿಸುವ ವಿದ್ಯೆಯೂ ಕೂಡ ನೀನೆ ! ಹಗಲಿರಳೂ ಹಾತೊರೆದು ಸಂಪಾದಿಸುವ ಸಂಪತ್ತೂ ನೀನೆ. ನನ್ನ ಜೀವನದ ಸರ್ವಸ್ವ ನೀನೊಬ್ಬನೇ ! ನಾ ನಂಬಿದ ಪರದೇವ ಅಂದರೆ ಅದು ನೀನೊಬ್ಬನೇ ! ನಿನ್ನನ್ನು ಬಿಟ್ಟು ನನಗೆ ಬೇರೆ ಯಾರು ಬೇಡ, ತಂದೆ ತಾಯಿ ಬಂಧು - ಬಳಗ ಸ್ನೇಹಿತರು ಯಾರು ಸಹ ನನಗೆ ಮುಖ್ಯರಲ್ಲ. ವಿವಿಧ ಬಗೆಯ ಕಾಮನೆಗಳನ್ನು ದುಡ್ಡು - ದುಗ್ಗಾಣಿಯನ್ನು ಅನೇಕ ವಿದ್ಯೆಗಳನ್ನೂ ಕೂಡ ನಾನು ಅಪೇಕ್ಷಿಸುವುದಿಲ್ಲ. ನಿರಂತರ ನಿನ್ನ ದಾಸನಾಗಿರಬೇಕೆಂದಷ್ಟೇ ಅಪೇಕ್ಷಿಸುತ್ತೇನೆ. ನಾನು ಮುಂದಿನ ಜನ್ಮಗಳಲ್ಲಿ ಎಲ್ಲಿ ಬೇಕಾದರೂ ಹುಟ್ಟಿ ಹೇಗಾದರೂ ಹುಟ್ಟಲಿ, ನಿನ್ನ ದಾಸನಾಗಿರಬೇಕೆಂದಷ್ಟೇ ಅಪೇಕ್ಷಿಸುತ್ತೇನೆ. ನಿನ್ನಲ್ಲೇ ನನ್ನ ಮನಸ್ಸು ಆಸಕ್ತವಾಗಿರಬೇಕೆಂದು ಬಯಸುತ್ತೇನೆ.

**ನವವಿಧ ಭಕ್ತಿ**

ಇನ್ನು ಶ್ರೀ ಮದ್ಭಾಗವತದಲ್ಲಿ ಭಕ್ತಿಯು ನವಲಕ್ಷಣಗಳು



ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ।
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ॥

1. ಭಗವಂತನ ಮಹಿಮೆಯನ್ನು ಕೇಳುವುದು
2. ಸ್ತೋತ್ರ ಮಾಡುವುದು
3. ಸ್ಮರಣೆಯನ್ನು ಮಾಡುವುದು
4. ಪಾದಸೇವೆ ಮಾಡುವುದು
5. ಅರ್ಚನೆ ಮಾಡುವುದು
6. ನಮಸ್ಕಾರ ಮಾಡುವುದು
7. ದಾಸ್ಯತ್ವವನ್ನು ವಹಿಸುವುದು
8. ಅಪಾರವಾದ ಸ್ನೇಹ ಮಾಡುವುದು
9. ತನ್ನನ್ನೇ ಸಮರ್ಪಣೆ ಮಾಡಿಕೊಳ್ಳುವುದು

ಇವುಗಳು ನವವಿಧ ಭಕ್ತಿಗಳೆಂದು ಕರೆಸಿಕೊಳ್ಳುತ್ತವೆ. ಇದನ್ನು ಹರಿದ್ವೇಷಿಯಾದ ಹಿರಣ್ಯಕಶಿಪುವಿನ ಮುಂದೆ ಧೀರ ಬಾಲಕನಾದ ಶ್ರೀ ಪ್ರಹ್ಲಾದರಾಜರು ಹೇಳಿದ್ದಾರೆ. ಈ ಒಂಭತ್ತು ಭಕ್ತಿಯ ಮಜಲುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ.

ಹಾಗಾದರೆ, ನವವಿಧ ಭಕ್ತರು ಯಾರು?

1. ಶ್ರವಣ ಭಕ್ತಿಯಿಂದ ಪರೀಕ್ಷಿತನು ಉದ್ಧಾರನಾದನು
2. ಹರಿಕೀರ್ತನೆಯಿಂದ ಬೆಳಗಿದ ಪ್ರಹ್ಲಾದ
3. ಹರಿನಾಮ ಸ್ಮರಣೆಯಿಂದ ಮೋಕ್ಷ ಹೊಂದಿದ ಅಜಾಮಿಳ
4. ಪಾದಸೇವನೆಯಿಂದ ಉದ್ಧಾರನಾದ ಲಕ್ಷ್ಮಣ
5. ಅರ್ಚನೆಯಿಂದ ಉದ್ಧಾರನಾದ ಗಜೇಂದ್ರ
6. ವಂದಿಸಿ ಉದ್ಧಾರನಾದ ಅಕ್ರೂರ
7. ಶ್ರೀರಾಮದೇವರಲ್ಲಿನ ದಾಸ್ಯಭಾವನೆಯಿಂದ ಜೀವೋತ್ತಮರಾದ ಶ್ರೀಹನುಮಂತ ದೇವರು
8. ಶ್ರೀಕೃಷ್ಣನ ಸಖ್ಯದಿಂದ ಉದ್ಧಾರನಾದ ಅರ್ಜುನ
9. ಆತ್ಮನಿವೇದನೆಯಿಂದ ಸದ್ಗತಿ ಹೊಂದಿದ ಜಾಟಾಯು
   ಅದಕ್ಕೆ ಶ್ರೀ ಪುರಂದರದಾಸರು ಹೀಗೆ ಹೇಳಿದ್ದಾರೆ.

ಹರಿಯ ಒಂಭತ್ತು  ಭಕ್ತಿಗಳನ್ನು ಬಲ್ಲಧೀರ ಮರಳಿ ಸಂಸ್ಕೃತಿಗೆ ಹುಟ್ಟಿ ಬಾರ।

ನಾರದೀಯ ಭಕ್ತಿ ಸೂತ್ರದಲ್ಲಿ ಹನ್ನೊಂದು ಮಜಲಿನ ಭಕ್ತಿಗಳು

1. ಪರಮಾತ್ಮನ ಗುಣಗಳಲ್ಲಿ ಮಹಿಮೆಗಳಲ್ಲಿ ಆಸಕ್ತಿ
2. ಪರಮಾತ್ಮನನ್ನು ಕಾಣುವ ಆಸಕ್ತಿ
3. ಪರಮಾತ್ಮನನ್ನು ಪೂಜಿಸುವ ಆಸಕ್ತಿ
4. ಪರಮಾತ್ಮನ ಸ್ಮರಣೆ ಮಾಡುವುದರಲ್ಲಿ ಆಸಕ್ತಿ
5. ಪರಮಾತ್ಮನ ದಾಸನಾಗಲು ಆಸಕ್ತಿ
6. ಪರಮಾತ್ಮನ ಜೊತೆ  ಗೆಳೆತನ ಬೆಳೆಸುವ ಆಸಕ್ತಿ
7. ಪರಮಾತ್ಮನ ವಾತ್ಸಲ್ಯವನ್ನು ತವಕಿಸುವ ಆಸಕ್ತಿ
8. ಪರಮಾತ್ಮನ ಕಾಂತಿಯನ್ನು ಕಂಡು ನಿಬ್ಬೆರಗಾಗುವ ಆಸಕ್ತಿ
9. ಪರಮಾತ್ಮನಲ್ಲಿ ಆತ್ಮನಿವೇದನೆ ಮಾಡಿಕೊಳ್ಳುವ ಆಸಕ್ತಿ
10. ಭಕ್ತ್ಯುದ್ರೇಕದಿಂದ ತನ್ಮಯನಾಗುವುದರಲ್ಲಿ ಆಸಕ್ತಿ
11. ಪರಮಾತ್ಮನ ವಿಸ್ಮರಣೆಯಿಂದ ದುಃಖ ಹೊಂದುವ ಆಶಕ್ತಿ

ಹೀಗೆ ಒಟ್ಟು ಹನ್ನೊಂದು ಭಕ್ತಿಯ ಮಜುಲುಗಳನ್ನು ನಾರದರು ತಿಳಿಸುತ್ತಾರೆ. ಆದರೆ ಭಾಗವತ ಹೇಳುವ ಒಂಭತ್ತು ಬಗೆಯ ಭಕ್ತಿಗಳೆಲ್ಲೇ ಈ ಹನ್ನೊಂದು ಭಕ್ತಿಗಳು ಅಡಕಗೊಳ್ಳುತ್ತವೆ. ಆದ್ದರಿಂದ ನವವಿಧ ಭಕ್ತಿಗಳನ್ನು ಆಚರಿಸುವುದರಿಂದಲೇ ಈ ಹನ್ನೊಂದು ಮಜಲಿನ ಭಕ್ತಿಗಳನ್ನೂ ಕೂಡ ಮಾಡಿದಂತ್ತಾಗುವುದು.

ಇನ್ನೊಂದು ಕಡೆ ಭಾವೀಸಮೀರರಾದ ಶ್ರೀ ವಾದಿರಾಜರು ನಿರಂತರ ಭಕ್ತಿ ಮಾಡುವುದರ ಬಗ್ಗೆ ಈ ರೀತಿ ಹೇಳಿದ್ದಾರೆ.

ಅರೇ ಭಜ ಹರೇರ್ನಾಮ ಕ್ಷೇಮಧಾಮ ಕ್ಷಣೇ ಕ್ಷಣೇ
ಬಹಿಸ್ಸರತಿ ನಿಃ ಶ್ವಾಸೇ ವಿಶ್ವಸಃ ಕಃ ಪ್ರವರ್ತತೇ॥

ಅಂದರೆ

ಈ ಜೀವನವು ಅಜ್ಞಾನವೆಂಬ ದಟ್ಟವಾದ ಕತ್ತಲೆಯ ದಾರಿಯಂತಿದೆ. ನಿರಂತರ ದುಃಖದ ಮಳೆಯೇ ಸುರಿಯುತ್ತಿದೆ. ಸಂಸಾರವೆಂಬ ಮೋಡ ಕವಿದಿದೆ. ಕಾಮ ಕ್ರೋದಾದಿಗಳೆಂಬ ಮಿಂಚು, ಗುಡುಗುಗಳು ಆರ್ಭಟಿಸುತ್ತಿವೆ.

ಓ ಅಚ್ಚುತನೇ! ದಯಾಸಾಗರನೇ ! ನನ್ನನ್ನೊಮ್ಮೆ ಪ್ರೀತಿಯಿಂದ ನೋಡು, ಮಂಗಲಸ್ವರೂಪನಾದ  ಆ ನಿನ್ನ ರೂಪವನ್ನು ಈ ಮನಸ್ಸು ನಿರಂತರ ಸ್ಮರಣೆ ಮಾಡಲಿ, ನಿನ್ನ ಚರಿತ್ರೆಯನ್ನು ಪುನಃ ಪುನಃ ನಾಲಿಗೆಯು ನಿನ್ನ ನಾಮಸ್ಮರಣೆಯನ್ನು ಮಾಡುತ್ತಲೇ ಇರಲಿ, ಎಂದೆಂದೂ ಯಾವ ಕ್ಷಣವೂ ಇದಕ್ಕೆ ವಿಘ್ನ ಬರುವುದು ಬೇಡ,  ಏಕೆಂದರೆ ಮೂಗಿನಿಂದ ಹೊರಗೆ ಹೊರಟ ಉಸಿರು, ಪುನಃ ಒಳಗೆ ಬರುತ್ತದೆಂಬ ನಂಬಿಗೆ ಎನ್ನಲ್ಲಿಲ್ಲ.

ಇನ್ನೊಂದು ಕಡೆ ಭಾವೀಸಮೀರರಾದ ಶ್ರೀ ವಾದಿರಾಜರು

ಅಂದೋಹಂ ಕರುಣಾಸಿಂಧೋ
ವೀಕ್ಷೇ ನ ಕ್ಷೇಮಪದ್ಧತಿಮ್।
ಇಂದಿರೇಶ ಕರಂ ಗೃಹ್ಣನ್
ವರ್ತಯಾನಿಂದ್ಯ ವರ್ತನಿ॥

ಅಂದರೆ

ಶ್ರೀಹರಿಯೇ ನಾನೊಬ್ಬ ಕುರುಡನಂತಿದ್ದೇನೆ. ನನಗೆ ದಾರಿ ಕಾಣದು. ನೀನೆ ಸರಿಯಾದ ದಾರಿಯಲ್ಲಿ ನನ್ನ ಕೈಯನ್ನು ಹಿಡಿದು  ಮುನ್ನಡೆಸು. ಹರಿಮುಕುಂದನೇ!ನಿನ್ನಲ್ಲಿ ವಿನಯಭಕ್ತಿಗಳಿಂದ ತಲೆಬಾಗಿ ಪ್ರಾರ್ಥಿಸುತ್ತೇನೆ. ''ಎಲಾಭಕ್ತಿ ಶ್ಚ ತತ್ಸಾದನಂ'' ಎಂಬ ಶ್ರೀ ವ್ಯಾಸರಾಯರ ಮಾತು ಇಲ್ಲಿ ಮನನೀಯವಾಗಿದೆ.

''ಭಕ್ತ್ಯರ್ಥಂ ಭಗವನ್ಮಹಿಮೋಕ್ತಿ'' ಎಂಬುದಾಗಿ ಬ್ರಹ್ಮಸೂತ್ರಗಳ ಮೂರನೆಯ ಅಧ್ಯಾಯದ ಎರಡನೆಯ ಪಾದದಲ್ಲಿ ತಿಳಿಸಿರುವ ಭಗವಂತನ ಮಹಿಮೆಯನ್ನು ತಿಳಿದು ಅವನಲ್ಲಿ ಭಕ್ತಿ ಮಾಡಿ ಮೊಕ್ಷಾದಿಗಳನ್ನು ಹೊಂದಬೇಕು.

ಕೊನೆಯದಾಗಿ ಭಕುತರು ಹೀಗಿರಬೇಕು ಎಂದು ಪುರಂದರ ದಾಸರು ಹೇಳುತ್ತಾರೆ.

ಸುಮ್ಮನಿರು ಮನವೇ - ನಿನ್ನೊಳು ನೀನು
ಸುಮ್ಮನಿರು ಮನವೇ
ಒಂದನಾಡಿದರೆ ಒಂಭತ್ತನಾಡುವರು
ನಿಂದಿಸಿ ನುಡಿವರು ಗುರು ಹಿರಿಯರ
ತಂದೆ ಪುರಂದರವಿಟ್ಠಲರಾಯನ್ನ
ಕುಂದದೆ ಭಜಿಸಿ ನೀ ಸುಖಿಯಾಗು ಮನವೆ

- ಮದ್ವೇಶಾರ್ಪಣಮಸ್ತು.

## ಭಕ್ತರಲ್ಲಿ ವಿಜ್ಞಪ್ತಿ

**ಭಕ್ತರು ದೇವಸ್ಥಾನದಲ್ಲಿ  ಮೌನವನ್ನು ಆಚರಿಸಬೇಕು.**

**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬೇಕು.**

# ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ ದೇವಾಲಯ

- ಪಿ. ಭಾರ್ಗವಿ
99723 90338

ವಿವಿಧತೆಯಲ್ಲಿ ಏಕತೆ ಸಾರುವುದು ನಮ್ಮ ನಾಡು ಅದುವೇ ದೇವಾಲಯಗಳ ಬೀಡು. ಪುರಾತನ ಕಾಲದ ಇತಿಹಾಸ ಹಾಗೂ ಐತಿಹಾಸಿಕ ದೇವಾಲಯಗಳನ್ನು ನಮ್ಮ ರಾಜಧಾನಿಯಾದ ಬೃಹತ್ ಬೆಂಗಳೂರಿನಲ್ಲಿದೆ ಎಂದರೆ ನಿಜಕ್ಕೂ ಅದು ಅತಿಶಯ ಸರಿ.

ಬೆಂಗಳೂರಿನ ಪ್ರಮುಖ ಪೂರ್ವ ಸಂಸ್ಕಾರ, ಸಂಸ್ಕೃತಿ ಸಾಂಸ್ಕೃತಿಕ ಕೇಂದ್ರ ಬಿಂದು ಎಂದರೆ ಮಲ್ಲೇಶ್ವರಂ, ಕಾರಣ ಇದೊಂದು ಪುಣ್ಯ ಹಾಗೂ ದಿವ್ಯ ಕ್ಷೇತ್ರ. ಇಲ್ಲಿ ಎಲ್ಲಾ ಧರ್ಮದವರ ಧಾರ್ಮಿಕ ಚಟುವಟಿಕೆಗಳಿಗೆ ಮುಂದಾಗಿದೆ "ಒಂದೇ ಗುರಿ ಹಲವು ದಾರಿಗಳು" ಎಂಬ ಮಾತು ನೆನಪಾಗುತ್ತದೆ.

ಇಂದು ನಾವು ಮಲ್ಲೇಶ್ವರಂ 11 ನೇ ಅಡ್ಡರಸ್ತೆಯಲ್ಲಿರುವ ಜಗತ್ತನ್ನೇ ಕಾಯುತ್ತಿರುವ "ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ" ದೇವಾಲಯವನ್ನು ವೀಕ್ಷಿಸಿ ಪುನೀತರಾಗೋಣ.

**ಕೃಷ್ಣಂ ಒಂದೇ ಜಗದ್ಗುರು ಆ ಜಗದೊಡೆಯನಿಗೆ ಮೊದಲು ಚರಣಂ, ಶರಣಂ.**

ಈ ದೇವಾಲಯವು ಸುಮಾರು 125 ವರ್ಷದ ಹಿಂದಿನ ಪುರಾತನವಾದ, ವಿಶೇಷವಾದ ದೇವಾಲಯ.ಒಳಗಡೆ ವಿಶಾಲ ವಾದ ಆವರಣದಿಂದ ಕೂಡಿದೆ ಹಾಗೆ ತುಂಬಾ ಮಹತ್ವವುಳ್ಳ ದೇವ ಮಂದಿರ. ಇಲ್ಲಿನ ರಾಜ ಗೋಪುರವು ವೀಕ್ಷಿಸಲು ರಮಣೀಯವಾಗಿದೆ. "ಗೋಪುರ ದರ್ಶನಂ ಪಾಪ ವಿನಾಶನಂ" ಗೋಪುರ ಉತ್ತರ ದಿಕ್ಕಿನಲ್ಲಿರುವುದರಿಂದ ಇದನ್ನು ಭೂಲೋಕದ ವೈಕುಂಠದ್ವಾರ ಎಂದು ಕರೆಯುತ್ತಾರೆ.

ಗೋಪುರದ ಒಳಗೆ ಪ್ರವೇಶಿಸಿದರೆ, ಈಶಾನ್ಯ ದಿಕ್ಕಿನಲ್ಲಿ ಸುಂದರವಾದ ಕೃಷ್ಣ ಸರೋವರವಿದ್ದು... ಅದಕ್ಕೆ ಪೂರಕವಾಗಿ ವಸಂತ ಮಂಟಪವಿದೆ. ಇಲ್ಲಿ ದೇವರ ಉತ್ಸವ ರಾಜಬೀದಿಯಲ್ಲಿ ನಡೆದು ಬಂದ ನಂತರ ಈ ಮಂಟಪದಲ್ಲಿ ಉತ್ಸವ ಮೂರ್ತಿಯನ್ನು ಬಿಜೇಯ ಮಾಡಿಸುವುದೇ ವಿಶೇಷ.

"ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನ್ನಬಾರದೆ" ಎಂದು ದಾಸರಲ್ಲಿ ಶ್ರೇಷ್ಠರಾದ ಪುರಂದರದಾಸರು ಹೇಳಿದ್ದಾರೆ. ಅಂತ ಸ್ವಾಮಿಯ ದರ್ಶನಕ್ಕೆ ದಾರಿ ದೀಪವಾಗಿ ನಿಂತಿರುವುದು ಧ್ವಜಸ್ತಂಭ ಹಾಗೂ ಗರುಡನ



ಮೂರ್ತಿ.ಇನ್ನು ಮುಂದೆ ಹೆಜ್ಜೆ ಹಾಕುತ್ತಾ ಹೋದರೆ ಸಿಗುವುದು ಮಹಾದ್ವಾರ. ಇಲ್ಲಿ ಮೊದಲು ಅಕ್ಕಪಕ್ಕದಲ್ಲಿ ನಿಂತಿರುವ ಜಯ, ವಿಜಯರನ್ನು ಕಾಣಬಹುದು. ಅವರಿಗೆ ನಮಸ್ಕರಿಸಿ ಹೊಳಗೆ ಹೋದರೆ ಕಾಣಿಸುವುದು ಭವ್ಯ ದಿವ್ಯವಾದ ಗರ್ಭಗುಡಿ. ಅಲ್ಲಿ ಶ್ರೀವೇಣುಗೋಪಾಲ ಕೃಷ್ಣ ಸ್ವಾಮಿಯನ್ನು ಕಣ್ಣಾರೆ ಆಲಿಸಬಹುದು. ಸ್ವಾಮಿಯ ಬಲಗೈನಲ್ಲಿ ಚಕ್ರವಿದ್ದು ಹಾಗೂ ಎಡಗೈನಲ್ಲಿ ಶಂಖವಿದೆ ಹಾಗೆ ಅವನಿಗೆ ಪ್ರಿಯವಾದ ಕೊಳಲನ್ನು ಸಹ ಹಿಡಿದಿದ್ದಾನೆ. ''ಪಾದ ದರ್ಶನಂ ಕೃಷ್ಣ ಪಾಪನಾಶನಂ, ಸರ್ವಾಂಗ ದರ್ಶನಂ ಕೃಷ್ಣ ಸರ್ವಪಾಪನಾಶಂ''.

ಗರ್ಭಗುಡಿಯ ಬಲಕ್ಕೆ ರುಕ್ಮಿಣಿ ತಾಯಿ ಹಾಗೆ ಎಡಕ್ಕೆ ಶ್ರೀ ನಂಬಿ ನಾರಾಯಣ ಸ್ವಾಮಿಯ ಮೂರ್ತಿಯನ್ನು ಕಾಣಬಹುದು.

ಈ ರುಕ್ಮಿಣಿ ತಾಯಿಗೆ ಅರಿಶಿನದಿಂದ ಅರ್ಚನೆ ಮಾಡುವುದೇ ಇಲ್ಲಿಯ ವಿಶೇಷ. ಆಕೆಯ ಸೌಂದರ್ಯ ಕಣ್ಣು ತುಂಬಿ ಮಾರು ಹೋಗುವಂತೆ ಆಗುತ್ತದೆ.

ಈ ನಂಬಿ ನಾರಾಯಣ ಸ್ವಾಮಿಯು. ನಂಬಿ ಬಂದವರನ್ನು ಕಾಪಾಡುತ್ತಾನೆ. ''ಧರ್ಮೋರಕ್ಷತಿ ರಕ್ಷಿತಃ'' ಎಂಬ ದಿವ್ಯ ಸಂದೇಶದ ಪ್ರತಿ ರೂಪ ಈ ಸ್ವಾಮಿ.

ಈ ದೇವಾಲಯದ ವಿಶೇಷವೇನೆಂದರೆ ಇಲ್ಲಿ ಮೊದಲು ಪ್ರತಿಷ್ಠಾಪನೆಯಾಗಿದ್ದು ''ನಂಬಿ ನಾರಾಯಣ ಸ್ವಾಮಿ'' ಆದರೆ ಇಲ್ಲಿ ಈ ಮುದ್ದು ಗೋಪಾಲನಿಗೆ ಅಧ್ಯತೆ ನೀಡಲಾಗಿದೆ.

ಇಲ್ಲಿ ಅಂಬೆಗಾಲಿನಲ್ಲಿ ಕುಳಿತ ಕೃಷ್ಣನು ತನ್ನ ಕೈನಲ್ಲಿ ನವನೀತವನ್ನು ಹಿಡಿದಿರುವುದೇ ಒಂದು ಸೊಗಸು. ಇಲ್ಲಿಗೆ ಭಕ್ತರು ಸಂತಾನ ಪ್ರಾಪ್ತಿಗಾಗಿ ಮೊರೆ ಹೋಗುತ್ತಾರೆ, ಮತ್ತು ಹರಕೆ ಹೊತ್ತುವುದು ತುಂಬಾನೇ ಶ್ರೇಷ್ಠ. ಸಂತಾನ ಭಾಗ್ಯವಾದ ನಂತರ ತೊಟ್ಟಿಲನ್ನು ಕಟ್ಟುವ ವಾಡಿಕೆ ಇದೆ.

ಪೂರ್ವದಿಕ್ಕಿನಲ್ಲಿ ಶ್ರೀವೈಷ್ಣವರ ಸಂಪ್ರದಾಯದಂತೆ ಎಲ್ಲಾ ಆಳ್ವಾರುಗಳನ್ನು ಆಚಾರ್ಯಗಳನ್ನು ಪ್ರತಿಷ್ಠಾಪಿಸಿದ್ದಾರೆ. ಈ ಆಳ್ವಾರಗಳಲ್ಲಿ ಅವರವರ ತಿರುನಕ್ಷತ್ರದಂದು ವಿಜೃಂಭಣೆಯಿಂದ ವಿಶೇಷವಾಗಿ ಪೂಜೆ ಸಲ್ಲಿಸುತ್ತಾರೆ. ಮುಂದೆ ಸಾಗಿದರೆ ದರ್ಪಣ ಅಂದ್ರೆ ಕನ್ನಡಿ ಸೇವೆಯ ಮಂದಿರವಿದೆ. ಇಲ್ಲಿ ಆಷಾಢಮಾಸ ಹಾಗೂ ವಿಶೇಷ ದಿನಗಳಲ್ಲಿ ಬಹು ಸುಂದರವಾಗಿ ಅಲಂಕರಿಸುತ್ತಾರೆ. ಆ ದರ್ಶನ ಮಾಡಿದರೆ ಭವ ಬಂಧನದಿ ಮುಕ್ತಿ ದೊರೆಯುವಂತೆ ಆಧ್ಯಾತ್ಮಕ ಒಲವನ್ನು ಹೆಚ್ಚಿಸುತ್ತದೆ.

ಅದರ ನಂತರ ಸಿಗುವುದೇ ಪಾಕಶಾಲೆ , ವಿಧ ವಿಧವಾದ ಪ್ರಸಾದ ಹಾಗೂ ಭಕ್ಷಣವನ್ನು ಭಕ್ತಿಯಿಂದ ಮಾಡಿ ದೇವರಿಗೆ ನೈವೇದ್ಯ ಮಾಡುತ್ತಾರೆ. ಇದರ ಪಕ್ಕದಲ್ಲಿ ಗೋಪಾಲಕನಿಗೆ ಪ್ರಿಯವಾದ ಗೋ ಶಾಲೆಯು ಇದೆ. ಈ ದೇವಾಲಯದಲ್ಲಿ ಒಂದು ಪ್ರವಚನ ಮಂದಿರವನ್ನು ಸ್ಥಾಪಿಸಿದ್ದಾರೆ. ಇಲ್ಲಿ ಧಾರ್ಮಿಕ ವಿಷಯಗಳನ್ನು ಮತ್ತು ದೇವರ ಬಗ್ಗೆ ಉಪನ್ಯಾಸವನ್ನು. ಪಂಡಿತರ ಮೂಲಕ ಮನಮುಟ್ಟುವಂತೆ ಪ್ರವಚನ ನೀಡುತ್ತಾರೆ ಜೊತೆಗೆ ಭಕ್ತನಿಗೂ ದೇವರಿಗೂ ಇರುವ ಸಂಬಂಧ ಹಾಗೂ ಅನುಬಂಧ ಇನ್ನೂ ಹೆಚ್ಚು ಹೆಚ್ಚು ಆಗುವಂತೆ ಮನಸ್ಸಿನಲ್ಲಿ ಒಂದು ಸುಂದರವಾದ ಕಲ್ಪನೆ ಮೂಡುತ್ತದೆ. ಇನ್ನೊಂದು ವಿಶೇಷ ಏನೆಂದರೆ ಪ್ರತಿವರ್ಷವು ನವರಾತ್ರಿ ಹಬ್ಬದಂದು ಎಲ್ಲಾ ರೀತಿಯ ಗೊಂಬೆಗಳನ್ನು ಕೂರಿಸಿ ಅಲಂಕರಿಸುತ್ತಾರೆ. ಹಾಗೆ ಪ್ರತಿವರ್ಷವೂ ಬರುವ ಬ್ರಹ್ಮರಥೋತ್ಸವವನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಆದರೆ ಕಡೆಯ ದಿನದಲ್ಲಿ ಶಯನೋತ್ಸವವನ್ನು ತುಂಬಾನೇ ಅದ್ದೂರಿಯಾಗಿ ಹೂವುಗಳಿಂದ ಸಾಲು ಸಾಲು ವಿದ್ಯುತ್ ದೀಪಗಳಿಂದ ಅಲಂಕರಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ. ಶ್ರೀವೈಷ್ಣವರು ಮುಖ್ಯವಾಗಿ ಪೂಜಿಸುವುದು''ಗೋದಾದೇವಿ''ಅಂದರೆ ''ಆಂಡಾಳ್'' ಪ್ರತಿವರ್ಷ ಧನುರ್ಮಾಸದಲ್ಲಿ ನಿತ್ಯ ಆ ತಾಯಿಗೆ ಬೆಳಗಿನ ಜಾವ ವಿಶೇಷ ಪೂಜೆ ನೆರವೇರುವುದರ ಜೊತೆಗೆ ಆ ದೇವಿ ಬರೆದಿರುವ ತಿರುಪಾವೈ 30 ಪಾಶುರಗಳನ್ನು ಅನುಸಂಧಾನ ಮಾಡಿ ಪ್ರತಿನಿತ್ಯ ಒಂದೊಂದಾಗಿ ಪಠನೆ ಮಾಡಿ ಅದರ ಪ್ರವಚನವನ್ನು ನೀಡುವುದು ವಿಶೇಷ ಆ ಮೂವತ್ತು ಪಾಶುರಗಳು ಕೃಷ್ಣನ ವೈಭೋಗ,ಅವನ ಸೌಂದರ್ಯ, ಅವನಲ್ಲಿನ ಲೀಲೆಗಳನ್ನು ವರ್ಣಿಸಿದ್ದಾರೆ. ಹಾಗೆಯೇ ಈ 30 ದಿನವು ಸಹ ಪೊಂಗಲ್ ಪ್ರಸಾದವನ್ನು ಮಾಡಿ ಬಂದ ಭಕ್ತರಿಗೆ ತೀರ್ಥ ಪ್ರಸಾದವನ್ನು ಹಂಚುತ್ತಾರೆ.

ಯಜ್ಞಗಳನ್ನು ಮಾಡುವುದಕ್ಕಾಗಿ ಒಂದು ವಿಶೇಷವಾದ ಯಾಗ ಶಾಲೆಯನ್ನು ಕಟ್ಟಲಾಗಿದೆ. ಇದರಲ್ಲಿ ವಿವಿಧ ರೀತಿಯಾದ ಯಾಗಗಳ ಮೂಲಕ ಪರಮಾತ್ಮನ ಕೃಪಾಕಟಾಕ್ಷಕ್ಕೆ ಶರಣಾಗುವುದು ಆ ಒಂದು ಕ್ಷಣ ದೇಹವು ದೇವಾಲಯದಂತೆ ಭಾಸವಾಗುತ್ತದೆ.ಈ ದೇವಾಲಯದ ಆವರಣದಲ್ಲಿ ಕೋದಂಡರಾಮ, ಲಕ್ಷ್ಮಣ, ಸೀತಾಮಾತೆ ಹಾಗೂ ಆಂಜನೇಯನನ್ನು ಸಹ ಕಾಣಬಹುದು.

ವೈಶಾಖಮಾಸದಲ್ಲಿ ರಾಮನಿಗೆ ರಥೋತ್ಸವ ನೆರವೇರಿಸುತ್ತಾರೆ.ಎಲ್ಲಿ ರಾಮನು ಅಲ್ಲಿ ಹನುಮನು ಇರುತ್ತಾನೆ, ಹಾಗೆ ಈ ದೇವಾಲಯದಲ್ಲೂ ಸಹ ಹನುಮನ ಗುಡಿಯು ಇದೆ. ಇಲ್ಲಿ ಒಂದು ಏಕಶಿಲೆಯ ಮೂರ್ತಿಯನ್ನು ಕಾಣಬಹುದು ಅಂದರೆ ಮುಂದೆ ಶ್ರೀ ಸುದರ್ಶನ್ ಚಕ್ರವಿದ್ದು ಹಿಂಬದಿಯಲ್ಲಿ ನರಸಿಂಹ ಸ್ವಾಮಿ ಇರುವುದು ತುಂಬಾ ವಿಶೇಷತೆ. ಗೋಕುಲಾಷ್ಟಮಿ ಹಬ್ಬದಂದು ದೇವಾಲಯವನ್ನು ಅತಿ ವೈಭೋಗ ವೈವಿಧ್ಯಮಯವಾಗಿ ಅಲಂಕರಿಸುವುದರ ಜೊತೆಗೆ ಬಗೆ ಬಗೆಯ ತಿಂಡಿ ತಿನಿಸುಗಳಿಂದ ಹಾಗೂ ಹಣ್ಣುಗಳಿಂದ ಅಲಂಕರಿಸುತ್ತಾರೆ. ಮಾನವನು ಸ್ವಾಮಿಯ ದರ್ಶನದಿಂದ ಒಂದು ದೈವೀಕವಾದ ಸಂಬಂಧದಲ್ಲಿ ಆ ಸ್ವಾಮಿಯನ್ನು ಸ್ಮರಿಸುತ್ತಾನೆ.

ವಸುದೇವಸುತಂ ಸೇವಂ ಕಂಸಚಾಣುರ ಮರ್ಧನಂ
ದೇವಕಿ ಪರಮಾನಂದಂ ಕೃಷ್ಣಂವಂದೇ ಜಗದ್ಗುರುಂ

ಬನ್ನಿ ಎಲ್ಲರೂ ಶ್ರೀ ಕೃಷ್ಣನ ಅನುಗ್ರಹಕ್ಕೆ ಪಾತ್ರರಾಗೋಣ ಕೃಷ್ಣ ಎಂದರೆ ಸಾಕು ಕಷ್ಟವೂ ಒಂದಿಷ್ಟಿಲ್ಲ ಎಂಬುದರ ಜೊತೆಗೆ ಸರ್ವಂ ಶ್ರೀ ಕೃಷ್ಣಾರ್ಪಣ ಮಸ್ತು.




# ತಿಮ್ಮಲಾಪುರದ ಶ್ರೀನಿವಾಸ ದೇವರ ಮಹಿಮೆ

– ಶ್ರೀಧರ ರಾಯಸಂ

ಕರ್ನಾಟಕದ ವಿಜಯನಗರ ಜಿಲ್ಲೆ, ಹರಪನ ಹಳ್ಳಿ ನಗರ ಅನಾದಿ ಕಾಲದಿಂದಲೂ ಧಾರ್ಮಿಕ ಸಾಹಿತ್ಯಿಕ, ನೆಲೆವೀಡು ! ದಾಸಸಾಹಿತ್ಯದಲ್ಲಿ ಗುರುತಿಸಿಕೊಂಡಿರುವ, "ಹರಪನಹಳ್ಳಿ, ಭೀಮವ್ವ ಈ ಊರಿನ ಅಪೂರ್ವ. ಕೊಡುಗೆ ! ಹರಪನಹಳ್ಳಿ ನಗರಕ್ಕೆ ಪೂರ್ವ, ದಿಕ್ಕಿನಲ್ಲಿರುವ ತಿಮ್ಮಲಾಪುರದ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ, ಸಕಲ ಕುಲದವರ ಆರಾಧ್ಯ ದೈವ. ಹರಪನಹಳ್ಳಿ ಭೀಮವ್ವನವರಂತೂ ಭಕ್ತಿಯಿಂದ ತಮ್ಮ ಮನೆದೇವರಾದ ಶ್ರೀನಿವಾಸನನ್ನು ಹಾಡಿ ಕೊಂಡಾಡಿದ್ದಾರೆ. ಕಂಡು ಧನ್ಯನಾದೆ, ನಂದ ತನಯನಾ, ಕಣ್ಣಾರೆ ಕಂಡು ,

ಕಂಡು ಧನ್ಯನಾದೆ, ದಣಿಯವೆನ್ನ ಎರಡು ಕಂಗಳೀಗ
ತಿರುಗಿ ಪೋಗಲಾರೆ ತಿರುಮಲಾಪುರೀಶ ದೊರೆಯಬಿಟ್ಟು
ಸಾಲು ದೀವಿಗೆ, ಸಣ್ಣ ನಾನು ಸಂದ ಮಧ್ಯ ವೈಜಯಂತಿ
ಸೂರ್ಯನಂತೆ ಹೊಳೆವ ಮುದ್ದು ಮಧ್ಯ ವೈಜಯಂತಿ
ಸೂರ್ಯನಂತೆ ಹೊಳೆವ ಮುದ್ದು ಮುಖವು ಮಹಾದ್ವಾರದಲ್ಲೆ
ಶಂಖ ಚಕ್ರ ಶ್ಯಾಮವರುಣ ಅಂಕಿತವುಳ್ಳ ನಾಮಗಳಿಂದ
ಪಂಕಜಾಕ್ಷ ಪರಮ ವೆಂಕಟನೆಂಬೋ ನಾಮಾಂಕಿತದವನಾ
ಆ ಮಹಾ ವೈಕುಂಠದಲ್ಲಿ ವಾಸವಾದ ನಮ್ಮ ಕುಲ

ಸ್ವಾಮಿ ಎನಿಸಿಕೊಂಡ ಭೀಮೇಶಕೃಷ್ಣನ ದಯದಿಂದೀಗ !! ಎಂದು ಹಾಡಿದ್ದಾರೆ, ವಿಜಯದಾಸರೂ,

ತಿಮ್ಮಲಾಪುರದ ಶ್ರೀನಿವಾಸ ದೇವರನ್ನು ದರ್ಶಿಸಿ ಧನ್ಯರಾಗಿ ಭಾವ ಪರವಶರಾಗಿ, ''ಇಂಥಾ ಪ್ರಭುವ ಕಾಣೆನೊ, ಈ ಜಗದೊಳಗಿಂಥಾ ಸ್ವಾಮಿಯ ಕಾಣೆನೊ'' ಎಂದು ಹಾಡಿ ಹೊಗಳಿದ್ದಾರೆ. ಅದೇ ರೀತಿ ಹರಿಕಥಾ ಮೃತಸಾರ ಅದ್ಭುತ ಗ್ರಂಥ ರಚಿಸಿದ ಜಗನ್ನಾಥದಾಸರು, ಶ್ರೀನಿವಾಸನ ದರ್ಶನ ಮಾಡಿ ಸೇವೆ ಮಾಡಿ. ಕೃತಾರ್ಥರಾಗಿದ್ದು, ಶ್ರೀನಿವಾಸನ ಅಪಾರ ಮಹಿಮೆಯಿಂದ ನಿದರ್ಶನವಾಗಿದೆ.

ಕ್ರಿ.ಶ. 1566 ರಲ್ಲಿ ಬೇಡ ಜನಾಂಗದ ಪಾಳೆಗಾರ ನಾಯಕರಾದ ದಾದಣ್ಣನಾಯಕ ಮತ್ತು ರಂಗಣ್ಣನಾಯಕ ಹರಪನಹಳ್ಳಿ ರಾಜಧಾನಿ ಮಾಡಿಕೊಂಡು ಆಳುತ್ತಿದ್ದರು. ರಾಜರ ಪಟ್ಟಾಭಿಷೇಕದ ಹಿಂದಿನ ರಾತ್ರಿ ಸ್ವಪ್ನದಲ್ಲಿ ನಾಯಕದ್ವಯರಿಗೆ, ಶ್ರೀ ವೆಂಕಟೇಶ್ವರ ದರ್ಶನವಿತ್ತು. ಹರಪನ ಹಳ್ಳಿ ಹತ್ತಿರವಿರುವ ಮೈದೂರು ಗ್ರಾಮದ ಕೊಟ್ಟಿಗೆ ಗೋದಲಿಯಲ್ಲಿ ನನ್ನನ್ನು ಮುಚ್ಚಿಟ್ಟಿದ್ದಾರೆ. ನೀವು ನನ್ನನ್ನು ಪ್ರತಿಷ್ಠೆ ಮಾಡಲು ಇಚ್ಛಿಸಿದರೆ ಚಕ್ಕಡಿಯಲ್ಲಿ ಮೈದೂರಿನಿಂದ ತಂದು ಪ್ರತಿಷ್ಠೆ ಮಾಡಿರಿ. ಆದರೆ ಯಾರೂ ಚಕ್ಕಡಿಯನ್ನು ಹಿಂತಿರುಗಿ, ನೋಡಬಾರದೆಂದು ಅಜ್ಞಾಪಿಸಿದಂತೆ ಸ್ವಪ್ನವಾಯಿತಂತೆ ಶ್ರೀನಿವಾಸನ ಶಿಲಾಮೂರ್ತಿ ಜನಮೇಜಯನ. ಕಾಲದ್ದು ಎಂದು ನಂಬಿಕೆ! ಸ್ವಪ್ನದಲ್ಲಿ ತಿಳಿಸಿದಂತೆ, ದಾದಣ್ಣ ರಂಗಣ್ಣ ಪಾಳೆಗಾರರು ಮೈದೂರಿನಿಂದ ದೇವರ



ಸುಂದರ ವಿಗ್ರಹ ತರುತ್ತಿರಲು ಬಾಲಕ ಗೆಜ್ಜೆ ಶಬ್ಧ ಮಾಡಿದಂತೆ ಭಾಸವಾ ಯಿತು. ಈಗಿರುವ ದೇವರ ತಿಮ್ಮಲಾಪುರ ಗ್ರಾಮದ ಹತ್ತಿರ ದಾದಣ್ಣ, ರಂಗಣ್ಣ ಹಿಂತಿರುಗಿ ನೋಡಲು, ಚಕ್ಕಡಿ ಚಲಿಸದೇ, ನಿಂತಿತು ! ಅಂದೇ ಪುನಃ ನಾಯಕದ್ವಯರ ಸ್ವಪ್ನದಲ್ಲಿ ಅದೇ. ಗ್ರಾಮದಲ್ಲಿ ಗುಡಿ ಕಟ್ಟಿಸ ಬೇಕೆಂದು ಅಜ್ಞಾಪನೆಯಾಯಿತು. ದಾದಣ್ಣ ರಂಗಣ್ಣ ಸುಂದರವಾದ ಗುಡಿ ವಿಶ್ರಾಂತಿ ಅಂಕಣ, ಮತ್ತು ಶಿಲಾಮಂಟಪ ಕಟ್ಟಿಸಿದರು. ಮೂರ್ತಿ ಪ್ರತಿಷ್ಠಾಪನೆಗೆ ಶ್ರೀವ್ಯಾಸರಾಜರು ಅದೇ ದಾರಿಯಲ್ಲಿ ಆಗ ಮಿಸಿದಾಗ, ನಾಯಕದ್ವಯರು, ದೇವರ ಪ್ರತಿಷ್ಠಾಪನೆಗೆ ಪ್ರಾರ್ಥಿಸಿ ದಾಗ, ಲಕ್ಷ್ಮೀದೇವಿ ಇಲ್ಲದೆ ವೆಂಕಟೇಶ್ವರನ ಪ್ರತಿಷ್ಠಾಪನೆಸಲ್ಲದು. ಮೈದೂರಿನಲ್ಲಿ, ಒರಳು, ಕಲ್ಲಿನ ಅಡ್ಡಿಯಲ್ಲಿ ಲಕ್ಷ್ಮೀದೇವಿಯ ವಿಗ್ರಹ ಇದೆ. ಮನೆ ಮಾಲೀಕನ ಮನವೊಲಿಸಿ, ವಿಗ್ರಹ ತಂದು ವೆಂಕಟೇಶನ, ಜೊತೆಗೆ ಪ್ರತಿಷ್ಠಾಪಿಸಿ ಎಂಬ ಗುರುಗಳ ಆದೇಶದಂತೆ ಆ ಬ್ರಾಹ್ಮಣನ (ಕಟ್ಟಿ ಸೇತುರಾಮಾಚಾರ್ ವಂಶಸ್ಥರು) ಒಪ್ಪಿಗೆ ಪಡೆದು ಶ್ರೀವ್ಯಾಸ ರಾಜರಿಂದ, ಲಕ್ಷ್ಮೀ ವೆಂಕಟೇಶ್ವರಸ್ವಾಮಿ ದೇವರನ್ನು ಪ್ರತಿಷ್ಠಾಪಿಸಲ್ಪ ಟ್ಟಿತು.

ಅನೇಕ ಭಕ್ತರಿಗೆ ಕುಲದೈವನಾಗಿ ವರವ ನೀಡುವ ಭಕ್ತ ಜನಪರಿಪಾಲಕ ತಿಮ್ಮಲಾಪುರದ ಶ್ರೀನಿವಾಸನ ಮಹಿಮೆ ಅಪಾರ!! ತದ ನಂತರ ಹಲವು ವರ್ಷಗಳ ನಂತರ ಹರಪನಹಳ್ಳಿ ತಾಲೂಕಿನ ತಹಶೀಲ್ದಾರ್ ಕಂದಿ ಶೇಷಗಿರಿ ರಾಯರು, ತಿಮ್ಮಲಾಪುರದಯ್ಯನ ಗುಡಿಯ ಮಹಾದ್ವಾರ, ಬೃಹತ್ ಗೋಪುರ ಇತರ ಮಂಟಪಗಳನ್ನು ಜನರ ನೆರವಿನಿಂದ ಕಟ್ಟಿಸಿ, ಕೃತಾರ್ಥರಾಗಿದ್ದಾರೆ. ಬನ್ನಿ ಮುಡಿಯುವ ದಸರಾ ಹಬ್ಬದ ಸಮಯದಲ್ಲಿ ಹರಪನಹಳ್ಳಿ. ಕೋಟಿ ಆಂಜನೇಯನ (ದುರುಗದಯ್ಯ) ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ತಂದು ತಿಮ್ಮಲಾಪುರದ ಶ್ರೀನಿವಾಸನಿಗೆ ಬನ್ನಿ. ಮುಡಿಯುವ ಸಂಪ್ರದಾಯ ಚಾಚೂ, ತಪ್ಪದೆ ನಡೆಸಿಕೊಂಡು ಬಂದಿದೆ. ಬನ್ನಿ ಕಟ್ಟೆಯ ಮೇಲೆ ನಾಯಕದ್ವಯರು, ರಾಯಸದ ಅಕ್ಕಪ್ಪನವರಿಗೆ, ಅಧೀಕೃತ ಪತ್ರ ಬರೆಯುವ ಅಧಿಕಾರ ನೀಡಿದ್ದು. ರಾಜಮರ್ಯಾದೆ ದೊರೆತಿದ್ದು ಈಗ ಇತಿಹಾಸ! ದೇವರ ಗುಡಿಯ ಪ್ರಾಂಗಣದಲ್ಲಿ ಕಣ್ಣು ಕೊಟ್ಟಪ್ಪನ ಗುಡಿ ಸಹ ಭಕ್ತರು ನೋಡ ಬಹುದು. ನೇತ್ರ ಪೀಡೆ ಅನುಭವಿಸುವವರು, ಈ ಗುಡಿಯಲ್ಲಿ ಸೇವೆ ಮಾಡಿದರೆ, ನೇತ್ರ ಭಾಧೆ ಪರಿಹಾರವಾಗುವುದೆಂದು ಪರಿಪಾಠವಿದೆ. ದಾದಣ್ಣ.ರಂಗಣ್ಣ ನಾಯ ಕರ ಪ್ರತಿಮೆಗಳೂ ಸಹ ದೇವರ ಅಭಿಮುಖದಲ್ಲಿದೆ. ಗರ್ಭಗುಡಿಯ ಒಳ ಆವರ ಣದಲ್ಲಿ, ಶ್ರೀಭೂವರಾಹ ದೇವರ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಭಕ್ತರು ಈ ದೇವ ರಿಗೆ, ಆಲೂಗಡ್ಡೆ ನೈವೇದ್ಯ ಸಮರ್ಪಣೆ ಮಾಡುವ ವಿಶೇಷ ಸಂಪ್ರದಾಯವಿದೆ. ತಿಮ್ಮಲಾಪುರದ ಗುಡಿಯಲ್ಲಿ ದೇವರ ಸೇವೆ ಮಾಡಿ ಅನೇಕ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಸಿದ್ಧಿಸಿಕೊಂಡಿದ್ದಾರೆ. ಅದಲ್ಲದೇ, ದೇವರ ಮಹಿಮೆ, ಪವಾಡಗ ಳನ್ನು ಕಂಡು, ಅಚ್ಚರಿಪಟ್ಟಿದ್ದಾರೆ. ಉತ್ತರಾಧಿಮಠಾಧೀಶರಾಗಿದ್ದ, ಶ್ರೀ ಸತ್ಯಪರಾ ಯಣ ತೀರ್ಥರು, ಒಮ್ಮೆ ತಿಮ್ಮಲಾಪುರಕ್ಕೆ ಆಗಮಿಸಿದಾಗ, ವಿಜಯದಾಸರ ಅಪೇಕ್ಷೆಯಂತೆ ಗುಡಿಯ ಹೊರ ಆವರಣದಲ್ಲಿ ಪ್ರಾಣದೇವರ ವಿಗ್ರಹ ಪ್ರತಿ ಷ್ಠಾಪಿಸಿ, ಪೂಜೆಗೆ ನೆರವಾದರು. ಈ ದೇವಾಲಯದಲ್ಲಿ, ಅನೇಕ ವಿವಾಹಗಳು, ಮಂಗಳ ಕಾರ್ಯಗಳು, ಹೋಮಗಳು ನಡೆಯುತ್ತವೆ. ಮೂರು ಅಂತಸ್ತಿನ ಸುಂದರ ಗೋಪುರ ಹತ್ತು ಕಿಲೋ ಮೀಟರ್‌ನಿಂದ ಕಾಣಿಸುವ ಅಪೂರ್ವ ದೃಶ್ಯ ! ನೀರಿನ ಅನಾನುಕೂಲ ಪರಿಸ್ಥಿತಿ ಸಂದರ್ಭದಲ್ಲಿ ದೇವಸ್ಥಾನದ ಆವರಣದಲ್ಲಿ ಕೊಳವೆ ಭಾವಿ ಹಾಕಿಸಿ ಸಿಹಿ ನೀರು ದೊರಕಿ ಸಮೃದ್ಧ ನೀರು, ಭಕ್ತಾದಿಗಳಿಗೆ ದೊರಕುವಂತೆ ಪ್ರಯತ್ನ ಮಾಡಿದ ದಂಡಿನ ಡಾ॥ ಕೃಷ್ಣ ಅಗ್ನಿಹೋತ್ರಿ ಕೃಷ್ಣ ಭಟ್ಟರು, ಕಟ್ಟಿ ಸೇತು ರಾಮಾಚಾರ್, ಸದಾ ಸ್ಮರಣೀಯರು. ಹರಪನ ಹಳ್ಳಿಯಲ್ಲಿ ಪಂಡಿತ ಚಿಕ್ಕೇರೂರು ಗೋವಿಂದಾಚಾರ್ಯರು ತಮ್ಮ ಅಮೃತಹಸ್ತದಿಂದ ಅದರ ಪ್ರಾರಂಭೋತ್ಸವ ಜರುಗಿಸಿ, "ಪಾಪನಾಶಿನಿ ತೀರ್ಥ" ಎಂದು ಹೆಸರಿಟ್ಟರು. ಕಟ್ಟಿ ಸೇತುರಾಮಾಚಾರ್ ವಂಶಸ್ಥರು ಪ್ರತಿ ವರ್ಷ ದೇವರ ರಥೋತ್ಸವ ಜರುಗಿಸಿ, ಜಾತ್ರೆ, ಅನ್ನ, ಸಂತರ್ಪಣೆ ಮಾಡುವ ಸಂಪ್ರದಾಯ ನಡೆಸಿಕೊಂಡು ಬರುತ್ತಿದ್ದಾರೆ. ಗುಡಿಯ ಹೊರ ಆವರ ಣದಲ್ಲಿ ಸುಂದರವಾದ ಕಲ್ಯಾಣ ಮಂಟಪ ಕಟ್ಟಿಸಿದ್ದಾರೆ. ಅನೇಕ ಮಂಗಳ ಕಾರ್ಯ ಗಳು ಜರುಗುತ್ತವೆ. ಮಾರ್ಗಶಿರ ಮಾಸ ಶುಕ್ಲ ಪಕ್ಷ ಹುಣ್ಣಿಮೆ ದಿವಸದಂದು, ದೇವರ ರಥೋತ್ಸವ ಜರುಗಿ, ಎಲ್ಲರ ಕುಲ ದೈವ ಶ್ರೀನಿವಾಸ ದೇವರು, ಭಕ್ತರು ಮನೋ ಅಭೀಷ್ಟೆಗಳನ್ನು ಪೂರೈಸುವ ಕೃತಾರ್ಥ ಮಾಡುವ ದೈವನಾಗಿದ್ದಾನೆ.





# ಕಾರ್ತೀಕ ಮಾಸದ ಕಡಲೆ ಕಾಯಿ ಪರೀಷೆ

- ಶ್ರೀಮತಿ. ಪಾರಿಜಾತ ಬಿ.ಎಸ್.
90083 35689



ಸಂತೆ, ಜಾತ್ರೆ, ಪರಿಷೆಗಳೆಂಬ ಹೆಸರಿನಲ್ಲಿ ಜನ ಸೇರುವುದು ವ್ಯಾಪಾರ ವಹಿವಾಟುಗಳು, ಧಾರ್ಮಿಕ, ಕಾರ್ಯಗಳೊಂದಿಗೆ ಆರ್ಥಿಕ, ಸಾಮಾಜಿಕ ಕಾರ್ಯಗಳಿಗೂ ಕೊಂಡಿ ಬೆಸೆಯುವುದು ಬಹು ಹಿಂದಿನಿಂದ ಬೆಳೆದು ಬಂದ ಆಚರಣೆ. ವಾರದ ಒಂದು ದಿನ ರೈತರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ''ಸಂತೆ'' ಯೆಂಬ ಹೆಸರಿನಲ್ಲಿ ಗ್ರಾಹಕರೊಂದಿಗೆ ವ್ಯಾಪಾರ ನಡೆಸುವುದು ಒಂದಾದರೆ. ದೇವರ ಹೆಸರಿನಲ್ಲಿ ಧಾರ್ಮಿಕ ಕಾರ್ಯಕಲಾಪಗಳೊಂದಿಗೆ, ಯಾವುದೇ ಬೇದಭಾವವಿಲ್ಲದೆ ಜನರು ಒಟ್ಟಾಗಿ ಸೇರಿ 'ಜಾತ್ರೆ' ಎಂದು ಸಾಮಾಜಿಕ ಒಗ್ಗಟ್ಟನ್ನು ಸ್ಥಾಪಿಸುವುದು ಮತ್ತೊಂದು ಬಗೆ. ಯಾವುದೋ ವಿಶಿಷ್ಟವಾದ ಪ್ರಮುಖ ಹಿನ್ನೆಲೆಯಲ್ಲಿ ಒಟ್ಟಾಗಿ ಸೇರಿ ಸಾಮಾಜಿಕ ಆರ್ಥಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ಒಗ್ಗಟ್ಟನ್ನು ಕಾಪಾಡುವುದು,ತಮ್ಮ ಆಚರಣೆ, ರೂಢಿ ಸಂಪ್ರದಾಯಗಳನ್ನು ಉಳಿಸುವುದು ಮತ್ತೊಂದು ಮಹತ್ತರವಾದ ಕಾರ್ಯ.

ಇಂತಹ ಕಾರ್ಯಗಳು ವ್ಯಕ್ತಿಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನಕ್ಕೆ ಉತ್ತಮ ಹುರುಪನ್ನು ಪ್ರೇರಣೆಯನ್ನು ಶಕ್ತಿಯನ್ನು ತುಂಬುತ್ತವೆ. ಇವು ಮುಂದಿನ ಪೀಳಿಗೆಗೆ ಸಂದೇಶವನ್ನು ಸಾರುತ್ತವೆ. ಇಂತಹ ಕಾರ್ಯ ಕ್ರಮಗಳಲ್ಲಿ ಕಡಲೆಕಾಯಿ ಪರೀಷೆ ತನ್ನದೆ ಆದ ಮಹತ್ವದ ಸ್ಥಾನ ಪಡೆದಿದೆ.

ಬೆಂಗಳೂರಿನ ಬಸವನ ಗುಡಿಯಲ್ಲಿ ಪ್ರತೀ ವರ್ಷ ನಡೆಯುವ ದೊಡ್ಡ ಬಸವನ ಜಾತ್ರೆಯು ''ಕಡಲೆಕಾಯಿ ಪರೀಷೆ'' ಯೆಂದು ಪ್ರಪಂಚದಾದ್ಯಂತ ಪ್ರಖ್ಯಾತಿ ಪಡೆದಿದೆ. ಕಾರ್ತೀಕ ಮಾಸದ ಕೊನೆಯ ಸೋಮವಾರ ಈ ಪರೀಷೆಯು ನಡೆಯುತ್ತದೆ.ಇಲ್ಲಿನ ಸುತ್ತ ಮುತ್ತಲ ಪ್ರದೇಶಗಳ ನಡುವೆ ಬಸವನ ಗುಡಿ ಧಾರ್ಮಿಕ ಕೇಂದ್ರವಾಗಿ, ವಿವಿಧ ದೇವಾನು ದೇವತೆಗಳ ದೇಗುಲಗಳು, ಬೆಟ್ಟ ಗುಡ್ಡಗಳಿಂದ ಆವೃತವಾಗಿದೆ. ಇಂತಹ ವಿಶೇಷ ಮಹತ್ವ ಪಡೆದ ಪ್ರದೇಶದಲ್ಲಿ ಕಡಲೆ ಕಾಯಿಪರೀಷೆ ನಡೆಯುವುದು ಹಾಗೂ ಅದರಲ್ಲಿ ಭಾಗವಹಿಸುವುದು ಇಲ್ಲಿನ ಜನರು ಮಾತ್ರವಲ್ಲದೆ, ಅನೇಕ ಜಿಲ್ಲೆಗಳ ವ್ಯಾಪಾರಸ್ಥರು ಆಗಮಿಸುತ್ತಾರೆ. ರೈತ ತಾನು ಬೆಳೆದ ಕಡಲೆ ಕಾಯಿಯನ್ನು ಸಾಮಾಜಿಕ ಅಥವಾ ಧಾರ್ಮಿಕ ಹಿನ್ನೆಲೆಯಲ್ಲಿ ಪರಿಷೆಯ ಮೂಲಕ ಜನರಿಗೆ ತಲುಪಿಸುವ ಕಾರ್ಯ ನಡೆಯುತ್ತದೆ.

### ಪೌರಾಣಿಕ ಹಿನ್ನೆಲೆ

ಹಿಂದೆ ಬಸವನಗುಡಿ ಪ್ರದೇಶವು 'ಸುಂಕೇನ ಹಳ್ಳಿ' ಎಂಬ ಹೆಸರನ್ನು ಹೊಂದಿತ್ತು. ಹಸಿರು ಗಿಡಮರಗಳಿಂದ ಪ್ರಾಕೃತಿಕವಾಗಿ ಸಮೃದ್ಧಿಯನ್ನು





ಹೊಂದಿರುವ ಈ ಪ್ರದೇಶವು ಸುತ್ತಮುತ್ತ ಗುಟ್ಟಹಳ್ಳಿ, ದಾಸರಹಳ್ಳಿ, ಗವೀಪುರಂ, ಮಾವಳ್ಳಿ, ಹನುಮಂತನಗರ ಇತ್ಯಾದಿ ಪ್ರದೇಶಗಳಿಂದ ಆವರಿಸಿದೆ. ಹಿಂದೆ ಈ ಪ್ರದೇಶಗಳಲ್ಲಿದ್ದ ರೈತರು ಹೆಚ್ಚಾಗಿ ನೆಲ ಗಡಲೆಯನ್ನು ಬೆಳೆಯುತ್ತಿದ್ದರು. ಪ್ರತೀ ಹುಣ್ಣಿಮೆಯ ದಿನದಂದು ದೊಡ್ಡ ಗೂಳಿಯೊಂದು ರೈತರ ಹೊಲಗಳಿಗೆ ನುಗ್ಗಿ ಬೆಳೆದ ಕಡಲೆಯನ್ನು ತಿಂದು ಹೊಲವೆಲ್ಲಾ ಹಾಳಾಗುತ್ತಿತ್ತು. ಇದನ್ನರಿತ ರೈತರು ಗೂಳಿಯನ್ನು ತಡೆಯಲು ಕಾದರು ಆದರೆ ಸಾಧ್ಯವಾಗಲಿಲ್ಲ. ಕಣ್ಣಿಗೆ ಕಾಣದ ರೀತಿಯಲ್ಲಿ ಬಂದು ತನ್ನ ಕೆಲಸ ಮುಗಿಸಿ ಹೋಗುತ್ತಿದ್ದ ಗೂಳಿಯ ಕುರಿತು ಯಾವುದೇ ಕ್ರಮ ಸಾಧ್ಯವಾಗದ ಕಾರಣ ಜನರು ಬಸವನ ಪ್ರಾರ್ಥನೆಗೆ ನಿಂತರು. ಹೊಲಗಳು ನಾಶವಾಗದಂತೆ ಕಾಪಾಡಲು ಬೇಡಿಕೊಂಡರು. ತಾವು ಬೆಳೆದ ಮೊದಲ ಬೆಳೆಯನ್ನು ಬಸವನಿಗೆ ನೀಡುವುದಾಗಿ ಹರಕೆ ಸಲ್ಲಿಸಿದರು.

ಇದಾದ ನಂತರ ಗೂಳಿಯ ದಾಳಿ ನಿಂತಿತು. ರೈತರು ನಿಟ್ಟುಸಿರು ಬಿಟ್ಟು ಬೆಳೆಗಳ ರಕ್ಷಣೆಗೆ ಕಾರಣನಾದ ಬಸವನನ್ನು ಪ್ರತೀ ವರ್ಷ ಪೂಜಿಸಲು ಮುಂದಾದರು. ತಾವು ಬೆಳೆದ ಕಡಲೆಕಾಯಿಯನ್ನು ಅವನಿಗೆ ಒಪ್ಪಿಸುವ ಕಾರ್ಯವನ್ನು ಕೈಗೊಂಡರು.

## ಐತಿಹಾಸಿಕ ಹಿನ್ನೆಲೆ

ಈ ಪ್ರದೇಶವನ್ನಾಳುತ್ತಿದ್ದ ಬೆಂಗಳೂರು ನಿರ್ಮಾತ ಕೆಂಪೇಗೌಡರ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ. 1537 ರಲ್ಲಿ ಈ ಪ್ರದೇಶದಲ್ಲಿ ಕಪ್ಪು ಕಲ್ಲಿನ ದೊಡ್ಡ ಬಸವನ ವಿಗ್ರಹವೊಂದು ದೊರೆಯಿತು. ಅದನ್ನು ಕೆಂಪೇಗೌಡರು ಈ ಪ್ರದೇಶದಲ್ಲೇ ಪ್ರತಿಷ್ಠಾಪಿಸಿದರು. ಈ ಪ್ರದೇಶಕ್ಕೆ "ಬಸವನ ಗುಡಿಯೆಂದು" ಹೆಸರಾಯಿತು. ಈ ಬಸವನಿಗೆ ದೇಗುಲವು ನಿರ್ಮಾಣವಾಯಿತು. ಆದರೆ ಇಲ್ಲಿನ ಬಸವನ ವಿಗ್ರಹವು ದಿನದಿಂದ ದಿನಕ್ಕೆ ಬೆಳೆಯ ತೊಡಗಿತು. ಇದರಿಂದ ಚಕಿತರಾದ ಜನರು ಬಸವನ ತಲೆಯ ಮೇಲೆ ಕಬ್ಬಿಣದ ಸಲಾಕೆಯನ್ನು ನೆಟ್ಟರು.

ಪ್ರತೀವರ್ಷ ಕಾರ್ತಿಕ ಮಾಸದ ಕೊನೆಯ ಸೋಮವಾರ ಇಲ್ಲಿ ಕಡಲೆಕಾಯಿ ಪರಿಷೆ ನಡೆಯುತ್ತದೆ. ಸುತ್ತಮುತ್ತಲ ಪ್ರದೇಶದ ರೈತರು ತಾವು ಬೆಳೆದ ನೆಲಕಡಲೆಯನ್ನು ತಂದು ಬಸವನಿಗೆ ಅರ್ಪಿಸುತ್ತಾರೆ. ವಿಶೇಷವಾದ ಪರಿಷೆ ನಡೆಯುತ್ತದೆ. ಹೀಗೆ ಈ ಪರಿಷೆಯು ಧಾರ್ಮಿಕವಾಗಿ ಪ್ರಾರಂಭವಾಗಿ ಇಂದು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿಯೂ ಜನರ ಪರಸ್ಪರ ವ್ಯಾಪಾರ ವ್ಯವಹಾರದ ಮಾರ್ಗಕ್ಕೆ ಕೊಂಡಿಯಾಗಿದೆ. ವಿವಿಧ ಜಿಲ್ಲೆಗಳಿಂದ, ರಾಜ್ಯಗಳಿಂದ, ದೇಶವಿದೇಶಗಳಿಂದಲೂ ಜನರು ಈ ಸಂದರ್ಭದಲ್ಲಿ ಇಲ್ಲಿಗೆ ಆಗಮಿಸುತ್ತಾರೆ.

## ದೊಡ್ಡ ಬಸವನ ದೇಗುಲ

ಈ ದೇಗುಲವು ಬೆಂಗಳೂರಿನ ದೊಡ್ಡ ಬಸವನೆಂದೇ ಪ್ರಸಿದ್ದಿಯಾಗಿದೆ. ದೊಡ್ಡ ಆಕರ್ಷಕ ಹೆಬ್ಬಾಗಿಲನ್ನು ಹೊಂದಿದ್ದು ದೇಗುಲದ ಆವರಣದ ಒಳ ಹೋಗಲು ಕೆಲವೇ ಕೆಲವು ಮೆಟ್ಟಿಲುಗಳನ್ನು ಏರಬೇಕು. ವಿಶಾಲವಾದ ಹೊರಾವರಣದಲ್ಲಿ ಅರಳೀಕಟ್ಟೆ, ದೇಗುಲದ ಮುಂದಿನ ಶಿಲಾಕಂಬ ಆಕರ್ಷಕವಾಗಿವೆ. ದೇಗುಲದ ಸುತ್ತಲೂ ಕಲ್ಲಿನ ಕಟ್ಟಡದ ವಿಶಾಲ ಹೊರ ಆವರಣವಿದೆ. ಕಲ್ಲಿನ ಕಂಬಗಳಿಂದ ಆವೃತ ವಾದ ಆರಣ ಪ್ರವೇಶಿಸಿದರೆ, ಗರ್ಭಗುಡಿಯಲ್ಲಿ ಕಪ್ಪು ಶಿಲೆಯ ಬಸವ ಬರುವ ಭಕ್ತರ ಇಚ್ಛೆಯನ್ನು ಈಡೇರಿಸು ತ್ತಿದ್ದಾನೆ.

ಕಡು, ಗುಲಾಬಿ, ತಿಳಿಗುಲಾಬಿ ಬಣ್ಣದ ಕಾಳುಗಳನ್ನು ಹೊಂದಿದ ಎರಡು, ಮೂರು ಕಾಳುಗಳ ಉದ್ದ ಹಾಗೂ ಗಿಡ್ಡ ಆಕಾರದ ಕಡಲೆಕಾಯಿಗಳು ವಿವಿಧ ಹೆಸರಿನ ರುಚಿಯಲ್ಲಿ ಇಲ್ಲಿ ಮಾರಾಟವಾಗುತ್ತದೆ. ಈ ದಿನಗಳಲ್ಲಿ ರೈತರಿಗೆ ಸಂಭ್ರಮವಾದರೆ, ಬರುವ ಭಕ್ತರಿಗೆ ವಿವಿಧ ರುಚಿಯ ಕಡಲೆಕಾಯಿ ಕೊಂಡು ತಿನ್ನುವ ಹಬ್ಬ. ರಾಶಿ ರಾಶಿ ಹಾಲು ತುಂಬಿದ ಹಸಿ ಕಡಲೆಯೊಂದೆಡೆಯಾದರೆ, ಕೆಂಡದಲ್ಲಿ ಸುಟ್ಟು, ಉಪ್ಪು ನೀರಿನಲ್ಲಿ ಬೇಯಿಸಿದ ಬಾಣಲೆ ಯಲ್ಲಿ ಸಿಪ್ಪೆ ಸಹಿತ ಹುರಿದ ವಿವಿಧ ರೀತಿಯ ಕಡಲೆಕಾಯಿ ಖುಷಿ ನೀಡುತ್ತವೆ. ಇಲ್ಲಿಗೆ ಬಂದವರು ಸ್ವಲ್ಪವಾದರೂ ಕಡಲೆಕಾಯಿಯನ್ನು ಕೊಂಡು ಹೋಗುವುದು ವಾಡಿಕೆ.

ಇದರೊಂದಿಗೆ ಇತ್ತೀಚೆಗೆ ಬೇರೆ ಬೇರೆ ಮನರಂಜನಾ ಕಾರ್ಯಕ್ರಮಗಳು, ವಸ್ತುಗಳ ವ್ಯಾಪಾರವೂ, ಇಲ್ಲಿಗೆ ಬರುವವರ ಮನರಂಜಿಸುತ್ತಿವೆ. ಇಲ್ಲೇ ಹತ್ತಿರದಲ್ಲಿ ಹನುಮಂತನಗರದ ಶ್ರೀರಾಮಾಂಜನೇಯ ದೇಗುಲ, ಪಕ್ಕದಲ್ಲಿ ದೊಡ್ಡ ಗಣಪತಿ ದೇಗುಲ, ಗೋವರ್ಧನಗಿರಿ ಕೃಷ್ಣ, ಮಂದಿರ, ಗುರುರಾಯರ ಮಠ, ಶ್ರೀ ವೆಂಕಟೇಶ್ವರ ದೇಗುಲ, ಬ್ಯೂಗಲ್ ರಾಕ್ ಉದ್ಯಾವನ, ಶ್ರೀರಾಮಕೃಷ್ಣ ಆಶ್ರಮ ಹೆಸರು ವಾಸಿಯಾಗಿವೆ.

## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆಯಲ್ಲಿ ಸ್ವಾಮಿಯವರ ಅಧ್ಯಯನೋತ್ಸವಗಳು

## 12-12-2023 ರಿಂದ 05-01-2024 ರ ವರೆಗೆ

ತಿರುಮಲೆಯಲ್ಲಿ ಪ್ರತಿವರ್ಷ ಡಿಸೆಂಬರ್ ಮಾರ್ಗಶಿರ ಮಾಸದಲ್ಲಿ ವೈಕುಂಠ ಏಕಾದಶಿಯ 10 ದಿನಗಳ ಮೊದಲು ಸ್ವಾಮಿಯವರ ಅಧ್ಯಯನೋತ್ಸವಗಳು ಪ್ರಾರಂಭವಾಗುತ್ತವೆ. 25 ನೇ ದಿನಕ್ಕೆ ಉತ್ಸವಗಳು ಮುಕ್ತಾಯವಾಗುತ್ತದೆ. ಈ ಅಧ್ಯಯನ ಮಹೋತ್ಸವದಲ್ಲಿ "ನಾಲಾಯಿರ ದಿವ್ಯ ಪ್ರಬಂಧ" ದ ನಾಲ್ಕು ಸಾವಿರ ಪಾಶುರುಗಳ ಒಮ್ಮೆಯೇ ಸ್ಥಿರಸ್ಥಾನದಲ್ಲಿ ಪೂರ್ಣಗೊಳ್ಳುವುದರಿಂದ ವೈಕುಂಠ ಏಕಾದಶಿಯ ಮೊದಲ ಪತ್ತು ದಿನಗಳ ಕಾಲ "ಪಗಲ್ ಪತ್ತು" ದಲ್ಲಿ ಮೊದಲ ಎರಡು ಸಾವಿರ ಪಾಶುರಗಳನ್ನು (ಮುದಲಾಯಿರಂ, ಪೆರಿಯತಿರುಮೊಳಿ) ಪಠಿಸಲಾಗುತ್ತದೆ. ಏಕಾದಶಿಯಿಂದ ಹತ್ತು ದಿನ, ಉಳಿದ ಎರಡು ಸಾವಿರ ಪಾಶುರಗಳನ್ನು (ಇಯರ್ಪಾ,ತಿರುವಾಯಿಮೊಳಿ) "ರಾಪತ್ತು" ಎಂದು ಕರೆಯಲಾಗುತ್ತದೆ. 21 ನೇ ದಿನ ರಾಮಾನುಜ ನೂಟ್ರಂದಾದಿ, ಉಪದೇಶರತ್ನ ಮಾಲಾ, ಅನುಸರಿಸುತ್ತಾರೆ. ತಿರುಮಲೆ ಸ್ವಾಮಿಯವರ ಸನ್ನಿಧಿಯಲ್ಲಿ 22ನೇ ದಿನ ಕಣ್ಣಿನಂ ಶಿರುತ್ತಾಂಬು, 23 ನೇ ದಿನ ರಾಮಾನುಜ ನೂಟ್ರಂದಾದಿ, 24 ನೇ ಶ್ರೀ ವರಾಹಸ್ವಾಮಿ ಸನ್ನಿಧಿಯಲ್ಲಿ ಶಾತ್ತುಮೊರ್ರೈ, 25 ನೇ ದಿನ ತಣ್ಣೀರ್ ಅಮುದು ಉತ್ಸವಯೊಂದಿಗೆ ಅಧ್ಯಯನೋತ್ಸವಗಳು ಸಮಾಪ್ತಿಯಾಗುತ್ತದೆ.



**ತಿರುಮಲೆ ಶ್ರೀವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು 15-10-2023 ರಿಂದ 23-10-2023 ರ ವರೆಗೆ ನಡೆದ ವಾಹನ ಸೇವೆಗಳ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ, ಆಡಳಿತ ಮಂಡಳಿಯ ಸದಸ್ಯರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ರವರು ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಸ್.ಭಾರ್ಗವಿ, ಐ.ಎ.ಎಸ್., ಮತ್ತು ಶ್ರೀ ವಿ.ವೀರಬ್ರಹ್ಮ ಐ.ಎ.ಎಸ್., ಮತ್ತು ಭಾರತದ 14 ರಾಜ್ಯಗಳ ಕಲಾತಂಡಗಳು ಈ ಉತ್ಸವಗಳಲ್ಲಿ ಪಾಲ್ಗೊಂಡರು.**















**ತಿರುಮಲ ಶ್ರೀವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು 15-10-2023 ರಿಂದ 23-10-2023 ರ ವರೆಗೆ ನಡೆದ ವಾಹನ ಸೇವೆಗಳ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿಗಳು ಮತ್ತು ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿಗಳು, ಭಾರತದ 14 ರಾಜ್ಯಗಳ ಕಲಾತಂಡಗಳು ಈ ಉತ್ಸವಗಳಲ್ಲಿ ಪಾಲ್ಗೊಂಡರು.**


















22-10-2023 ರಂದು ಆಂಧ್ರಪ್ರದೇಶದ ರಾಜ್ಯಪಾಲರು ಗೌ॥ ಶ್ರೀ ಎಸ್. ಅಬ್ದುಲ್ ನಜೀರ್ ಸ್ವಾಮಿಯವರ ದರ್ಶನ ಪಡೆದರು. ದರ್ಶನಾನಂತರ ರಾಜ್ಯಪಾಲರಿಗೆ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿಯವರು ರಾಜ್ಯಪಾಲಕರಿಗೆ ಸ್ವಾಮಿಯವರ ಚಿತ್ರಪಟವನ್ನು, ತೀರ್ಥಪ್ರಸಾದಗಳನ್ನು ನೀಡಿದರು.




18-10-2023 ರಂದು ತಿರುಮಲೆ ಶ್ರೀವಾರಿ ಸೇವಾಸದನ್ - 2 ರಲ್ಲಿ ಶ್ರೀವಾರಿ ಸೇವಕರನ್ನು ಉದ್ದೇಶಿಸಿ ಮಾತನಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿಯವರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಪಿ.ಆರ್.ಓ., ಡಾ॥ಟಿ.ರವಿ, ಅನ್ನಮಾಚಾರ್ಯಯೋಜನಾ ನಿರ್ದೇಶಕರು ಡಾ॥ ಎ.ವಿಭೀಷಣಶರ್ಮ ಮತ್ತು ಎ.ಪಿ.ಆರ್.ಓ ಕುಮಾರಿ ಪಿ.ನೀಲಿಮಾ ಮತ್ತು ಶ್ರೀವಾರಿ ಸೇವಾ ಎ.ಇ.ಓ. ರವಿಕುಮಾರ್‌ರೆಡ್ಡಿಯವರು ಪಾಲ್ಗೊಂಡರು.





ತಿರುಪತಿ ಶ್ರೀ ಗೋವಿಂದರಾಜಸ್ವಾಮಿ ಪ್ರೌಢಶಾಲೆಯು 07-10-2023 ರಂದು "ಬಾಹ್ಯಾಕಾಶ ಪ್ರದರ್ಶನ"ವನ್ನು ಉದ್ಘಾಟಿಸಿದರು. ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಏ.ಎಸ್., ರವರು, ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ವಿದ್ಯಾಶಾಖಾಧಿಕಾರಿ ಡಾ॥ ಎಂ. ಭಾಸ್ಕರ್ ರೆಡ್ಡಿ, ಷಾರ್ ಹಿರಿಯ ವಿಜ್ಞಾನಿ ಶ್ರೀ ಶಂಭುಪ್ರಸಾದ್, ಷಾರ್‌ಗ್ರೂಪ್ ನಿರ್ದೇಶಕರು ಶ್ರೀ ಗೋಪಿಕೃಷ್ಣ, ತಿ.ತಿ.ದೇ, ಪಾಠಶಾಲೆಯ ಮುಖ್ಯೋಪಧ್ಯಾಯರಾದ ಶ್ರೀ ಚಂದ್ರಯ್ಯ, ಶ್ರೀ ಕೃಷ್ಣಮೂರ್ತಿ, ಶ್ರೀ ಸುರೇಂದ್ರ, ಶ್ರೀಮತಿ. ಪದ್ಮಾವತಿ, ಶ್ರೀಮತಿ ಸಂಧ್ಯ ಮತ್ತು ಇತರ ಸಿಬ್ಬಂದಿ ಪಾಲ್ಗೊಂಡರು.



# ವೈಕುಂಠ ಏಕಾದಶಿ

- ಡಾ॥ ವಾದಿರಾಜ ವಿ. ಅಗ್ನಿಹೋತ್ರಿ
98867 52287

**ವೈಕುಂಠ ಏಕಾದಶಿ ಏನು? ಹೇಗೆ?**

ವೈಕುಂಠ ಏಕಾದಶೀ ಆಚರಣೆ ಮಾರ್ಗಶಿರ ಅಥವಾ ಪುಷ್ಯ ಮಾಸದ ಶುಕ್ಲ ಪಕ್ಷದಲ್ಲಿ ಬರುವ ಏಕಾದಶಿಯಂದು ಇರುತ್ತದೆ. ವೈಕುಂಠ ಏಕಾದಶಿಯ ಆಚರಣೆಗೆ ಸೌರಮಾನದ ಲೆಕ್ಕಾಚಾರವೇ ಪ್ರಧಾನವಾಗುತ್ತದೆಯೇ ಹೊರತು ಚಾಂದ್ರಮಾನವಲ್ಲ.

'ಧನುರ್ಮಾಸಿ ಸಿತೇ ಪಕ್ಷೇ
ದ್ವಾದಶ್ಯಾಂ ಅರುಣೋದಯೇ।
ಕಾಂಕ್ಷಂತಿ ದೇವತಾಃ ಸರ್ವೇ
ಮಜ್ಜನಂ ತಜ್ಜಲೇ ಶುಭೇ ॥'

ಎಂಬ ಭವಿಷ್ಯೋತ್ತರ ಪುರಾಣದ 'ವೇಂಕಟಾಚಲ ಮಹಾತ್ಮೆ' ಯಲ್ಲಿನ ಮಾತಿನಂತೆ ಧನುರ್ಮಾಸದ ಶುಕ್ಲಪಕ್ಷದಲ್ಲಿ ಬರುವ ದ್ವಾದಶಿಯ ಅರುಣೋದಯಕ್ಕೆ ಸರಿಯಾಗಿ ದೇವತೆಗಳೆಲ್ಲರೂ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಲು ಇಚ್ಛಿಸುತ್ತಾರೆ. ಆ ದಿನವನ್ನು "ಮುಕ್ಕೋಟಿ ದ್ವಾದಶಿ" ಎನ್ನುತ್ತಾರೆ. ಅಂದರೆ ಹಿಂದಿನ ದಿನವನ್ನೇ "ವೈಕುಂಠ ಏಕಾದಶಿ" ಎಂದು ಕರೆಯುತ್ತಾರೆ.

ಈ ವೈಕುಂಠ ಏಕಾದಶಿಗೆ ಎರಡು ರೀತಿಯಲ್ಲಿ ವೈಶಿಷ್ಟ್ಯವನ್ನು ಕಾಣಬಹುದಾಗಿದೆ. ಅದೇನೆಂದರೆ ಆ ದಿನ ಏಕಾದಶಿಯಾದ ಕಾರಣ ಅಹೋರಾತ್ರ ಹರಿಭಜನೆಯನ್ನು ಮಾಡಬೇಕು. ಮರುದಿನ ವೈಕುಂಠ ದ್ವಾರದ ಮೂಲಕ ಬಂದು ಶ್ರೀಹರಿಯ ದರ್ಶನವನ್ನು ಮಾಡಿ ಧನ್ಯರಾಗಬೇಕು. ತಿರುಪತಿಯಲ್ಲಿ ಇದರ ಮತ್ತೊಂದು ಕ್ರಮವೆಂದರೆ, ಏಕಾದಶಿದಿನ ಪೂರ್ಣವಾಗಿ ಶ್ರೀನಿವಾಸನ ನಾಮ ಸಂಕೀರ್ತನೆಯನ್ನು ಮಾಡಬೇಕು. ಮರುದಿನ ದ್ವಾದಶಿಯ ಅರುಣೋದಯ ಕಾಲದಲ್ಲಿ ದೇವತೆಗಳು ಸ್ವಾಮಿಪುಷ್ಕರಣಿ ತೀರ್ಥದಲ್ಲಿ ದೇವತೆಗಳು ಸ್ನಾನ ಮಾಡುವ ಸಮಯದಲ್ಲಿ ನಾವು ಅವರ ಅನುಗ್ರಹ ಚಿಂತನೆಯೊಂದಿಗೆ ಸ್ನಾನವನ್ನು ಮಾಡಬೇಕು ದೇವತೆಗಳು ಸ್ವಾಮಿಪುಷ್ಕರಣಿಯಲ್ಲಿ ಸ್ನಾನಮಾಡಲು ಏಕೆ ಅಪೇಕ್ಷೆ ಪಡುತ್ತಾರೆ ಎಂಬದಕ್ಕೂ ಸಹ ಅದೇ ವೇಂಕಟಾಚಲ ಮಹಾತ್ಮೆಯೇ. 'ಸಾರ್ಧತ್ರಿಕೋಟಿ ತೀರ್ಥಾನಾಂ ಪುಣ್ಯಭೂಮಿಃ ವಿರಾಜನೇ' ಎಂಬ ಕಾರಣವನ್ನು ತಿಳಿಸಿದೆ. ಮೂರುವರೆಕೋಟಿ ತೀರ್ಥಗಳ ಸನ್ನಿಧಾನ ಇರುವ ತೀರ್ಥದಲ್ಲಿ

ಮುಕ್ಕೋಟಿ ದೇವತೆಗಳು ಸ್ನಾನ ಮಾಡುವುದು ಅತಿಶಯವೇನಲ್ಲ. ಅಂತಹ ತೀರ್ಥದಲ್ಲಿ ಸ್ನಾನಮಾಡಿ ವೈಕುಂಠ ದ್ವಾರದಲ್ಲಿ ಪ್ರವೇಶಿಸಿ ಹುಂಡಿಯ ಬಳಿಯಿರುವ ದ್ವಾರದಿಂದ ಹೊರಬಂದು ಗರುಡದೇವರಿಗೆ ಪ್ರದಕ್ಷಿಣೆ ಮಾಡಿ ಒಳಬಂದು ಶ್ರೀಶ್ರೀನಿವಾಸನ ದರ್ಶನ ಪಡೆದಲ್ಲಿ ಆ ವೈಕುಂಠದಲ್ಲಿರುವ ವಾಸುದೇವನ ದರ್ಶನ ಮಾಡಿದಷ್ಟೇ ಪುಣ್ಯವೆಂಬ ನಂಬಿಕೆ ಹಿಂದಿನಿಂದಲೂ ಬಂದಿದೆ. ಆದರೆ ಇಂದು ಶ್ರೀನಿವಾಸನ ದರ್ಶನ ಮಾಡಿ ವೈಕುಂಠದ್ವಾರದಿಂದ ಹೊರಬರುವ ವ್ಯವಸ್ಥೆ ಇದೆ. ಪದ್ಧತಿಯ ಬದಲಾವಣೆಗೆ ಕಾರಣವನ್ನು ಬಲ್ಲವರು ತಿಳಿಸಬೇಕೆಷ್ಟೆ.

ಮತ್ತೊಂದು ಕ್ರಮ ವೈಕುಂಠ ಏಕಾದಶಿಯಂದು ವೈಕುಂಠ ನಾಮಕನಾದ ಶ್ರೀಹರಿಯ ಪ್ರೀತ್ಯರ್ಥವಾಗಿ ಅಹೋರಾತ್ರ ಶ್ರೀಮದ್ ಭಾಗವತ ಪಾರಾಯಣ, ಪ್ರವಚನ, ಶ್ರವಣಾದಿಗಳನ್ನು ಮಾಡಿ ಮರುದಿನ ದ್ವಾದಶಿಯಂದು ಅದನ್ನು ಭಗವದರ್ಪಣ ಮಾಡುವ ಕ್ರಮವಿದೆ.

ಈ ವೈಕುಂಠ ಏಕಾದಶಿಯು ಸಾಮಾನ್ಯತಃ ಮಾರ್ಗಶಿರ ಮಾಸದ ಶುಕ್ಲ ಪಕ್ಷದ ಏಕಾದಶಿಯಂದೇ ಆಗಿರುತ್ತದೆ. ಅಂದೇ ಶ್ರೀಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡಿದ ದಿನವೂ ಆಗಿದೆ ಈ ವಿಷಯಕ್ಕೆ ಸಂಬಂಧಿಸಿದಂತೆ ಪದ್ಮಪುರಾಣದ ಉತ್ತರ ಖಂಡದ 4ನೆಯ ಅಧ್ಯಾಯದಲ್ಲಿ ಕಥೆಯೊಂದಿದೆ. ಅದರ ಪ್ರಕಾರ, ಚಂಪಕವೆಂಬ ರಾಜ್ಯದ ರಾಜನಾಗಿದ್ದ ವೈಖಾನಸನಿಗೆ ತನ್ನ ಪಿತೃಗಳು ನರಕದಲ್ಲಿರುವ ವಿಚಾರವು ತಿಳಿಯುತ್ತದೆ. ಅವರ ಉದ್ಧಾರಕ್ಕೆ ಉಪಾಯವನ್ನು ಋಷಿಗಳಲ್ಲಿ ಕೇಳಿದಾಗ ಅವರು "ಮಾರ್ಗಶಿರಮಾಸದ ಶುಕ್ಲಪಕ್ಷದ ಏಕಾದಶಿಯನ್ನು ನಿಮಯಮಿಸುವವ ದಾಮೋದರ ರೂಪಿಯಾದ ಭಗವಂತ. ಅವನು 'ದಾಮ'ರನ್ನು ಮುಕ್ತರನ್ನು ತನ್ನುದರದಲ್ಲಿ ಇಟ್ಟುಕೊಂಡವನಾದ್ದರಿಂದ ಅವನನ್ನು 'ದಾಮೋದರ' ಎನ್ನುವರು.(ಇದನ್ನೇ ತ್ರಿವಿಕ್ರಮ ಪಂಡಿತರು ತಮ್ಮ ವಿಷ್ಣುಸ್ತುತಿಯಲ್ಲಿ "ಮುಕ್ತಾಗ್ರಣ್ಯಾ ವಲೀನಾಂ ಅಭಿಮತ ವಸತಿಃ''ಎಂದಿದ್ದಾರೆ) ಅವನೇ ನಿಯಾಮಕನಾದ್ದರಿಂದ ಇದಕ್ಕೆ 'ಮೋಕ್ಷದಾ'ಎನ್ನುತ್ತಾರೆ. ಆ ದಿನ ಉಪವಾಸದಿಂದ ಹರಿಸೇವೆ ಮಾಡಿ ಭಗವದರ್ಪಣ ಮಾಡು. ಅಂದೇ ಸ್ವರ್ಗದ್ವಾರದ ಉದ್ಘಾಟನೆಯಾಗುವ ಕಾರಣ ನಿನ್ನ ಪಿತೃಗಳು ಸ್ವರ್ಗಸೇರುವರೆಂದು ತಿಳಿಸುತ್ತಾರೆ. ಅದರಂತೆ ನಡೆದು ರಾಜನು ಪಿತೃಗಳನ್ನು ಮುಕ್ತರನ್ನಾಗಿ ಮಾಡಿದನೆಂದು ಹೇಳಲಾಗಿದೆ. ಹೀಗೆ ಏಕಾದಶೀ ಆಚರಿಸಿ ದ್ವಾದಶಿಯ ದಿನ ಮುಕ್ಕೋಟಿ ದೇವತೆಗಳೊಡನೆ ಸ್ವರ್ಗ ಪ್ರವೇಶಿಸುವ ಕಾರಣ ಅಂದು ಮುಕ್ಕೋಟಿದ್ವಾದಶಿ.




'ವಿಷ್ಣು ರಹಸ್ಯ' ವೆಂಬ ಗ್ರಂಥದ ನಲವತ್ನಾಲ್ಕನೆಯ ಅಧ್ಯಾಯ ಹೇಳುವಂತೆ ಐದನೆಯದಾದ ರೈವತವೆಂಬ ಮನ್ವಂತರದಲ್ಲಿದ್ದ ಒಬ್ಬ ಋಷಿ ಶುಭ್ರ. ಆತನ ಪತ್ನಿ ವಿಕುಂಠಾದೇವಿ. ಅವರಿಬ್ಬರ ತಪಸ್ಸಿಗೆ ಮೆಚ್ಚಿ ತಾನೇ ಮಗನಾಗಿ ಅವತರಿಸಿದ ಆತನೇ ವೈಕುಂಠ.

ಪತ್ನಿಯಾದ ಲಕ್ಷ್ಮಿಯ ಪ್ರಾರ್ಥನೆಯಂತೆ ಮುಕ್ತಲೋಕದ ಭೂಭಾಗದಲ್ಲಿ ವೈಕುಂಠವೆಂಬ ಪುರವನ್ನು ನಿರ್ಮಿಸಿದ. ಆ ಪಟ್ಟಣವನ್ನು ತನ್ನ ಪರಿವಾರದೊಡನೆ ಪ್ರವೇಶಿಸಿದ್ದು ಈ ಏಕಾದಶಿಯ ದಿನವೇ ಆದುದರಿಂದಲೇ ಅದು ವೈಕುಂಠದ್ವಾರ ತೆರೆದ ದಿನ. ವೈಕುಂಠ ಏಕಾದಶಿಯೂ ಕೂಡ. ಈ ವಿಷಯ ಶ್ರೀಮದ್ ಭಾಗವತದ ಎಂಟನೇ ಸ್ಕಂಧದಲ್ಲಿಯೂ ಸಹ,

'ಪತ್ನೀ ವಿಕುಂಠಾ ಶುಭ್ರಸ್ಯ ವೈಕುಂಠ್ಯೈಃ ಸುರಸತ್ತಮೈಃ।
ತಯೋಃ, ಸ್ವಕಲಯಾ ಜಜ್ಞೇ ವೈಕುಂಠೋ ಭಗವಾನ್ ಸ್ವಯಂ ॥
ವೈಕುಂಠಃ ಕಲ್ಪಿತೋ ಯೇನ ಲೋಕೋ ಲೋಕನಮಸ್ಕೃತಃ।
ರಮಯಾ ಪ್ರಾರ್ಥ್ಯಮಾನೇನ ದೇವ್ಯಾ ತತ್ಪ್ರಿಯ ಕಾಮ್ಯಯಾ ॥'

ಎಂಬ ಮಾತಿನಲ್ಲಿ ಸ್ಪಷ್ಟವಾಗಿದೆ.

ಈ ಹಿನ್ನೆಲೆಯನ್ನರಿತು ಈ ಬಾರಿ ವೈಕುಂಠ ಏಕಾದಶಿಯನ್ನು ವೈಭವದಿಂದ ಆಚರಿಸೋಣ.

# ಅಯೋಧ್ಯಾ ಶ್ರೀರಾಮಚಂದ್ರ

ಡಾ. ಸಿ. ಎಸ್. ಊರ್ಮಿಳಾ
98408 36940

ಅಯೋಧ್ಯೆಯು ಅತ್ಯಂತ ಪವಿತ್ರವಾದ ಯಾತ್ರಾಸ್ಥಳ. ಇದು ಉತ್ತರ ಪ್ರದೇಶದಲ್ಲಿ ಸರಯೂ ನದಿ ತೀರದಲ್ಲಿದೆ. ಇಲ್ಲಿಯೇ ಶ್ರೀ ರಾಮ ಚಂದ್ರನು ದಶರಥ ಕೌಸಲ್ಯದೇವಿಯರ ಜ್ಯೇಷ್ಠಪುತ್ರನಾಗಿ ಜನಿಸಿದನು. ಆದ್ದರಿಂದ ಇದು ರಾಮ ಜನ್ಮಭೂಮಿ ಎಂದೇ ಪ್ರಸಿದ್ಧವಾಗಿದೆ. ಈಗ ರಾಮಜನ್ಮ ಭೂಮಿ ಹಾಗೂ ರಾಮನ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯೋಣ.



ಅಯೋಧ್ಯಾ ಸಪ್ತಮೋಕ್ಷ ಪುರಿಗಳಲ್ಲಿ ಒಂದು ಭಾರತದ ಸಪ್ತ ಮೋಕ್ಷ ಪುರಿಗಳು ಯಾವುವೆಂದರೆ

1. ಅಯೋಧ್ಯಾ 2. ಮಥುರಾ 3.ಮಾಯಾ (ಹರಿದ್ವಾರ) 4. ಕಾಶೀ (ವಾರಣಾಸಿ) 5.ಕಾಂಚಿ (ಕಾಂಚೀಪುರ) 6.ಅವಂತಿಕಾ (ಉಜ್ಜೈನಿ) 7.ದ್ವಾರ ವತಿ (ಧ್ವಾರಕಾ)

ಶ್ರೀಮದ್ರಾಮಾಯಣ ಮಹಾಕಾವ್ಯದ ಪ್ರಕಾರ ಅಯೋಧ್ಯೆಯನ್ನು ಮನುಚಕ್ರವರ್ತಿಯು ನಿರ್ಮಾಣ ಮಾಡಿದನು. ರಾಮಾಯಣ ಮತ್ತು ಮಹಾ ಭಾರತಗಳಲ್ಲಿ ಈ ಅಯೋಧ್ಯೆಯ ವಿಷಯವನ್ನು ಪ್ರಾಸ್ತಾಪಿಸಲಾಗಿದೆ.

ಈ ರಾಮಜನ್ಮ ಭೂಮಿಯಲ್ಲಿ ಒಂದು ಶ್ರೇಷ್ಠವಾದ, ಸುಂದರವಾದ ರಾಮ ಮಂದಿರವನ್ನು ನಿರ್ಮಿಸಬೇಕೆಂದು ಕೋಟ್ಯಾನು ಕೋಟಿ ಭಕ್ತರ ಉದ್ದೇಶ ವಾಗಿದ್ದಿತು. ಆ ಒಂದು ಕನಸು ಈಗ ನನಸಾಗಿದೆ. ಇಂತಹ ಶ್ರೇಷ್ಠವಾದ ಕಾರ್ಯ ದಲ್ಲಿ ನೆರವಾದವರು ಸಾಧುಸಂತರು, ಜಿಜ್ಞಾಸಿಗಳು, ಹಿರಿಯ ಅಧಿಕಾರಿಗಳು ಅನೇಕರಿದ್ದಾರೆ. ಇವರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿರುವ ಯೋಗಿ ಆದಿತ್ಯನಾಥ್‌ರವರ ಕೊಡುಗೆಯನ್ನು ಸ್ಮರಿಸುವುದು ಅತ್ಯವಶ್ಯ. ಈ ರಾಮಮಂದಿ ರದ ಉದ್ಘಾಟನಾ ಮಹೋತ್ಸವವನ್ನು ಪ್ರಾಣಪ್ರತಿಷ್ಠಾಪನಾ ಕಾರ್ಯ ಕ್ರಮವನ್ನು ನಮ್ಮ ನೆಚ್ಚಿನ ಪ್ರಧಾನಿ ಶ್ರೀನರೇಂದ್ರಮೋದಿಯವರು ನಡೆಸಿಕೊಡಲಿದ್ದಾರೆ, ಮತ್ತೊಂದು ಪ್ರಮುಖವಾದ ವಿಷಯವೇನೆಂದರೆ ಈ ನಮ್ಮನೆಚ್ಚಿನ ಪ್ರಧಾನಿಯವರೇ ದಿನಾಂಕ 5-8-2020 ರಂದು ಈ ದೇವಾಲಯದ ಶಂಕುಸ್ಥಾಪನೆ ಮಾಡಿದ್ದರು ಅದರ ಅಡಿಗಲ್ಲುಗಳನ್ನು ಇಟ್ಟಿದ್ದರು. ಈ ಅಯೋಧ್ಯಾಮಂದಿರದ ಒಟ್ಟು ವಿಸ್ತೀರ್ಣವು 70 ಎಕರೆ ಯಷ್ಟಿದೆ. ಅದರಲ್ಲಿ 2.7 ಎಕರೆ ಜಮೀನಿನಲ್ಲಿ ರಾಮಮಂದಿರವನ್ನು ನಿರ್ಮಾಣ ಮಾಡಲಾಗಿದೆ. ಇದನ್ನು ನಿರ್ಮಿಸಲು 18,000 ಕೋಟಿ ರೂ ವೆಚ್ಚ ಮಾಡಲಾಗಿದೆ. ಈ ಮಂದಿರವನ್ನು ನಿರ್ಮಿಸಲು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ





ಟ್ರಸ್ಟ್ ಮಂದಾಳತ್ವವನ್ನು ವಹಿಸಿತು. ಈ ಮಂದಿರದ ನಿರ್ಮಾಣ ಕಾರ್ಯಕ್ಕಾಗಿ ದೇಶವಿದೇಶಗಳಿಂದ ಭಕ್ತಿ ಕೋಟಿಯೇ ನೆರವಾಯಿತು. ಯಾತ್ರಾರ್ಥಿಗಳಿಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣ, ಬಸ್ ರೈಲ್ವೇ ಸೌಕರ್ಯಗಳನ್ನು ಒದಗಿಸಲಾಗಿದೆ. ಈಗ ಶ್ರೀರಾಮಚಂದ್ರನ ಗುಣಗಾನ ಮಾಡುವುದರಲ್ಲಿ ನಾವು ನಿರತರಾಗೋಣ.

ಇಡೀ ವಿಶ್ವಕ್ಕೇ ಮಾನವ ಜನ್ಮದ ಮಾನವ ಪ್ರಜ್ಞೆ ಮಾನವತೆ ಮಾನವೀಯತೆ, ಘನತೆ, ಗಾಂಭೀರ್ಯ ಭವ್ಯತೆ ಸಾರ್ಥಕತೆಗಳ ಮಹೋನ್ನತ ಕಲ್ಪನೆಯನ್ನು ರೂಪಿಸಿಕೊಟ್ಟವನು ಶ್ರೀರಾಮಚಂದ್ರ ಅವನು 'ಮರ್ಯಾದಾ ಪುರುಷೋತ್ತಮ' ಎಂದು ಜನಸಾಮಾನ್ಯರ ನಾಲಗೆಯಲ್ಲಿಯೂ ಇಂದೂ ಇರುವುದೇ ಇದಕ್ಕೆ ಸಾಕ್ಷಿ.

ಈ ಜಗದಲ್ಲಿ ಉತ್ತಮ ಪುತ್ರನಾಗಿ ಆದರ್ಶಪತಿಯಾಗಿ ನೆಚ್ಚಿನ ಸ್ನೇಹಿತನಾಗಿ, ಮೆಚ್ಚಿನ ಸೋದರನಾಗಿ, ಪ್ರೀತಿಯ ಪ್ರಭುವಾಗಿ, ಧರ್ಮದ ಆರಾಧಕನಾಗಿ, ಆ ಧರ್ಮದ ಸಾಕಾರ ಮೂರ್ತಿಯೇ ತಾನಾಗಿ ವಿಚಾರವಂತನಾಗಿ, ಒಳ್ಳೆಯ ಹೊಣೆಗಾರ ಚಕ್ರವರ್ತಿಯಾಗಿ,ಪ್ರಜೆಗಳ ಕಷ್ಟ ಸುಖಗಳನ್ನು ಅರಿತು ಅದಕ್ಕೆ ತಕ್ಕಂತೆ ಸ್ಪಂದಿಸುವವನಾಗಿ, ದಕ್ಷ ಆಡಳಿತಗಾರನಾಗಿ ಸೌಂದರ್ಯೋಪಾಸಕನಾಗಿ,ಋಷಿಮುನಿಗಳ ಕಟ್ಟಾ ಕಿಂಕರನಾಗಿ, ಸೌಜನ್ಯಕ್ಕಿನ್ನೊಂದು ಹೆಸರಾಗಿ ಇಂದ್ರಿಯ ನಿಗ್ರಹವುಳ್ಳ ಯೋಗೀಶ್ವರನಾಗಿ,ನಿಃಸ್ವಾರ್ಥ ಪ್ರಜಾಸೇವಕನಾಗಿ ದೀನದಲಿತರ ಆಪ್ತ ಬಂಧುವಾಗಿ, ಪತಿತರಿಗೆ ಪಾವನನಾಗಿ, ಯೋಗಿಗಳಿಗೆ ಧ್ಯೇಯನಾಗಿ,ಅಸೂಯೆಪಟ್ಟವರಿಗೂ ಅನುಕರಣೀಯನಾಗಿ, ಗುಣನಿಧಿಯಾಗಿ,ಬೈಯ್ಯಲು ಬಂದವರನ್ನು ವಿಶುದ್ಧ ಸತ್ವರ ನ್ನಾಗಿಸಿ ಕೊಂಡಾಡುವಂತೆ ಮಾಡುವ ಉದಾತ್ತಶೀಲ ಚಾರಿತ್ರ್ಯ ಭೂಷಣನಾಗಿ ಲಕ್ಷಾಂತರ ಅಷ್ಟೇ ಏಕೆ ಕೋಟ್ಯಂತರ ಭಕ್ತ ಜನರ ಆರಾಧ್ಯ ದೈವನಾಗಿ ಅವರೆಲ್ಲರ ಹೃದಯ ಸಿಂಹಾಸನಗಳಲ್ಲಿ, ಅವರೆಲ್ಲರ ಹೃದಯ ದೇಗುಲಗಳಲ್ಲಿ ಅಂದಿಗೂ ಇಂದಿಗೂ, ಎಂದೆಂದಿಗೂ ರಾರಾಜಿಸುವ ಮಹಾಪುರುಷ ಉತ್ತಮೋತ್ತಮ ಪುರುಷ ಶ್ರೀರಾಮಚಂದ್ರ.

**ತ್ಯಾಗೇನೈಕೇ ಅಮೃತತ್ವಮಾನುಶಃ:-** ತ್ಯಾಗದಿಂದಲೇ ಅಮೃತ ಪದವಿ ಎಂಬುದು ವೇದದ ಜೀವದರ್ಶನ. ಶ್ರೀರಾಮ ಹುಟ್ಟಿದ್ದೇ ತ್ಯಾಗದ ಹಿರಿಮೆಯನ್ನು ಘೋಷಿಸಲು ಎಂದು ಹೇಳಬಹುದು. ಅರಸುಪದವಿ, ಆಡಳಿತ ಪೀಠ, ಧರ್ಮಸಂರಕ್ಷಣೆಯ ಹೊಣೆಹೊತ್ತ ಧರ್ಮಪ್ರಭೂ ಶ್ರೀರಾಮಚಂದ್ರ.

**ರಾಮೋ ವಿಗ್ರಹವಾನ್ ಧರ್ಮ:-** ಎಂದು ಮಾರೀಚನೇ ಹೇಳಿದ್ದಾನೆ. ರಾಮ ಅಳೆಯಲಾಗದ ಶೀಲ ಚಾರಿತ್ರ್ಯ ಸದ್ಗುಣಗಳ ಗಣಿಯೆಂದೂ ಅವನೇ ಜಿತೇಂದ್ರಿಯನೆಂದು ಉತ್ತಮ ಧಾರ್ಮಿಕನೆಂದೂ ವಾಲಿಯ ಪತ್ನಿಯು ರಾಮನನ್ನು ಹೊಗಳಿದ್ದಾಳೆ.

"ತ್ವಮ ಪ್ರಮೇಯಶ್ಚ ದುರಾಸದಶ್ಚ ಜೀತೇಂದ್ರಿಯ ಶ್ಯೋತ್ತಮ ಧಾರ್ಮಿಕಶ್ಚ" ಕಿಷ್ಕಿಂದಾ - 54-31 ಎಂದು ತಾರೆ ಹೊಗಳಿದ್ದಾಳೆ.

ಶ್ರೀರಾಮನಿಗೆ ಹದಿಮೂರು ವರ್ಷವಿದ್ದಾಗಲೇ ಗುರುವರ್ಯರಾದ ವಿಶ್ವಾಮಿತ್ರರು ತಾಟಕಾವಧೆಯನ್ನು ಮಾಡಬೇಕೆಂದು, ಅದಕ್ಕಾಗಿ ಶ್ರೀರಾಮನನ್ನು ಕಳುಹಿಸಬೇಕೆಂದು ದಶರಥನಲ್ಲಿ ಅರಿಕೆ ಮಾಡಿಕೊಂಡರು.

ಮುನಿಬಾಲಕನಾಗಿ ಕೊಂಚ ದಿನ ಕಠಿಣ ಋಷ್ಯಾಶ್ರಮದ ಜೀವನವನ್ನು ನಡೆಸಿ, ತಂದೆ ಬಿಟ್ಟಗಲಲು ಅಳುಕಿಕಣ್ಣೀರಿಟ್ಟರೂ, ಆ ಮುನಿಯನ್ನೇ ಹಿಂಬಾಲಿಸಿ ತನ್ನ ಸೇವೆ ಸಜ್ಜನರಿಗೆ ಎಂಬುದನ್ನು ತೋರಿಸಿದ ಶ್ರೀರಾಮ ಅಂತೂ,ಇಂತೂ, ವಿಶ್ವಾಮಿತ್ರರು ತಮ್ಮ ಸಿದ್ಧಾಶ್ರಮಗಳಲ್ಲಿ ಯಾಗಸಂರಕ್ಷಣೆ ತಾಟಕಾವಧೆಗೆಂದು ರಾಮಲಕ್ಷ್ಮಣರನ್ನು ಕರೆದೊಯ್ದುರು. ಆದರೆ ಸ್ತ್ರೀಯರು ವಧೆಗೆ ಅನರ್ಹರು. ಸ್ತ್ರೀಯರನ್ನು ವಧಿಸುವುದು ಸರಿಯಲ್ಲ ಎಂಬ ಭಾವನೆ ಪ್ರಚಲಿತವಾಗಿದ್ದ ಕಾಲವದು. ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಸ್ತ್ರೀಯರು ರಾಜಕೀಯದಲ್ಲಿದ್ದರೆಂಬುದಕ್ಕೆ ರಾಮಾಯಣದ ತಾಟಕಿ ಹಾಗೂ ಶ್ರೀ ಭಾಗವತದ ಪೂತನೆಯೇ ಪ್ರತ್ಯಕ್ಷಸಾಕ್ಷಿಗಳಾಗಿದ್ದಾರೆ. ಇವಳನ್ನು ಹೇಗೆ ಕೊಲ್ಲುವುದು? ಎಂದು ಶ್ರೀರಾಮ ಚಿಂತಿಸಿದ, ಅದಕ್ಕೆ ವಿಶ್ವಾಮಿತ್ರರು ತಾಟಕಿಯ ದುಷ್ಟತನವನ್ನು ವಿವರಿಸುತ್ತಾರೆ. ಅವಳು ಅಗಸ್ತ್ಯಶಾಪಗ್ರಸ್ತಳಾದವಳೆಂದೂ, ಧರ್ಮಾರ್ಗದವಳೆಂದೂ, ಇಂಥ ದುಷ್ಟ ಸ್ತ್ರೀ ರಾಜಕಾರಿಣಿಯನ್ನು ವಧಿಸಬೇಕೆಂದೂ, ಇದರಿಂದ ಗೋಬ್ರಾಹ್ಮಣರಿಗೆ ಹಿತವಾಗುವುದೆಂದೂ ಹೇಳುತ್ತಾರೆ. ಗುರುಗಳ ಆಜ್ಞೆಯಂತೆ ಶ್ರೀರಾಮ ತಾಟಕೆಯನ್ನು ವಧಿಸುತ್ತಾನೆ. ಸಮಾಜದ ಸುವ್ಯವಸ್ಥೆ ನೆಟ್ಟಗಿರಬೇಕಾದರೆ ಇಂಥ ದುಷ್ಟರು ಯಾರಾದರೂ ಸರಿ, ಅವರ ಹತ್ಯೆ ಪಾಪವೋ ಪುಣ್ಯವೋ ಕರುಣಾಶೂನ್ಯವೋ ಅವರನ್ನು ಕೊಂದು ಮುಗಿಸಬೇಕಾದುದು ರಾಜಪುತ್ರರ ಮೊದಲ ಕರ್ತವ್ಯ. ರಾಜ್ಯ ಭಾರ ಹೊತ್ತವನಿಗೆ ಇದು ಸನಾತನ ಧರ್ಮ ದಶರಥನ ರಾಜಧಾನಿಯ ಸಮೀಪವೇ ಇದ್ದ ಮೊದಲನೆಯ ಭಯೋತ್ಪಾದಕ ರಾಣಿಯಾಗಿ

ದ್ದಿತು. ತಾಟಕಿ ನೆಲಸಿದ ಪ್ರದೇಶ ಅಯೋಧ್ಯೆಗೂ ಮಿಥಿಲೆಗೂ ನಡುವಿನ ಫಲವತ್ತಾದ ಭೂಮಿ ಅದಾಗಿದ್ದಿತು. ಇಲ್ಲಿ ರಾವಣನ ಅನುಜ್ಞೆಯಂತೆ ಅವನ ಸಂಬಳವನ್ನು ತಿನ್ನುತ್ತಾ ಭಯೋತ್ಪಾದಕ ತಂಡಕ್ಕೆ ನಾಯಕಿ ಯಂತಿದ್ದಳು. ಇಂತಹ ದುಷ್ಟೆಯನ್ನು ಕೊಲ್ಲಬೇಕೆಂಬ ಗುರುವಿನ ಆಜ್ಞೆಯನ್ನು ಶಿರಸಾ ವಹಿಸಿದನು. ಇಂತಹ ರಾಕ್ಷಸರೊಡನೆ ರಾಮನಿಗೆ ಮುಂದೆ ಒದಗುವ ಮಹಾ ಯುದ್ಧದ ಮುನ್ಸೂಚನೆ ಎಂದು ತಿಳಿಯೋಣವೆ? ಅಂದರೆ ಮುಂದೆ ಒದಗುವ ವಾಲಿವಧೆ, ಕುಂಭಕರ್ಣ, ರಾವಣ ಮುಂತಾದವರ ವಧೆಗೆ ವಿಶ್ವಾಮಿತ್ರರೇ ಮುನ್ನುಡಿಯನ್ನು ಬರೆದಂತೆ ಇದೆ ಅಲ್ಲವೇ!

ನಂತರದ ಪ್ರಸಂಗವೆಂದರೆ ರಾಮಸೀತಾಕಲ್ಯಾಣ ವೈಭೋಗ ಶ್ರೀರಾಮ ಶಿವಧರ್ನುಭಂಗ ಮಾಡಿ ಸೀತೆಯನ್ನು ವಿವಾಹವಾದನು. ಸೀತಾದೇವಿ - ಭೂಜಾತೆದಿವ್ಯಪತ್ನಿತ್ವ ಸಾಕಾರ ಮೂರ್ತಿಯಾಗಿರುವುದರಿಂದಲೇ ಇಂದೂ ಭಾರತೀಯರಿಗೆ ಪ್ರಾತಃ ಸ್ಮರಣೀಯಳಾಗಿ ಅನುಕರಣೀಯ ಆದರ್ಶವಾಗಿದ್ದಾಳೆ. ಇಂತಹ ಸೀತಾದೇವಿಗೂ "ಅಗ್ನಿಪರೀಕ್ಷೆ'' ಗೆ ಒಳಪಡಿಸಬೇಕಾದ ಪ್ರಸಂಗ ರಾಮನಿಗೆ ಉಂಟಾಯಿತು. ಪ್ರೇಮಿಸಿದವಳನ್ನು ನಿರ್ದೋಷಿ ಎಂದು ಹೃದಯ ತಿಳಿದವಳನ್ನೂ ಪರೀಕ್ಷೆಗೆ ಗುರಿ ಮಾಡಲೇ ಬೇಕಾಯಿತು.

ಅದರಲ್ಲೂ ಸಮಾಜದ ಎದುರಿಗೆ ಇವಳು ನಿರ್ದೋಷಿ ಎಂದು ನಿರೂಪಿಸಬೇಕಾದದ್ದು ಶ್ರೀರಾಮನ ಕರ್ತವ್ಯವಾಗಿದ್ದಿತು. ಇಲ್ಲಿಯೂ ಶ್ರೀರಾಮನ ಧರ್ಮಜ್ಞತೆಯನ್ನು ನಾವು ಗುರುತಿಸಬಹುದು.

ಶ್ರೀರಾಮಚಂದ್ರನು ಮನುಷ್ಯ ಅವತಾರವನ್ನು ತಳೆದು ಇಡೀ ಮಾನವಕುಲಕ್ಕೆ ಒಂದು ಮಾದರಿಯಾಗಿದ್ದಾನೆ." ಆತ್ಮಾನಂ ಮಾನುಶಂ ಮನ್ಯೇ'' ಎಂದು ತಾನೇ ಹೇಳಿಕೊಳ್ಳುತ್ತಾ ಪ್ರಕಾಶಪಡಿಸುತ್ತಾ ತನ್ನ ಅದ್ಭುತ ಲೀಲೆಗಳನ್ನು ಜಗತ್ತಿಗೆ ತೋರಿಸಿದ್ದಾನೆ. ಅವನು ತನ್ನ ನಡತೆಯಿಂದಲೂ, ಉಪದೇಶಗಳಿಂದಲೂ ತನ್ನ ಅನುಚರರ ನಡತೆ ಮತ್ತು ಉಪದೇಶಗಳಿಂದಲೂ ವಿವಿಧ ಬಗೆಯ ಧರ್ಮಗಳನ್ನು ತಿಳಿಯಪಡಿಸುತ್ತಾನೆ. ಉದಾಹರಣೆಗೆ ತಂದೆ ಮಕ್ಕಳು ಅಣ್ಣ ತಮ್ಮಂದಿರು, ಪತಿಪತ್ನಿಯರು, ಗುರುಶಿಷ್ಯರು ರಾಜ ಪ್ರಜೆಗಳು ಪರಸ್ಪರ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಾನೇ ತನ್ನ ಬಾಳಿನಲ್ಲಿ ನಡೆದು ತೋರಿಸಿದ್ದಾನೆ. ವಿವಿಧ ಬಗೆಯ ಸಾಧಾರಣಧರ್ಮಗಳನ್ನಾಗಲಿ, ಭಕ್ತಿ,ಪ್ರಪತ್ತಿ ಮುಂತಾದ ಗಹನವಾದ ನಿಗೂಢವಾದ ಧರ್ಮದ ಸ್ವರೂಪಗಳನ್ನು ಶ್ರೀರಾಮಚಂದ್ರನು ಸ್ಪಷ್ಟಪಡಿಸಿರುವುದಲ್ಲದೆ, ಧಾರ್ಮಿಕ ವಿಧಿಗಳನ್ನು ನಡೆಸಿ ಮಾನವ ಕೋಟಿಗೆ ಒಬ್ಬ ಸಮರ್ಥ ಮಾರ್ಗದರ್ಶಕನಾಗಿದ್ದಾನೆ. ಕೇವಲ ಮಾನವರಲ್ಲಿ ಮಾತ್ರ ಅವನು ಕರುಣಾಮಯಿ ಆಗಿರಲಿಲ್ಲ. ಸಕಲ ಚರಾಚರಗಳಿಗೂ ಮೃಗಪಕ್ಷಿಗಳಿಗೂ,ವಾನರ ಸಮೂ ಹಕ್ಕೂ, ರಾಕ್ಷಸಸಮೂಹಕ್ಕೂ ತನ್ನ ಕೃಪಾದೃಷ್ಟಿಯ ಹರಿಸಿದ್ದಾನೆ. ಇಂತಹ ಶ್ರೀರಾಮನಿಗಾಗಲಿ, ಶ್ರೀರಾಮಾಯಣಕ್ಕಾಗಲಿ ಯಾವ ಕಾಲಕ್ಕೂ ಕಳಂಕ ಉಂಟಾಗುವುದಿಲ್ಲ. ರಾಮಭಕ್ತಿ ಸಾಮ್ರಾಜ್ಯವು ಭೂತ, ಭವಿಷ್ಯತ್, ವರ್ತಮಾನ ಕಾಲಗಳಲ್ಲಿ ನೆಲೆಗೊಂಡಿರುತ್ತದೆ ಎಂಬುದರಲ್ಲಿ ತೃಣಮಾತ್ರವೂ ಸಂದೇಹವಿಲ್ಲ.



ಮಂಗಳಂ ಕೋಸಲೇಂದ್ರಾಯ ಮಹನೀಯಗುಣಾತ್ಮನೇ
ಚಕ್ರವರ್ತಿತನೂಜಾಯ ಸಾರ್ವಭೌಮಯ ಮಂಗಳಂ
ವೇದ ವೇದಾಂತ ವೇದ್ಯಾಯ ಮೇಘಶ್ಯಾಮಲ ಮೂರ್ತಯೇ
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಳಂ
ವಿಶ್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇ
ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಳಂ
ಪಿತೃಭಕ್ತಾಯ ಸತತಂ ಬ್ರಾತೃ ಭಿಃ ಸಹ ಸೀತಯಾ
ನಂದಿತಾಖಿಲಲೋಕಾಯ ರಾಮಭದ್ರಾಯ ಮಂಗಳಂ
ತ್ಯಕ್ತ ಸಾಕೇತ ವಾಸಾಯ ಚಿತ್ರಕೂಟ ವಿಹಾರಿಣೇ
ಸೇವ್ಯಾಯ ಸರ್ವಯಮಿನಾಂ ಧೀರೋದಾರಾಯಮಂಗಳಂ
ಸೌಮಿತ್ರಿಣಾ ಚ ಜಾನಕ್ಯಾ ಚಾಪಬಾಣಾಸಿ ಧಾರಿಣೇ
ಸಂಸೇವ್ಯಾಯ ಸದಾ ಭಕ್ತಾಸ್ವಾಮಿನೇ ಮಮ ಮಂಗಳಂ
ದಂಡಕಾರಣ್ಯವಾಸಾಯ ಖಂಡಿತಾಮರ ಶತ್ರವೇ
ಗ್ಧ್ರಾದ್ರರಾಜಾಯ ಭಕ್ತಾಯ ಮುಕ್ತಿ ದಾಯಾಸ್ತುಮಂಗಳಾ
ಸಾದರಂ ಶಬರಿದತ್ತ ಫಲ - ಮೂಲಾಭಿಲಾಷಿಣೇ
ಸೌಲಭ್ಯ ಪರಿಪೂರ್ಣಾಯ ಸತ್ತೋದ್ರಿಕ್ತಾಯ ಮಂಗಳಂ
ಹನುಮತ್ಸಮವೇತಾಯ ಹರೀಶಾ ಭೀಷ್ಟದಾಯಿನೇ
ವಾಲಿಪ್ರಮಥನಾಯಾಸ್ತು ಮಹಾಧೀರಾಯಂ ಮಂಗಳಂ
ಶ್ರೀಮತೇ ರಘುವೀರಾಯಸೇತೋಲ್ಲಂಘಿತ - ಸಿಂಧವೇ।
ಜತರಾಕ್ಷಸ ರಾಜಾಯ ರಣಧೀರಾಯ ಮಂಗಳಂ॥
ಆಸಾಧ್ಯನಗರೀಂ ದಿವ್ಯಾಂ ಅಭಿಷಿಕ್ತಾಯ ಸೀತಾಯಾ
ರಾಜಾಧಿರಾಜ - ರಾಜಾಯ ರಾಮಭದ್ರಾಯ ಮಂಗಳಂ
ಮಂಗಳಾಶಾಸನ ಪರ್ಯೈಃ ಮದಾಚಾರ್ಯ ಪುರೋಗಮ್ಯೈಃ
ಸರ್ವೈಶ್ಚ ಪೂರ್ವೈಃ ಆಚಾಯೈಃ ಸತ್ಕೃತಾಯಾಸ್ತು ಮಂಗಳಂ
ಸರ್ವಂ ಶ್ರೀರಾಮಚಂದ್ರಾರ್ಪಣಮಸ್ತು

37





# ಮದ್ದೂರಿನ ಉಗ್ರನರಸಿಂಹ ಮತ್ತು ವರದರಾಜಸ್ವಾಮಿ ದೇವಾಲಯಗಳು

-ಕೆಂಗೇರಿ ಚಕ್ರಪಾಣಿ
94483 86886

## ಕರ್ನಾಟಕದ ವೈಷ್ಣವ ಕ್ಷೇತ್ರಗಳು

ಮಂಡ್ಯ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ ಮದ್ದೂರು. ಜಿಲ್ಲಾ ಕೇಂದ್ರದಿಂದ 15 ಕಿ.ಮೀ.ದೂರದಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಶಿಂಷಾ ನದಿಯ ಬಲ ದಂಡೆಯ ಮೇಲಿದೆ.

ಶಾಸನಗಳಲ್ಲಿ ಅನಾದಿ ಅಗ್ರಹಾರ, ನಾರಸಿಂಹ ಚತುರ್ವೇದಿ ಮಂಗಲ ಎಂದು ಕರೆದಿರುವ ಮದ್ದೂರು ಚತುರ್ವೇದಗಳ ಅಧ್ಯಯನಕ್ಕೆ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು.

ಮದ್ದೂರಿನಲ್ಲಿ ದೇಶೇಶ್ವರ,ಉಗ್ರನರಸಿಂಹ,ವರದರಾಜ ಮತ್ತು ಮದ್ದೂರಮ್ಮ ಮುಂತಾದ ದೇವಾಲಯಗಳಿವೆ. ಮದ್ದೂರಿನಲ್ಲಿ ಕದಂಬ ಋಷಿಗಳು ವಾಸಿಸುತ್ತಿದ್ದರಿಂದ ಕದಂಬ ಕ್ಷೇತ್ರ ಎಂಬ ಹೆಸರೂ ಇತ್ತು. ಇಲ್ಲಿ ಸಮೀಪದಲ್ಲಿರುವ ವೈದ್ಯನಾಥಪುರದ ತಮಿಳು ಶಾಸನದಲ್ಲಿ ಮದ್ದೂರಿಗೆ "ಮರದೂರು" ಎಂದು ಕರೆದಿದ್ದು. ಮರದೂರು ಕನ್ನಡದ ಮದ್ದಾಗಿದ್ದು, ನಂತರ ಮದ್ದೂರು ಎಂದಾಗಿದೆ.

### ಶ್ರೀ ಉಗ್ರನರಸಿಂಹ ದೇವಾಲಯ

ಮದ್ದೂರಿನ ಊರ ನಡುವೆ ಇರುವ ಉಗ್ರನರಸಿಂಹ ದೇವಾಲಯವು ರಾಜ್ಯದ ಸುಪ್ರಸಿದ್ಧ ನರಸಿಂಹ ಕ್ಷೇತ್ರವಾಗಿರುವುದು. ದೇವಾಲಯವು ಹೊಯ್ಸಳರ ಆರಂಭ ಶೈಲಿಯಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗ, ವಿಜಯನಗರ ಶೈಲಿಯ ಮುಖಮಂಟಪ ಹಾಗೂ ಸುತ್ತಲೂ ಪ್ರಾಕಾರ ಮಂಟಪ ಮತ್ತು ಪ್ರವೇಶ ಮಂಟಪ,ರಾಜಗೋಪುರಗಳನ್ನೊಳಗೊಂಡ ಬೃಹತ್ ರಚನೆಯಾಗಿವೆ.

ಗರ್ಭಗುಡಿಗೆ ಶಿಖರವಿದೆ. ದೇವಾಲಯದ ಹೊರ ಭಿತ್ತಿಯು ಹೊಯ್ಸಳ ಶೈಲಿಯಲ್ಲಿದ್ದು ಸುತ್ತಲೂ ದೇವಾಲಯದ ಮಾದರಿಗಳನ್ನು ರಚಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಅದನ್ನು ತಿರುಗಣೆಯಿಂದ ಮಾಡಿದ್ದು ಕಲಾತ್ಮಕವಾಗಿದೆ.

### ಭವ್ಯ ಉಗ್ರನರಸಿಂಹ

ಈ ದೇವಾಲಯದ ಗರ್ಭಗುಡಿಯಲ್ಲಿ ಅತ್ಯಂತ ಮನೋಹರವಾದ ಉಗ್ರನರಸಿಂಹನ ಮೂರ್ತಿಯಿದೆ. ಶಿಲ್ಪ ಶಾಸ್ತ್ರ ಗ್ರಂಥದಲ್ಲಿ ವಿಧಾರಣ ನರಸಿಂಹನೆಂದು ಕರೆಯುವ ನರಸಿಂಹ ದೇವನು ಏಳು ಅಡಿಗಳು ಎತ್ತರವಿದ್ದು ಹೊಯ್ಸಳ ಶೈಲಿಯಲ್ಲಿರುವ ದಿವ್ಯ ಮೂರ್ತಿಯಾಗಿದ್ದು, ತನ್ನ ತೊಡೆಯ ಮೇಲೆ ಹಿರಣ್ಯಕಶಿಪುವನ್ನು ಮಲಗಿಸಿಕೊಂಡು ತನ್ನ ಎರಡು ಬಾಹುಗಳಿಂದ ಕರುಳನ್ನು ಬಗೆದು ಸಂಹರಿಸುತ್ತಿರುವನು. ಅಷ್ಟಬಾಹುಗಳನ್ನು ಹೊಂದಿರುವ ದೇವನು ಕೈಗಳಲ್ಲಿ ಚಕ್ರ,

ಶಂಖ, ಪಾಶ ಅಂಕುಶವನ್ನು ಧರಿಸಿದ್ದು. ಕಿರೀಟ ಮಕುಟ ಧಾರಿಯಾಗಿರುವನು.

ರಕ್ಕಸನ ಉದರವನ್ನು ಸೀಳಿ ತನ್ನ ಉಳಿದ ಎರಡು ಕೈಗಳಿಂದ ಕರುಳನ್ನು ಕೊರಳಿಗೆ ಮಾಲೆ ಹಾಕಿಕೊಳ್ಳುತ್ತಿರುವಂತೆ ಅಮೋಘವಾಗಿ ಚಿತ್ರಿಸಲಾಗಿದೆ. ತ್ರಿನೇತ್ರಧಾರಿಯಾದ ನರಸಿಂಹನ ಇಕ್ಕೆಲಗಳಲ್ಲಿ ಒಂದು ಕಡೆ ಕೈ ಮುಗಿದು ನಿಂತಿರುವ ಭಕ್ತಪ್ರಹ್ಲಾದ ನಿದ್ದರೆ ಮತ್ತೊಂದು ಕಡೆ ಗರುಡದೇವನಿರುವನು. ದೇವನ ಸುತ್ತಲೂ ಇರುವ ಪ್ರಭಾವಳಿಯಲ್ಲಿ ದಶಾವತಾರದ ಚಿಕಣಿ ಶಿಲ್ಪಗಳಿವೆ. ಹಲವಾರು ಆಯುಧಗಳನ್ನು ದೇವನು ಧರಿಸಿದ್ದರೂ ರಕ್ಕಸನನ್ನು ಯಾವ ಆಯುಧವನ್ನು ಬಳಸದೆ ಉಗುರಿನಲ್ಲಿಯೇ ಸಂಹರಿಸುತ್ತಿರುವುದು ಗಮನಾರ್ಹ ದೇವನನ್ನು ತಿರುಮಜ್ಜನದಲ್ಲಿ (ಅರಿಷಿಣದ ಅಲಂಕಾರದಲ್ಲಿ) ನೋಡಲು ಬಹಳ ಅದ್ಭುತವಾಗಿದೆ.

ಅಪಾರ ಸಂಖ್ಯೆಯ ಭಕ್ತವೃಂದವನ್ನು ಹೊಂದಿರುವ ಉಗ್ರನರಸಿಂಹನಿಗೆ ನಿತ್ಯಪೂಜೆ,ಪಕ್ಷಪೂಜೆಗಳು ಬಹು ಸಾಂಗವಾಗಿ ನೆರವೇರುತ್ತದೆ.ಇಲ್ಲಿಯ ಸ್ಥಳ ಪುರಾಣದ ಪ್ರಕಾರ, ಬ್ರಹ್ಮದೇವನೇ ನರಸಿಂಹನನ್ನು ಪ್ರತಿಷ್ಠಾಪಿಸಿದನೆಂದು ದ್ವಾಪರಯುಗದಲ್ಲಿಯ ಅರ್ಜುನನು ಇಲ್ಲಿ ಮೂರ್ತಿಯನ್ನು ಅರ್ಚಿಸಿದ ಕಾರಣ ಮದ್ದೂರಿನ ಪ್ರಾಚೀನ ನಾಮ ಅರ್ಜುನಪುರಿ ಎಂದಿದೆ.

ಮದ್ದೂರಿನ ಉಗ್ರನರಸಿಂಹನಿಗೆ ಚೈತ್ರ ಬಹುಳ ಪ್ರಷ್ಠಿಯಲ್ಲಿ ಬ್ರಹ್ಮ ರಥೋತ್ಸವವು ಬಹಳ ವೈಭವವಾಗಿ ನೆರವೇರುತ್ತದೆ. ದೇವಾಲಯದ ಪ್ರಾಕಾರದಲ್ಲಿ ನರಸಿಂಹ ನಾಯಕಿ, ಸೌಮ್ಯನಾಯಕಿ,ಯಶೋದಕೃಷ್ಣ, ಶ್ರೀನಿವಾಸ, ಆಳ್ವಾರುಗಳು ಮತ್ತು ನರಸಿಂಹದೇವಾಲಯದ ಪ್ರಾಕಾರ ಮಂಟಪವೊಂದರಲ್ಲಿ ಸೊಗಸಾದ ಶ್ರೀರಾಮ ಪರಿವಾರದ ಮೂರ್ತಿಗಳಿವೆ.

## ಮದ್ದೂರಿನ ಮರ್ಯಾದ ಪುರುಷೋತ್ತಮ

ನರಸಿಂಹದೇವರ ಪ್ರಾಕಾರದ ಉತ್ತರ ದಿಕ್ಕಿನಲ್ಲಿ ಒಂದು ಪ್ರತ್ಯೇಕ ಗುಡಿಯಲ್ಲಿ ಹೊಯ್ಸಳರ ಕಾಲದ ಅತ್ಯಂತ ಕಲಾತ್ಮಕವಾದ ಕೋದಂಡರಾಮ ಪರಿವಾರದ ಮೂರ್ತಿಗಳಿವೆ. ಶ್ರೀರಾಮಚಂದ್ರನು ಧರಿಸಿರುವ ವಸ್ತ್ರಗಳು, ಬಾಗಿರುವ ಬಿಲ್ಲು, ಅಲಂಕೃತ ಕಿರೀಟ ಶ್ರೀರಾಮ ಚಂದ್ರನ ಮುಖಾರವಿಂದದಲ್ಲಿ ಹೊರಸೂಸುತ್ತಿರುವ ಮಂದಹಾಸ ಅದ್ಭುತ. ಇಲ್ಲಿ ಸೀತಾಮಾತೆಯು ಶ್ರೀರಾಮರ ಎಡಬದಿಯಲ್ಲಿದ್ದು ಬಲಗೈಯಲ್ಲಿ ಪುಷ್ಪವನ್ನು ಹಿಡಿದಿರುವಳು. ರಾಮನ ಬಲ ಬದಿಯಲ್ಲಿ ಸಹೋದರ ಲಕ್ಷ್ಮಣನಿರುವನು. ಇಲ್ಲಿರುವ ಮಾರುತಿಯ ಮೂರ್ತಿಯಂತೂ ಬಹಳ ವಿಶೇಷವಾಗಿರುವುದು.ಹನುಮನ ಬಲಗೈ ಬಾಯಿಯ ಬಳಿಯಿದ್ದು, ತನ್ನ ದೇವನೊಡನೆ ಮಾತನಾಡುವಾಗ ಬಾಯಿಂದ ಉಗುಳು ಬೀಳಬಾರದೆಂದು ಹಿಡಿದಿದ್ದು, ತನ್ನ ಸ್ವಾಮಿ ನಿಷ್ಠೆಯನ್ನು ಮನೋಜ್ಞವಾಗಿ ಚಿತ್ರಿಸಿರುವುದು ಅಚ್ಚರಿ ಮೂಡಿಸುತ್ತದೆ. ಅಲ್ಲದೆ ಹನುಮನು ತನ್ನ ಸ್ವಾಮಿಯ ಎಡ ಬದಿಯಲ್ಲಿರುವುದು ವಿಶೇಷವಾಗಿದೆ.



ಮದ್ದೂರಿನ ನರಸಿಂಹ ದೇವಾಲಯದಲ್ಲಿ ಅನೇಕ ಶಾಸನಗಳು ದೊರೆತಿವೆ.

ಕ್ರಿ.ಶ. 1119 ರ ಶಾಸನದಲ್ಲಿ ಮಲೈಯಾಳನ್ ಕುಲಿಕಟ್ಟು ನಾರಾಯಣ ಎಂಬ ದಂಡನಾಯಕನು ದೇವಾಲಯದಲ್ಲಿ ದೇವಿಯ ಮೂರ್ತಿಯ ಸೇವೆಗಾಗಿ (ಶಾಸನದಲ್ಲಿ ಪಿರಟ್ಟಿದೇವಿ ಎಂದಿದೆ.) ಶ್ರೀಭಂಡಾರದಿಂದ ಎಂಟು ಗದ್ಯಾಣ ಕಾಣಿಕೆಯನ್ನು ದೇವರ ನಿತ್ಯ ಪಡಿ ಹಾಗೂ ನಂದಾದೀಪಕ್ಕೆ ನೀಡಿರುವನು.

ತಮಿಳು ಶಾಸನಗಳಲ್ಲಿ ನರಸಿಂಹ ದೇವನನ್ನು ಸಿಂಗಪೆರುಮಾಳ್ ಎಂದು ಕರೆಯಲಾಗಿದೆ. ಕ್ರಿ.ಶ. 1278 ರಲ್ಲಿ ಹೊಯ್ಸಳ ದೊರೆ ಮೂರನೆಯ ನರಸಿಂಹನ ದಂಡನಾಯಕ ಕೇತೆಯ ನಾಯಕನು, ಪೂರ್ವರಾಜ್ಯಗಳನ್ನು ಗೆದ್ದು ಹಿಂತಿರುಗಿ, ವಿಜಯೋತ್ಸವ ಸಂಭ್ರಮಾಚರಣೆಯಲ್ಲಿ ನರಸಿಂಹದೇವರಿಗೆ ಬದಿಯಲ್ಲಿರುವ ಅಲ್ಲಾಳ ಪೆರುಮಾಳ್ ದೇವರಿಗೆ ಹಲವಾರು ಸುಂಕಗಳಿಂದ ಬಂದ ಆದಾಯವನ್ನು ದೇವರ ನಿತ್ಯಪೂಜೆಗೆ ನೀಡಿದ್ದಾನೆ. ಕ್ರಿ.ಶ. 1591 ರ ವಿಜಯನಗರದ ಅರಸು ಅರವೀಡು ವೆಂಕಟಪತಿಯ ಮಹಾಪ್ರಧಾನಿ ಚಿಕ್ಕರಾಜನು ತನ್ನ ದೊರೆ ರಾಮರಾಜಯ್ಯನವರಿಗೆ ಪುಣ್ಯವಾಗಲೆಂದು ನರಸಿಂಹದೇವರ ಅಂಗರಂಗ ಭೋಗಕ್ಕೆ ಅಮೃತಪಡಿಗೆ ದತ್ತಿಯನ್ನು ನೀಡಿರುವನು.

ಮೈಸೂರು ದೊರೆ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೂಡ್ಲುಕುಪ್ಪೆ ಶಾನುಭೋಗರ ಮಕ್ಕಳು ಅಹೋಬಲಯ್ಯ ಮತ್ತು ಮೋದಿ ಖಾನೆ ಅರಮನೆ ಶಿರಸ್ತೆದಾರ್ ನರಸಿಂಹನು ಗರ್ಭಗುಡಿಯ ಬಾಗಿಲಿಗೆ ಹಿತ್ತಾಳೆ ಕವಚವನ್ನು ನೀಡಿದರೆ, ಅದೇ ಕಾಲದಲ್ಲಿ ದೊಡ್ಡ ನಂಜಮ್ಮನ ಮಗಳು ಹೊಸೂರು ವೆಂಕಟಲಕ್ಷ್ಮಮ್ಮ

ದೇವಾಲಯಕ್ಕೆ ಬೆಳ್ಳಿ ಮುಲಾಮಿನ ಗರುಡವಾಹನವನ್ನು ಮಾಡಿಸಿ ಕೊಟ್ಟಿರುವಳು.

ಹೀಗೆ ಇಲ್ಲಿ ದೊರೆತಿರುವ ಶಾಸನಗಳಿಂದ ಸಾವಿರ ವರ್ಷಗಳ ಕಾಲ ದೇವಾಲಯವು ಸದಾ ಕಾಲ ವೈಭವವಾಗಿತ್ತು ಎಂದು ನಿರ್ಧರಿಸಬಹುದು.



### ಅಲ್ಲಾಳನಾಥ ದೇವಾಲಯ (ವರದಾಜ ದೇವಾಲಯ)

ಉಗ್ರನರಸಿಂಹನ ಗುಡಿಯ ಅನತಿ ದೂರದಲ್ಲಿ ಒಂದು ಸಣ್ಣ ಗುಡ್ಡದ ಮೇಲೆ ಸುಂದರವಾದ ವರದರಾಜನ ಮೂರ್ತಿಯನ್ನು ಹೊಂದಿರುವ ಗುಡಿಯಿದೆ.ಗರ್ಭಗುಡಿಯಲ್ಲಿ 12 ಅಡಿಗಳು ಎತ್ತರದ ದಿವ್ಯ ಮೂರ್ತಿಯಿದೆ. ಈ ದೇವಾಲಯದ ಸ್ಥಳಪುರಾಣದ ಪ್ರಕಾರ ಹೊಯ್ಸಳ ದೊರೆ ವಿಷ್ಣುವರ್ಧನನು ಕಂಚಿಗೆ ಹೋಗಲಾಗದ ತನ್ನ ಮಾತೆಯ ಮನೋಭಿಲಾಷೆಯಂತೆ ಕಂಚಿಯ ವರದರಾಜಸ್ವಾಮಿಯ ಮೂರ್ತಿಯಂತೆ ಇಲ್ಲಿ ಅಲ್ಲಾಳನಾಥನನ್ನು ಪ್ರತಿಷ್ಠಾಪಿಸಿದ್ದಾನೆ.

ವರದರಾಜಸ್ವಾಮಿಯು ಎರಡು ಅಡಿಗಳು ಎತ್ತರದ ಪದ್ಮಪೀಠದ ಮೇಲೆ ಸ್ಥಾನಕವಾಗಿದ್ದು ಚಕ್ರ,ಶಂಖ,ಗದಾ,ಪದ್ಮಧಾರಿಯಾಗಿರುವ ಬಹಳ ಕಲಾತ್ಮಕ ಮೂರ್ತಿಯಾಗಿರುವುದು.ದೇವನ ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿಯಿರುವಳು. ವರದರಾಜಸ್ವಾಮಿಯು ಉಬ್ಬುಶಿಲ್ಪವಾಗಿರದೆ,ಪೂರ್ಣ ಪ್ರಮಾಣದ ಮೂರ್ತಿಯಾಗಿದ್ದು ದೇವನ ಹಿಂಬದಿಯು ಕಲಾತ್ಮಕವಾಗಿ ಮೂಡಿ ಬಂದಿದೆ. ಆದ್ದರಿಂದ "ಎಲ್ಲಾ ದೇವರ ಮುಂದೆ ನೋಡು,ಅಲ್ಲಾಳನಾಥನನ್ನು ಹಿಂದೆ ನೋಡು" ಎಂಬ ಜನಪದ ಹೇಳಿಕೆ ಪ್ರಚಲಿತದಲ್ಲಿದೆ. ಸ್ವಾಮಿಯ ನೇತ್ರಗಳು ಬಹಳ ಆಕರ್ಷಕವಾಗಿದ್ದು **"ನೇತ್ರನಾರಾಯಣ"** ಎಂತಲೂ ದೇವರನ್ನು ಕರೆಯುವರು. ಈ ಸ್ವಾಮಿಯನ್ನು ತದೇಕ ಚಿತ್ತದಿಂದ ದರ್ಶನ ಮಾಡಿದರೆ ದೃಷ್ಟಿದೋಷ ನಿವಾರಣೆಯಾಗುತ್ತದೆ ಎಂದು ಭಕ್ತರು ನಂಬುತ್ತಾರೆ.

### ಹೀಗೆ ಬನ್ನಿ...

ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಮದ್ದೂರು ಬೆಂಗಳೂರಿನಿಂದ 83 ಕಿ.ಮೀ. ಹಾಗೂ ಜಿಲ್ಲಾಕೇಂದ್ರ ಮಂಡ್ಯದಿಂದ 15ಕಿ.ಮೀ.ದೂರದಲ್ಲಿದೆ. ಬೆಂಗಳೂರು ಮತ್ತು ಮೈಸೂರಿನಿಂದ ಸಾಕಷ್ಟು ವಾಹನಗಳು ಹಾಗೂ ರೈಲು ಸೌಕರ್ಯಗಳು ಮದ್ದೂರಿಗಿದೆ.



## ರಸಪ್ರಶ್ನೆಗಳು

## ಸಪ್ತಗಿರಿ ಕ್ವಿಜ್ ಅಕ್ಟೋಬರ್ 2023

### ತಿಂಗಳ ರಸಪ್ರಶ್ನೆಯ ಉತ್ತರಗಳು

1.ಕೃತ್ತಿಕಾ ನಕ್ಷತ್ರ
2.ಪಾರ್ವತಿ
3.ಶ್ರಾವಣ ಮಾಸ
4.ಪುರುಷೋತ್ತಮ ಮಾಸ
5. ವಾದಿರಾಜ ಯತಿಗಳು
6.ಪತ್ನಿಯ ಮಾತುಗಳಿಂದ
7.ಫಾಲ್ಗುಣ ಪಂಚಮಿಯಂದು
8.ಹೆಳವನಕಟ್ಟೆ ಗಿರಿಯಮ್ಮ
9.ವರಮಹಾಲಕ್ಷ್ಮಿ
10.ಯಜ್ಞೋಪವೀತ
11.ತಿರುವಲ್ಲಾ
12.ತಿರುಕ್ಕುಡಂದೈ
13.ವಿಷ್ಣು
14.ಸಜ್ಜನರ ಸ್ನೇಹ
15.ಏಕ ಚಕ್ರಪುರ

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಈ ಶ್ರೀಶೈಲ ಪೂರ್ಣರು (ತಿರುಮಲನಂಬಿ) ಕುಮಾರರಾದ ಚಿಕ್ಕ ಶ್ರೀಶೈಲ ಪೂರ್ಣರಿಗೆ ತೋಳಪ್ಪರ್ (ಮಿತ್ರತಾತ) ಎಂದು ಹೆಸರು ಬರಲು ಕಾರಣ : -

"ಶ್ರೀಮದ್ಭಾಷ್ಯ ಕೃತೋ ಹ್ಯಾಭೇ ಕಥಕೈರ್ವಾದೇ ಪಣೇ ಪ್ರಸ್ತುತೇ
ಸಾಮ್ಯೈಕ್ಯ ಶ್ರುತಿಭೇದವಾಕ್ಯೇ ಹೃದಯಾನ್ಯುಕ್ತ್ವಾ ನಿಶಿಥೇ ಹರಿಃ,
ಮಿತ್ರಂ ಭಾಷ್ಯಕೃತೇ ..ಗಾ.... ಸಚಯಂ ಸರ್ವಸ್ಯೇ ಮಿತ್ರಂ ಜಗೌ
ತಂ ಶ್ರೀಭೂಧರ ಪೂರ್ಣಪುತ್ತವರಂ ಶ್ರೀ ಶೈಲಪೂರ್ಣಂ ಭಜೆ
ಭಾರದ್ವಾಜ ಕುಲಾಬ್ಧಿಂದುಂ ಪ್ರಜ್ಞಾ ಭಕ್ತ್ಯಮೃತಾರ್ಣವಮ್
ಶ್ರೀಶೈಲಪೂರ್ಣತನಯಂ ಮಿತ್ರತಾತಗುರುಂ ಭಜೆ
ಶ್ರೀ ಮದ್ವೆಂಕಟನಾಯಕೇನ ಜಗತಾಂ ತಾತೇನ ವಾಕ್ಯಾತ್ಪರಂ
ತಾತೇತ್ಯದರತೋ ಪಿಯಸ್ಯ ಮಹಿಮಾ ಲೋಕೇ ಪ್ರಸಿದ್ಧಿಂ ಗತಃ
ತಂ ತಾತಸ್ಯ ಚ ತಾತ ಮಾರ್ಯಶರಣಂ ಶ್ರೀ ಶೈಲಪೂರ್ಣ ಗುರುಂ
ಭಾರದ್ವಾಜಕುಲೀನ ಮಾಶ್ರಿತನಿಧಿಂ ಪ್ರಜ್ಞಾನಿಧಿಂ ಸಂಶ್ರಯೇ"

(ಶ್ರೀಭಾಷ್ಯಕಾರರಿಗೆ ಅಬೇಧವಾದದೊಂದಿಗೆ (ಅದ್ವೈತಿಗಳೊಂದಿಗೆ) ವಾದ ವಿವಾದಗಳು ಏರ್ಪಡಲು ಶ್ರೀಹರಿ ಅರ್ಧರಾತ್ರಿ, ಸಾಮ್ಯ ಶ್ರುತರಿಗೆ, ಐಕ್ಯಶ್ರುತರೀ ಬೇಧ ವಾಕ್ಯಗಳ ಮಾರ್ಮಿಕಾರ್ಥಗಳನ್ನು ಹೇಳಿ



ಭಾಷ್ಯಕಾರರಿಗೆ ಇವನು (ಚಿಕ್ಕಶ್ರೀಶೈಲಪೂರ್ಣನು) ಮಿತ್ರನು ಎಂದು ಹೇಳಿದನು. ಆ ಭಾಷ್ಯಕಾರನು ಈತನನ್ನೂ ಎಲ್ಲರಿಗೂ ಮಿತ್ರರೆಂದು ಸಾರಿ ಹೇಳಿದನು.

ಅಂತಹ ಶ್ರೀಶೈಲಪೂರ್ಣರ ಕುಮಾರನಾದ ಚಿಕ್ಕ ಶ್ರೀಶೈಲಪೂರ್ಣರನ್ನು ಸೇವಿಸುತ್ತೇನೆ. ಭಾರದ್ವಾಜಕುಲ ಸಮುದ್ರ ಸೋಮರಾದ ಪ್ರಜ್ಞಾ ಭಕ್ತ್ಯಮೃತನಿಗೆ ಸಾಗರ ಸದೃಶ್ಯರಾದ ಶ್ರೀಶೈಲಪೂರ್ಣ ತನಯರಿಗೆ, ಮಿತ್ರತಾತ ಗುರುವನ್ನು ವಂದಿಸುವೆನು ಸಕಲ ಲೋಕಗಳಿಗೆ ತಂದೆಯಾದ ಶ್ರೀವೇಂಕಟನಾಯಕನು ಎಲ್ಲರಿಗೂ ತಾತ (ತಂದೆ) ಎಂದು ಕರೆಯಲು, ಅಂತಹ ಮಹಿಮೆಯುಳ್ಳ ಮಹಿಮಾ ಪ್ರಸಿದ್ಧ ನಾದ ತಾತನಿಗೆ ತಾತ (ಜಗತ್ಪತಿಯಾದ ವೇಂಕಟೇಶ್ವರನಿಗೆ ತಾತನೆಂದು ಸಂಭೋದದೊಂದಿಗೆ)ಆರ್ಯರಿಗೆ ಶರಣಾಗತನಾದವನು ಭಾರದ್ವಾಜ ವಂಶಜನು, ಆಶ್ರಿತರಿಗೆ ಅವಧಿಯಾದವನು ಪ್ರತಿಭಾಖನಿ ಯಾದವನು ಶ್ರೀಶೈಲ ಪೂರ್ಣ ಗುರುವನ್ನಾಶ್ರಯಿಸಿದನು.)

ತಿರುಪತಿ ತಿರುಮಲೆ ನಿತ್ಯವಾಸಿಗಳಾದ ಹಿರಿಯರು ಶ್ರೀಮದ್ ಭಗವದ್ರಾಮಾನುಜಾಚಾರ್ಯರ ಅಣತಿಯೊಂದಿಗೆ ಶ್ರೀವೇಂಕಟಾ ಚಲ

ಪತಿಗೆ ನಡೆಯುವಂತೆ ಗೋವಿಂದರಾಜು ಸ್ವಾಮಿಗೆ ಕೂಡ ಹಾಗೆಯೇ ಐತಿಹ್ಯೋತ್ಸವಗಳು, ಅಧ್ಯಯನೋತ್ಸವಗಳು, ಮೊದಲಾದ ಶ್ರೀಭಗವದ್ರಾಮಾನುಜರ ದರ್ಶನಧರ್ಮಗಳೆಲ್ಲವನ್ನು ಆಚರಿಸಬೇಕೆಂದು ಕಟ್ಟಳೆ ಹಾಕಿ ದೊಡ್ಡ ಅಧ್ಯಯನೋತ್ಸವ (ರಾಪತ್ತು) ತಿರುನಾಳ್‌ನ ಮುಕ್ತಾಯ ದಿನದಂದು ಸಾಯಂಕಾಲ ಶ್ರೀನಮ್ಮಾಳ್ವಾರರನ್ನು ಪಲ್ಲಕ್ಕಿಯಲ್ಲಿ ವಿಜಯವನ್ನು ಮಾಡಿ ವೇಂಕಟಾಚಲಪತಿಗೆ ಶ್ರೀಗೋವಿಂದರಾಜು ಐಕ್ಯ (ಅಬೇಧ) ತಿಳಿಸುವುದಕ್ಕೂ ಮೊದಲು ದಿವ್ಯ ತಿರುಮಲೆಗೆ (ಬೆಟ್ಟಕ್ಕೆ), ಶ್ರೀವೇಂಕಟಾಚಲಪತಿಗೆ ಮಂಗಳಾಶಾಸನವನ್ನು ಮಾಡಿ ಶ್ರೀಪಾದಾರ್ಚನೆಗಾಗಿ ನೃತ್ಯ ಗೀತೆ ವಾದ್ಯದೊಂದಿಗೆ ಜಿಯ್ಯರುಗಳನ್ನು, ಶ್ರೀವೈಷ್ಣವರನ್ನು ಸ್ತೋತ್ರಗದ್ಯಾನು ಸಂಧಾನಗಳೊಂದಿಗೆ ಗೋವಿಂದರಾಜು ದೇವಾಲಯಕ್ಕೆ ಪ್ರದಕ್ಷಿಣೆ ಮಾಡಿ ಹೊರಟು ತಿರುಮಲೆ ಆಚಾರದ ಮೇರೆಗೆ (ಎಲ್ಲ) ಎಂಬ ಶಿಷ್ಯಕ ಗೋಷ್ಠಿಯಲ್ಲಿ ಪ್ರಸಿದ್ಧವಾದ "ಪೆಣ್ಣೆಪಣ್ಣೆ" ಎಂಬ ಶ್ರೀ ಮಂಟಪದಲ್ಲಿ ಅಧಿಷ್ಠಾನಗೊಳಿಸಿ, ದಿವ್ಯ ತಿರುಮಲಗಿರಿಯನ್ನು ಶ್ರೀವೇಂಕಟರಮಣನ ಕುನ್ನ ಮೇನ್ವಿ, ಅಕಲಕಿಲ್ಲನ್, ಒಳವಿಲ್‌ಕಾಲಂ-ಎಂಬ ಪಾಶುರಗಳನ್ನು ಅನುಸಂಧಾನ ಮಾಡಿ ಪಾದಾರ್ಚನೆ ಮಾಡಲು, ಅಂತಹ ಶ್ರೀವೇಂಕಟೇಶ್ವರನ ಶೇಷ ವಸ್ತ್ರವನ್ನು, ಮಹಾಪ್ರಸಾದವನ್ನು ಅಭಯ ಹಸ್ತವನ್ನೂ, ಉಟ್ಟ ಬಿಟ್ಟು ಪೀತಾಂಬರವೇ ಮೊದಲಾದ ಮರ್ಯಾದಾ ವಸ್ತುಗಳನ್ನು ಅನುಗ್ರಹಿಸಿ ಕಳುಹಿಸಿ ಕೃತಾರ್ಥರಾಗಿ ಮರಳಿಬಂದು ಗೋವಿಂದ ಸ್ವಾಮಿಯ ಹೆಸರಾಂತ ಶ್ರೀಮಣಿಮಂಟಪದಲ್ಲಿ ಅಧಿಷ್ಠಾನ ಮಾಡಿ, ನಂತರ ಶ್ರೀಗೋವಿಂದ ರಾಜುಸ್ವಾಮಿ ಅರ್ಚನೆಯನ್ನು ಸ್ವೀಕರಿಸಿ "ಮುದ್ಗಾನ್ನ ವ್ಯಂಜನೋಪೇತಂ ಪ್ರಭೂತಂ ತು ನಿವೇದಯೇತ್" (ಹೆಸರು ಬೇಳೆ ಕಲಿಸಿದ ಅನ್ನ (ತವ್ವೆ) ವ್ಯಂಜನಗಳಿಂದ ಮಿಗಿಲಾದ ಆಹಾರವನ್ನು ನಿವೇದನೆ ಮಾಡತಕ್ಕದ್ದು.) ಹೇಳಿದ ರೀತಿಯಲ್ಲಿ ಪ್ರಶಸ್ತವಾದ ರೀತಿಯಲ್ಲಿ ಸಮರ್ಪಿಸಿ ತಿರುವಾಯ್ ಮೊಳಿಯನ್ನು ಕೇಳಿಸಿ ವೇದಗಳಿಗೆ ಸಮಾಪ್ತಿ ಮಂಗಳಗಳನ್ನು ಜರುಗಿಸಿ ತಿರುವಾಯ್‌ಮೊಳಿಗೆ ಸಮಾಪ್ತಿ ಮಾಡುವಾಗ ವಕುಳಾಭರಣಗಳನ್ನು (ಶ್ರೀನಮ್ಮಾಳ್ವಾರರು) ಗೋವಿಂದರಾಜುಸ್ವಾಮಿ ಶ್ರೀಪಾದಗಳಿಗೆ ಸ್ಪರ್ಶಿಸಿದ ಬಳಿಕ ಕಟ್ಟಿಯಮ್ (ಪ್ರಶಸ್ತಿ ಪ್ರಬಂಧ) ಕೇಳಿಸುವವರು.

ಶ್ರೀ ವೇಂಕಟಾಚಲ ವಿಭೋ ರಪರಾವತಾರ
ಗೋವಿಂದರಾಜ ಗುರುಗೋಪಕುಲಾವತಾರ
ಶ್ರೀ ಪೂರಧೀಶ್ವರ ಜಯಾದಿಮ ದೇವದೇವ
ನಾಥ ಪ್ರಸೀದ ನತ ಕಲ್ಪತರೋ ನಮಸ್ತೇ
ಲೀಲಾ ವಿಭೂತಿ ಜನತಾ ಪರಿರಕ್ಷಣಾರ್ಥಂ
ದಿವ್ಯಪ್ರಭೊದ ಶುಕಯೋಗಿ ಸಮಪ್ರಭಾವ
ಸ್ವಾಮಿನ್ ಭವತ್ಪದಸರೋರುಹಸಾತ್ಕೃತಂ ತಂ
ಯೋಗೀಶ್ವರಂ ಶಠರಿಪುಂ ಕೃಪಯಾ ಪ್ರದೇಹಿ"

(ಶ್ರೀ ವೇಂಕಟಾಚಲಪತಿಗೆ ಅವತಾರ ಸ್ವರೂಪನಾದವನೇ! ಶ್ರೀ ಗೋವಿಂದರಾಜಾ! ಗೌರವಾರ್ಹವಾದ ಗೋಪಕುಲದಲ್ಲಿ ಅವತರಿಸಿದವನೇ! ತಿರುಪತಿ ನಗರಾಧೀಶ್ವರಾ! ಆದ್ಯಂತ್ಯಕ್ಕು ದೇವದೇವನೇ! ಜಯವಾಗಲಿ. ಅಸ್ಮನ್ನಾಥಾ! ದಯೆಮಾಡು. ಪ್ರಣತರ ಪಾಲಿನ ಕಲ್ಪವೃಕ್ಷವೇ! ನಿನಗೆ ಪ್ರಣಾಮಗಳು! ಶ್ರೀಗೋವಿಂದರಾಜಾ! ದಿವ್ಯ ಜ್ಞಾನ ಸಂಪತ್ತನ್ನು ಶುಕಯೋಗಿ ಮೂಲಕ ಸಮವಾದ ನಿನ್ನ ಮಹಿಮೆಗಳನ್ನು ನಿನ್ನ ಚರಣಾರ ವಿಂದಗಳಿಗೆ ಲೀನವಾಗುವಂತೆ ಪ್ರಖ್ಯಾತವಾದ ಯೋಗೀಶ್ವರನ ಶಠರಿಪುರವನ್ನು (ನಮ್ಮಾಳ್ವಾರರು) ಲೀಲಾ ವಿಭೂತಿಯಿಂದ (ಈ ಭೂಲೋಕದಲ್ಲಿ ಪ್ರಜೆಗಳನ್ನು ಪಾಲಿಸಲೆಂದೇ ದಯೆತೋರಿ ನಮ್ಮನ್ನು ಉದ್ಧರಿಸು.)

ಮೇಲಿನ ಶ್ಲೋಕವನ್ನು ಅನುಸಂಧಾನ ಮಾಡುವುದರ ಮೂಲಕ "ಶ್ರೀವೇಂಕಟೇಶಾವತಾರ ತಿಲ್ಲೆ" (ಚಿದಂಬರ) ಗೋವಿಂದರಾಜ, ತಿರುಪತಿ ಪ್ರಭು, ನಮ್ಮಾಳ್ವಾರರು ಲೀಲಾವಿಭೂತಿಯನ್ನು (ಈ ಭೂಲೋಕದ ಲೋಕೋಪಕಾರಾರ್ಥಕ್ಕಾಗಿ ನರರ ಮೇಲಿನ ಕೃಪೆಯ ಕಾರಣದಿಂದ ಪ್ರಸಾದಿಸುವ ಆಳ್ವಾರರು ಕೃತಾರ್ಥರಾದರು. ಪ್ರಸಾದ ವಿನಿಯೋಗದ ನಂತರ ಭಗವದ್ರಾಮಾನುಜಾಚಾರ್ಯರ ಶಿಷ್ಯರೆಲ್ಲರನ್ನು ಶ್ರೀಪರಾಂಕುಶ ಪಂಚವಿಂಶತಿ ನಕ್ಷತ್ರ ಮಾಲೆಯನ್ನು ಅನುಸಂಧಿಸುವ ಸಮಸ್ತ ಗೀತಾವಾದ್ಯಗಳೊಂದಿಗೆ ತಮ್ಮ ಆಲಯಕ್ಕೆ ಪ್ರಸ್ತಾಪಿಸಿ ಎಲ್ಲರಿಗೂ ತೀರ್ಥ ಪ್ರಸಾದವನ್ನು ಮಧುಕರವಿಸಂಜ್ಞೆತರಾಗಿ ಶ್ರೀಪಾದಗಳನ್ನು (ಶಠಕೋಪವಂಥಹುದು) ಪ್ರಸಾದಿಸಿ, ಭಗವದ್ರಾಮಾನುಜರ ದಿವ್ಯಾಜ್ಞ ಪ್ರವರ್ತಿಯನ್ನು ಎಲ್ಲರಿಗೂ ರಕ್ಷಿಸುವಂದದಿ ಏರ್ಪಾಟು ಮಾಡುವಿರಿ.

ಹೀಗೆ ಗೋವಿಂದರಾಜುಸ್ವಾಮಿ ಅಧ್ಯಯನೋತ್ಸವವನ್ನು ಸ್ವೀಕರಿಸಿದ ಬಳಿಕ ಒಂದು ದಿನ (ಅನಂತಗರುಡಾದಿ) ನಿತ್ಯಸೂರರೊಡನೆ ಪರಾಂಕುಶ ಪರಕಾಲಾದಿ ಮುಕ್ತರೊಂದಿಗೆ ಆಳ್ವಾದಿತೀರ್ಥರುಗಳಿಗೆ ಜಯಕಾರ ಮಾಡಿ, ಚೊಕ್ಕವಾಗಿ ಅಭಿಷೇಕವನ್ನು ಮಾಡಿಕೊಂಡು ಪೂರ್ಣವಾದ ವಿರಾಜಮಾನದ ನಂತರ ಸಮಸ್ತ ಪರಿಜನರೊಡನೆ, ನಿತ್ಯ ಮುಕ್ತರೊಂದಿಗೆ ಹಿಂದಿರುಗಿ ದೇವಾಲಯಕ್ಕೆ ಹೊರಟು ಬರುವವರಿಗೆ ಯಾವುದೇ ನಿತ್ಯಾರ್ಚನೆಗಳಿರುವುದಿಲ್ಲವೆಂದು ನೆರೆದಿರುವ ಹಿರಿಯರು ನೇಮವನ್ನು ಕಲ್ಪಿಸಿದ್ದಾರೆ.

ಶ್ರೀಗೋವಿಂದರಾಜಸ್ವಾಮಿಯ ಚಿಕ್ಕ ಅಧ್ಯಯನೋತ್ಸವವು (ಹಗಲಿನ ಹೊತ್ತು) ನಲ್ಲಿ ನಾಲ್ಕನೇ ದಿನ ರಾತ್ರಿ 'ವಿಣ್ಣೆಲಮೇಲಾಪ್ಪು' ಆಕರ್ಷಿಸುವಾಗ, ಆಳ್ವಾರರೊಂದಿಗೆ, ಆಚಾರ್ಯರೊಂದಿಗೆ, ಆಳ್ವಾರರ ಶ್ರೀಪುತ್ರಿಯನ್ನು (ಗೋದಾದೇವಿ) ಗೋವಿಂದರಾಜಸ್ವಾಮಿಯೊಡನೆ ಸಿಂಹಾಸನದ ಮೇಲೆ ಒಂದು ಕಡೆ ಸೇರಿಸಿ ವಿಜಯವನ್ನು ಮಾಡಬೇಕೆಂದು ಹಿರಿಯರ ನಿಯಮವು.

- ಮುಂದುವರೆಯುತ್ತದೆ



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಇದೇ ರೀತಿ ಪೂದತ್ತಾಳ್ವಾರ್ ಅವರ ತಿರುವಂದಾದಿಯಲ್ಲಿ ಶಿವನ ವಿಷ್ಣುವಿನ ಪ್ರಸ್ತಾಪ ಬರುವ ಪಾಶುರಗಳು ಮೂರೇ ಮೂರು. ಅವು 12,13 ಮತ್ತು 63. ಈ ಆಳ್ವಾರ್ ತಿರುವೇಂಗಡದ ಮೇಲೆ ಹಾಡಿರುವ ಪಾಶುರಗಳು 25,26,27,28,33,45,48, 53,54,70,72,75 ಮತ್ತು 13 ಪಾಶುರಗಳು. ಇಲ್ಲಿಯೂ ತಿರುವೇಂಗಡದ ಮೇಲೆ ಹಾಡಿರುವ ಪಾಶುರಗಳೇ ಬೇರೆ, ಶಿವ ವಿಷ್ಣುವಿನ ಪ್ರಸ್ತಾಪ ಬರುವ ಪಾಶುರಗಳೇ ಬೇರೆ ಇರುವುದನ್ನು ಕಾಣಬಹುದು.

ಇನ್ನು ಮೂರನೇ ಆಳ್ವಾರ್ ತಿರುವಂದಾದಿಯಲ್ಲಿ ಶಿವ ವಿಷ್ಣುವಿನ ವಿಚಾರ ಪಾಶುರಗಳು 2 ರಲ್ಲಿ ಮಾತ್ರ. ಅವೇ 63, ಮತ್ತು 97. ಇದರಲ್ಲಿ ಪಾಶುರ 63 ಒಂದರಲ್ಲಿ ಮಾತ್ರ ಶಿವ ವಿಷ್ಣು ಅಬೇಧ ಮತ್ತು ತಿರುಮಲೆಗೆ ಸಂಬಂಧಿಸಿದ ವಿಚಾರ ತಿಳಿದುಬರುತ್ತದೆ.

ಅಂತೂ ಈ ಮೂರು ಆಳ್ವಾರರು ತಿರುವಂದಾದಿಗಳ 300 ಪಾಶುರಗಳಲ್ಲಿ ಹರಿಹರ ಅಭೇಧ ಇರುವ ಮತ್ತು ಅದೇ ಪಾಶುರವು ತಿರುವೇಂಗಡಕ್ಕೆ ಸಂಬಂಧಿಸಿದಂತೆ ಇರುವುದು ಕೇವಲ ಒಂದೇ ಒಂದು ಪಾಶುರ ಎಂದಾಗ ಶ್ರೀ ಪಿ.ಸೀತಾಪತಿ, ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಟಿ.ಕೆ.ಟಿ. ವೀರರಾಘವಾಚಾರ್ಯ ಇವರ ವಾದಗಳು ಸರಿಯಾದ್ದಲ್ಲವೆಂದು ಹೇಳಲೇಬೇಕಾಗುತ್ತದೆ. ರಾಯರು ಶ್ರೀಅಯ್ಯಂಗಾರ್ಯ ಮತ್ತು ಟಿ.ಕೆ.ಟಿ.ವೀರರಾಘವಾಚಾರ್ಯರನ್ನಾಗಲೀ ಹೇಗೆ 'ದೃಢವಾದಿ' (Authority) ಯರನ್ನಾಗಲೀ ಒಪ್ಪಿದ್ದಾರೆ ಎಂಬುವುದು ಗೋಚರವಾಗದೇ ಇರುವ ವಿಚಾರ. There are Several other verses by the alwars in the same strain ಎಂದು ಹೇಳುವ ಸೀತಾಪತಿ ಅವರ ಹೇಳಿಕೆ ತಪ್ಪಾಗುತ್ತದೆಯಷ್ಟೆ !

ಸೀತಾಪತಿಯವರು ಈ ಹಿಂದೆಯೇ ಹೇಳಿರುವಂತೆ ಈ ವೇಂಗಡದೊಡೆಯನು ವಿಷ್ಣುವೂ,ಶಿವನೋ, ಸುಬ್ರಹ್ಮಣ್ಯನೋ, ಶಕ್ತಿದೇವತೆಯೋ ಎನ್ನುವ ಜಿಜ್ಞಾಸೆ ಬಹಳ ಕಾಲದಿಂದಲೂ ನಡೆದುಬಂದಿದೆ. ಆದರೆ ಬಹಳ ಪ್ರಾಚೀನ ಕಾಲದ ತಮಿಳು ಗ್ರಂಥಗಳಿಂದಲೂ ಆಳ್ವಾರ್ ಪಾಶುರಗಳಿಂದಲೂ ಈ ವಿಗ್ರಹ ವಿಷ್ಣುವಿನದೇ ಎಂದು ಸ್ಥಿರಪಡುತ್ತದೆ. ಈ ಜಿಜ್ಞಾಸೆ ಏರ್ಪಡುವುದಕ್ಕೆ ಶ್ರೀ ಸೀತಾಪತಿಯವರೇ ಹೇಳುವಂತೆ 1. ವಿಗ್ರಹಕ್ಕೆ ಜಟೆಯಿದೆ. ಜಟೆಯೆಂದರೂ ಸೀತಾಪತಿಯವರೇ ಹೇಳುವಂತೆ ತಲೆ ಕೂದಲು ಕ್ಷತ್ರಿಯರ ತರಹ ಕತ್ತಿನ ಹಿಂಭಾಗದವರೆಗೂ ಇಳಿಬಿದ್ದಿರುವುದು ಅಥವಾ ಹಬ್ಬಿರುವುದು. 2. ವಿಗ್ರಹಕ್ಕೆ ನಾಲ್ಕು ಕೈಗಳಿವೆ ಎಂದರೂ ಎರಡು ಕೈಗಳು ಶಂಖ ಚಕ್ರಗಳನ್ನು ಧರಿಸಲು ಇವೆ, ಎಂದರೂ ಶಂಖ ಚಕ್ರಗಳು ವಿಗ್ರಹದ ಅವಿಭಾಜ್ಯ ಅಂಗವಾಗದೇ ಇರುವುದು 3. ವಿಗ್ರಹವು ಶೂಲ

ವನ್ನು ಹಿಡಿದಿದೆ ಎನ್ನುವ ಅಂಶ ಶ್ಲೋಕದಲ್ಲಿರುವುದು, ಶೂಲವು ಕಾಣಸಿಗುವುದಿಲ್ಲ. 4.ವಿಗ್ರಹದ ಭುಜದ ಮೇಲೆ ನಾಗಾಭರಣ ವಿರುವುದು. 5.ನಡುಪಟ್ಟಿಯಲ್ಲಿಯೂ ನಾಗಾಭರಣವು ಉಡಿದಾರದ ಮೇಲೆ ಇರುವುದು. 6. ಸೀತಾಪತಿಯವರು ಜಟೆಯಲ್ಲಿ ಚಂದ್ರನ ಗುರುತಿದೆ ಎನ್ನುತ್ತಾರೆ 7. 'ಅಪ್ಪನ್' ಎನ್ನುವ ಹೆಸರು ಕುಮಾರ ಸ್ವಾಮಿಗೂ ಬಳಸಲ್ಪಡುತ್ತದೆಯಂತೆ. 8.ಸ್ವಾಮಿ ಪುಷ್ಕರಣಿ ಎನ್ನುವ ಹೆಸರು ಕುಮಾರ ಪದಸೂಚಕವಂತೆ. 9.ಕುಮಾರಧಾರ ಎನ್ನುವ ತೀರ್ಥವೊಂದು ಉಂಟು.

ಈ ವಿಚಾರದಲ್ಲಿ ಆಸಕ್ತಿ ಉಳ್ಳವರು "ಆಳ್ವಾರುಲ ಮಂಗಳಾಶಾಸನ ಪಾಶುರಮುಲು" ಎನ್ನುವ ಪುಸ್ತಕದಲ್ಲಿ ಪ್ರತಿಯೊಂದು ಅಂಶವನ್ನು ವಿಶ್ಲೇಷಿಸಿ ಕಡೆಗೆ ಈ ವಿಗ್ರಹ ವಿಷ್ಣುವಿನದೇ ಎಂದು ಸಿದ್ಧಪಡಿಸಿರುವ ವಿವರಗಳನ್ನು ಓದಿ ಮನ ಗಾಣಬಹುದು.

ಜೈನ ಕವಿ 'ಐಯನಾರಿದನಾರ್' ಎನ್ನುವವನೇ ತನ್ನ 'ಪರಪ್ಪೊರುಳ್' ಎನ್ನುವ ವೆಣ್ಬಾಮಾಲೆಯಲ್ಲಿ "ಪುಲವರಾತ್ರುಪ್ಪಡೈ" ಎನ್ನುವ ಭಾಗದಲ್ಲಿ

ವೆರುಕೊಳ್ ಆರ್ವೆಯರುವಿ ವೇಂಗಡಚ್ಚೆಲ್ವನ್
ನೆರುಕೊಳ್ ಪಡಿತ್ತಾಯ್ ನೀಯುಮ್ - ಪೊರುಗಳ್ಕ್
ಇರುಳೀಯುಂಜ್ಞಾ ಲತ್ತಿಡರೆಲ್ಲಾಂ ನೀಂಗಿ
ಅರುಳೀಯುಂ ಅರಿಯವನ್

ಎಂದಿದ್ದಾನೆ. ಅರಿಯವನ್ ಎಂದರೆ ಚಕ್ರ ಹಿಡಿದಿರುವವನು, ವಿಷ್ಣು ಎಂದರ್ಥ ಹೇಳುತ್ತಾನೆ.

ಶಿವ ಪುರಾಣ ಬರೆದವರು ಶಿವನೆಂದು ಹಾಡುತ್ತಾರೆ.
ವೇಂಗಡನಾದನ್ನೈ ವೇದಾಂತಕ್ಕೂತ್ತನ್ನೈ
ವೇಂಗಡತ್ತುಳ್ಳೈ ವಿಳೈಯಾಡುಂ ನಂದಿಯ್ಯೈ
ವೇಂಗಡಂ ಎನ್ರೇ ವಿರಿಗರಿಯಾದವರ್

ಇದು ತಿರುಮಲೆ ನಾಯನಾರ್ ಎನ್ನುವವರು ವರ್ಣಿಸಿರುವ ರೀತಿ.(ತಿರುಮಲೆ ಎನ್ನುವುದು ಈ ಕವಿಯ ಹೆಸರು ಎಂದರೆ ತಿರುಮಲೆ ಎನ್ನುವ ಹೆಸರು ಈ ಗಿರಿಗೆ ಬಹಳ ಪ್ರಾಚೀನಕಾಲದಿಂದಲೇ ಅನ್ವಯಗೊಂಡಿದ್ದು ಮಾತ್ರವಲ್ಲದೆ ಜನರಲ್ಲೂ ಪ್ರಖ್ಯಾತವಾಗಿಯೇ ಪ್ರಚಾರಗೊಂಡಿತ್ತು ಎನ್ನುವುದಕ್ಕೆ ಇದೂ ಮತ್ತೊಂದು ಆಧಾರ. ಈ ಕವಿಗಳು ಆಳ್ವಾರ್‌ಗಳ ಕಾಲಕ್ಕೂ ಹಿಂದಿನವರು. ಕ್ರಿ.ಶ. 1 ರಿಂದ 4 ನೇ ಶತಮಾನದವರಿರಬೇಕು.)

ಅರಿಯಾರುಂ ಪೂಂ ಪೋಲಿಲ್ ಶೋರಿ ಅಮ್ಮಾ ತ್ತೂರಮ್ಮಾನ್
ಅರಿಯಾರುಂ ಪೋಗತ್ತಮುದನ್ - ಅರಿಯಾರುಂ
ವೇಂಗಡತ್ತು ಮೈಯ್ಯಾನ್ನೈ ಮೇವಾಲುಯಿರೆಲ್ಲಾಂ
ವೇಂಗಡತ್ತು ನೋಯಾಲ್ ಶಿರಂದು

ಎಂದಿದ್ದಾನೆ. ಕಪಿಲದೇವ ನಾಯನಾರ್ ಎನ್ನುವ ಕವಿ ಶಿವ ಪೆರುಮಾನ್ ತಿರುವಂದಾದಿಯಲ್ಲಿ

ಮಿನ್‌ಪೋಲುಂ ಶುಜಡೆಯಾನ್ನೈ
ಮಾಲೋಡುಂ ಈಂಡಿಶೈನ್ದಾಲ್
ಎನ್ ಪೋಲುಂ ಕಾಣ್ಬಾರ್
ಕಟ್ಕ್ ತೋನ್ರಿರೇಲ್ - ತನ್‌ಪೋಲುಂ
ಪೊರ್ರುನ್ರುಂ ನೀಲಮಣಿಕ್ಕುನ್ರಂ ತಾಮುಡನೇ
ನಿರ್ಕಿನ್ರ ಪೋಲುಂ ನೆಡಿದ್

ಕಾರೆಕಾಲಮ್ಮನು ಹಾಡುವ ರೀತಿ ಇದು.ಆದರೆ ಶೇರಮಾನ್ ಪೆರುಮಾನ್ ಎನ್ನುವ ಕವಿಯು ಈ ದೇವರಲ್ಲಿ ಹರಿ ಹರ ಅಬೇಧವನ್ನು ಕಂಡಿದ್ದಾನೆ.

ಇಡುಮಾಲ್ ಪಲಂದಾನಿಡಂಬಾಲ್
ತುಲಿಯ್ ವಲಪ್ಪಾಲೊಣ್‌ಕೂನ್ರ
ವಡಿಮಾ ಅಡುನ್ದು ಗಿಲ್ ತೋಲ್ ವಲಂ
ಅರಿಯಿಡಂ ವಲಮಾನ್
ಇಡಮಾಯ್ ತಲಿದಾಲ್ ನಲಂಗಾರ್
ಕುಡ ಮಾಲಿಡಯ್ ವಲಂ
ಕೊಕ್ಕರೆಯಾಮೆನ್‌ಗಳ್ ಕೂತ್ತನುಕ್ಕೇ

ಈ ವಿಗ್ರಹವು ಶಂಖ ಚಕ್ರಗಳನ್ನು ಧರಿಸಿರುವುದು ಎಂದು ಹಿಂದಿನಿಂದಲೇ ಪ್ರಸಿದ್ಧವಾಗಿದೆ. ಆದರೆ ಶಿವನ ಜಟೆಯಂತೆ ಸ್ಪಷ್ಟ ಜಟಾಜೂಟವೂ ಅರ್ಧಚಂದ್ರವೂ, ಕತ್ತಿನ ಸುತ್ತಲೂ ನಾಗಾಭರಣವೂ, ಹಣೆಯಲ್ಲಿ ಭಸ್ಮ ತ್ರಿಪುಂಡ್ರ, ತ್ರಿಣೇತ್ರವೂ ಇಲ್ಲದಿರುವುದೂ,ಎದುರಿಗೆ ನಂದಿಯೂ ಇರದೇ ಇರುವುದು ತ್ರಿಶೂಲ,ಢಮರುಗಳು ಲೋಪವಾಗಿರುವುದೂ ಇದು ಶಿವನ ವಿಗ್ರಹವಲ್ಲವೆಂಬುದಕ್ಕೆ ಸಾಕ್ಷ್ಯಗಳೆಂದು ಹಲವರು ವಾದಿಸುತ್ತಾರೆ. ಜೊತೆಗೆ ಶಿವನಿಗೆ ಜಟೆಯೇ ಎತ್ತಿ ಕಾಣುವುದನ್ನು ನಾವು ಎಲ್ಲ ಎಡೆಯಲ್ಲೂ ಕಂಡಿದ್ದೇವೆ.ಶಿವನು ಕಿರೀಟಧಾರಣ ಮಾಡಿಕೊಂಡಿರುವ ಲಕ್ಷಣ ಎಲ್ಲೂ ಕಂಡಿಲ್ಲ, ಕೇಳಿಲ್ಲ, ಆದರೆ ಈ ವಿಗ್ರಹಕ್ಕಾದರೋ ಕಿರೀಟವಿದೆ ಎನ್ನುತ್ತಾರೆ,ಮತ್ತೊಂದು ಮುಖ್ಯ ವಿಚಾರ,ಶಿವನು ವಿಗ್ರಹರೂಪದಿಂದ ಯಾವ ಗುಡಿಯಲ್ಲೂ ಪೂಜೆಗೊಳ್ಳದಿರುವುದು. ಅವನ ಲಿಂಗ ರೂಪಕ್ಕೇ ಎಲ್ಲಾ ಕ್ಷೇತ್ರಗಳಲ್ಲೂ ಪೂಜೆಸಲ್ಲಿಸುವುದು ಆಗಮಶಾಸ್ತ್ರದಲ್ಲೇ ವಿಧಿ ವಿಧಾನವಾಗಿ ಪರಿಗಣಿಸಲ್ಪಟ್ಟಿದೆ.ಈಶ್ವರನಿಗೆ ನಾಗಾಭರಣ ತೋಳು ನಡುಗಳಲ್ಲಿ ಇರುವುದಾಗಿ ವರ್ಣಿತವಾಗಿಲ್ಲ.ಈ ಎಲ್ಲ ಲಕ್ಷಣಗಳ ಬೇಧವನ್ನು ಕಂಡಿರುವ ಲಾಕ್ಷಣಿಕರು ಈ ವಿಗ್ರಹ ಶಿವನದಲ್ಲವೆಂದು ನಿರ್ಧರಿಸಿದ್ದಾರೆ.

- ಮುಂದುವರೆಯುತ್ತದೆ

# ತಿರುಕಣ್ಣಂಗುಡಿ

**108 ದಿವ್ಯದೇಶಗಳು**

**ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

ಶ್ರೀಮತ್ ಶ್ರವಣ ಕಾಸಾರೇ ತಿರುಕ್ಕಣಂ ಗುಡೀರಿತೇ
ಪುರೇ ಶ್ಯಾಮಲ ತನ್ವಾಖ್ಯಃ ಅರವಿಂದ ಲತಾಯುತಃ।
ಉತ್ಪಲಾಖ್ಯ ವಿಮಾನಸ್ಥಃ ಪ್ರಾಙ್ಮುಖೋ ಗೌತಮರ್ಷಿಣಾ
ಪ್ರತ್ಯಕ್ಷಿತಃ ಕಲಿಘ್ನಾರ್ಯ ಸಂಸ್ತುತೋ ಭುವಿ ಭಾಸತೇ ಃ॥

ಈ ದಿವ್ಯದೇಶವು ನಾಗಪಟ್ಟಣದ ''ಶಿಕ್ಕಲಿಕ್ಕ ವಳೂರ್'' ಮಧ್ಯದಲ್ಲಿರುವ ಅಳಿಯೂರ್ ಸಮೀಪದಲ್ಲಿ ನೆಲೆಸಿದೆ. ಹಾಗೇ ತಿರುವಾರೂರ್‌ನಿಂದ ಪೂರ್ವದಿಕ್ಕಿಗೆ ಹದಿನೈದು ಕಿಲೋಮೀಟರ್ ದೂರದಲ್ಲಿ ಈ ದಿವ್ಯ ದೇಶವು ನೆಲೆಸಿದೆ.ಇಲ್ಲಿ ಸರೋವರ,ಅಡವಿ, ನಗರ ಆಲಯ, ತೀರ್ಥ ಎನ್ನುವಂತಹಾ ಐದು ಅಂಶಗಳೊಂದಿಗೆ ದೊಡ್ಡ ಪ್ರಾಕಾರಗಳೊಂದಿಗೆ ಐದು ಅಂತಸ್ತುಗಳನ್ನು ಒಳಗೊಂಡಿರುವ ರಾಜಗೋಪುರದೊಂದಿಗೆ ಪ್ರಕೃತಿ ರಮಣೀಯತೆಯೊಂದಿಗೆ ಈ ತಿರುಕ್ಕಣ್ಣಂಗುಡಿ ರಾರಾಜಿ ಸುತ್ತಿದೆ.

ಈ ಸ್ಥಳ ಮಹಾತ್ಮೆಯನ್ನು ಗರುಡಪುರಾಣದಲ್ಲಿ ಆರನೆಯ ಅಧ್ಯಾಯದಲ್ಲಿ ಮತ್ತು ನಾರದಪುರಾಣದಲ್ಲಿಯೂ ವಿಶೇಷವಾಗಿ ಹೇಳಲ್ಪಟ್ಟಿದೆ. ಕೃಷ್ಣಾರಣ್ಯ ಕ್ಷೇತ್ರ ಎನ್ನುವ ಐದು ಕ್ಷೇತ್ರಗಳಲ್ಲಿ ಈ ಕ್ಷೇತ್ರವೂ ಒಂದು. ಅಂದರೆ ತಿರುಕ್ಕಣ್ಣಪುರ,ತಿರುಕ್ಕಣ್ಣಮಂಗೈ,ಕಪಿಸ್ಥಳ.ತಿರು ಕ್ಕೋವಲೂರ್ ಎಂಬ ಐದು ಕ್ಷೇತ್ರಗಳಲ್ಲಿ ಈ ತಿರುಕ್ಕಣ್ಣಂಗುಡಿಯೂ ಇದೆ. ಮೂಲಮೂರ್ತಿ ಲೋಕನಾಥ ಸ್ವಾಮಿ, ಹಾಗೇ ಶ್ಯಾಮಲಮೇನಿ ಪೆರುಮಾಳ್ ಪೂರ್ವ ಮುಖದಲ್ಲಿ ನಿಂತಿರುವ ಭಂಗಿಯಲ್ಲಿ ದರ್ಶನ ಭಾಗ್ಯವ ನ್ನುಂಟು ಮಾಡುತ್ತಿದ್ದಾರೆ. ದಾಮೋದರ ನಾರಾಯ ಣನ್ ಎಂಬ ಹೆಸರಿನೊಂದಿಗೆ ಉತ್ಸವಮೂರ್ತಿ ಎಡಗೈಯನ್ನು ಸೊಂಟದ ಮೇಲೆ ಇರಿಸಿಕೊಂಡು ದಿವ್ಯ ಸ್ವರೂಪದಿಂದ




ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಲೋಕನಾಯಕಿ ಎಂಬ ದಿವ್ಯನಾಮದೊಂದಿಗೆ ಅಮ್ಮನವರು ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದಾರೆ. ಉತ್ಸವ ಮೂರ್ತಿ ಅರವಿಂದವಲ್ಲಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಾರೆ. ಇಲ್ಲಿ ಒಂದು ವಿಶೇಷವೇ ನೆಂದರೆ ಮೂಲ ಮೂರ್ತಿಯಾದ ಅಮ್ಮನವರು ಉತ್ಸವಮೂರ್ತಿ ಅಮ್ಮನವರು ಒಂದೇ ರೀತಿಯಲ್ಲಿ ಇರುವುದು ಆಶ್ಚರ್ಯವನ್ನು, ಅದ್ಭುತವನ್ನುಂಟು ಮಾಡುತ್ತದೆ.

ಅದೇ ರೀತಿ ಶ್ರೀದೇವಿಭೂದೇವಿಯೊಂದಿಗೆ ಲೋಕನಾಥ ಸ್ವಾಮಿಯು ಗರುಡನೊಂದಿಗೆ ಶ್ರೀವೈಕುಂಠದಲ್ಲಿ ನೆಲೆಸಿರುವಂತೆ ಮತ್ತೆಲ್ಲೂ ಕಾಣದಂತಹಾ ಅದ್ಭುತವಾದ ಭಂಗಿಯಲ್ಲಿ ನೆಲೆಸಿದ್ದಾನೆ. ಇಲ್ಲಿ ಇರುವಂತಹಾ ಪುಣ್ಯತೀರ್ಥ ಶ್ರವಣಪುಷ್ಕರಿಣಿ, ಉತ್ಪಲವಿಮಾನ, ಪೂರ್ವಮುಖದಲ್ಲಿ ನೆಲೆಸಿರುವ ಸ್ಥಳದ ವೃಕ್ಷ ಬಕುಳವೃಕ್ಷ, ಗೌತಮ ಮಹರ್ಷಿ, ಭೃಗುಮುನಿಗಳಿಗೆ ಇಲ್ಲಿ ಪ್ರತ್ಯಕ್ಷನಾದನೆಂದು ಪುರಾಣಗಳಿಂದ ತಿಳಿದು ಬರುತ್ತಿದೆ.

ಈ ದಿವ್ಯದೇಶಕ್ಕೆ ಅದ್ಭುತವಾದ ಸ್ಥಳ ಪುರಾಣವಿದೆ. ಇಕ್ಷ್ವಾಕುವಂಶಿಯರಿಗೆ ಕುಲ ಗುರುಗಳಾದ ವಸಿಷ್ಠರು ಈ ಪ್ರದೇಶದಲ್ಲಿ ಕಠಿಣವಾದ ತಪಸ್ಸನ್ನು ಆಚರಿಸುತ್ತಾ ಬೆಣ್ಣೆಯೊಂದಿಗೆ ಶ್ರೀಕೃಷ್ಣಮೂರ್ತಿಯನ್ನು ತಯಾರಿಸಿ ಆ ದಿವ್ಯ ಮಂಗಳ ವಿಗ್ರಹವನ್ನು ಪೂಜಿಸುತ್ತಿದ್ದರು. ಒಂದು ಸಂದರ್ಭದಲ್ಲಿ ವಸಿಷ್ಠರು ಧ್ಯಾನದಲ್ಲಿ ನಿರತರಾಗಿದ್ದಾಗ ಒಬ್ಬ ಬಾಲಕನು ಒಂದು ಆ ಬೆಣ್ಣೆ

ಯಿಂದ ಮಾಡಿದ ವಿಗ್ರಹವನ್ನು ತಿನ್ನುತ್ತಿದ್ದ, ಕಣ್ಣುಗಳನ್ನು ತೆರೆದು ನೋಡಿದ ವಸಿಷ್ಠರು ''ಅಯ್ಯೋ ನಮ್ಮ ದಿವ್ಯಮಂಗಳ ವಿಗ್ರಹವು ಕರಗಿ ಹೋಗುತ್ತಿದೆಯಲ್ಲಾ ಸ್ವಾಮಿ!'' ಎಂದು ಮೇಲೆದ್ದು ಆ ಬಾಲಕನ ಹಿಂದೆ ಓಡಲಾರಂಭಿಸಿದರು. ಆ ಬಾಲಕ ಭಯಗೊಂಡವನಂತೆ ವೇಗದಿಂದ ಓಡುತ್ತಿದ್ದ ಬಕುಳ ವೃಕ್ಷದ ಸಮೀಪದಲ್ಲಿ ತಪಸ್ಸು ಮಾಡುತ್ತಿದ್ದ ಅನೇಕ ಋಷಿಗಳು ಆ ಬಾಲಕನನ್ನು ಹಿಡಿದು ವಸಿಷ್ಠ ಮಹರ್ಷಿಯ ಬಳಿಗೆ ಕರೆತಂದರು, ನಂತರ, ಅಯ್ಯೋ ! ಸಾಕ್ಷಾತ್ತು ಶ್ರೀ ಕೃಷ್ಣ ಭಗವಾನನೇ ಈ ಬಾಲಕ! ಎಂದು ತಿಳಿದಂತಹಾ ವಸಿಷ್ಠಾದಿ ಮಹರ್ಷಿಗಳು ಸ್ವಾಮಿಯನ್ನು ಇಲ್ಲೇ ನೆಲೆಸಿ ಭಕ್ತರನ್ನು ಅನುಗ್ರಹಿಸ ಬೇಕೆಂದು ಪ್ರಾರ್ಥಿಸಿದಾಗ ಸ್ವಾಮಿಯು ಅವರ ಕೋರಿಕೆಯ ಮೇರೆಗೆ ಈ ಕ್ಷೇತ್ರದಲ್ಲೇ ನೆಲೆಗೊಂಡ, ಆದ್ದರಿಂದ ಈ ಕ್ಷೇತ್ರಕ್ಕೆ ತಿರುಕ್ಕಣ್ಣಂಗುಡಿ ಎಂಬ ಹೆಸರು ಬಂತು.

ಮತ್ತೊಂದು ವಿಶೇಷವೇನೆಂದರೆ ಅಲ್ಲಿ ಎಲೆಗಳು ಮುದುಡಿ ಕೊಳ್ಳದಂತಹಾ ಹುಣಿಸೇ ಮರವಿದೆ. ಅದಕ್ಕೆ ಉರಂಗಾಪ್ಪುಳಿ ಎಂದು ಹೆಸರು. ಇಲ್ಲಿ ಹೂಗಳು ಬಿಟ್ಟರೂ ಕಾಯಿಗಳು ಬರದೇ ಇರುವಂತಹಾ ಬಕುಳ ವೃಕ್ಷವೂ ಇದೆ. ಈ ರೀತಿ ಮತ್ತೆಲ್ಲೂ ನೋಡಲಾಗುವುದಿಲ್ಲ. ತಿರು ಮಂಗೈ ಆಳ್ವಾರರು ರಂಗನಾಥನ ಆಲಯದ ನಿರ್ಮಾಣದಲ್ಲಿ ಮುಳುಗಿ ರುವಂತಹಾ ಸಮಯದಲ್ಲಿ ಕೈಯಲ್ಲಿ ಒಂದು ಕಾಸೂ ಇಲ್ಲವಾಯಿತು. ಕಳ್ಳತನ ಮಾಡುವಂತಾಹಾ ಪರಿಸ್ಥಿತಿ ಏರ್ಪಟ್ಟಿತು. ಆದ್ದರಿಂದ ನಾಗ ಪಟ್ಟಣದಲ್ಲಿ ಬೆಲೆ ಬಾಳುವಂತಹಾ ಬಂಗಾರದ ಬುದ್ಧನ ವಿಗ್ರಹವಿದೆ ಯೆಂದು ತಿಳಿದು, ಆಳ್ವಾರರು ಕೂಡಲೇ ಅಲ್ಲಿದ್ದ ಬುದ್ಧನ ವಿಗ್ರಹವನ್ನು ಕಳ್ಳತನ ಮಾಡಿ ಆ ಕ್ಷೇತ್ರದ ಹೊಲದಲ್ಲಿ ಬಚ್ಚಿಟ್ಟು ಆಯಾಸದಿಂದ ನಿದ್ರಿ ಸುವ ಮೊದಲು ಅಲ್ಲಿದ್ದ ಹುಣಿಸೇ ಮರದೊಂದಿಗೆ ನಾನು ನಿದ್ರಿಸಿದ್ದರೂ ನೀನು ನಿದ್ರಿಸದೇ ಈ ಬುದ್ದವಿಗ್ರಹವನ್ನು ಕಾಪಾಡು ಎಂದು ಪ್ರಾರ್ಥಿಸಿ ದಾಗ, ಆ ಹುಣೀಸೇಮರವು ಹಾಗೇ ಆಗಲಿ ಎಂದು ಹೇಳಿ, ವಿಗ್ರಹವನ್ನು ಕಾಪಾಡಿತು. ಆದ್ದರಿಂದ ಈಗಲೂ ಆ ಹುಣಿಸೆಮರದ ಎಲೆಗಳು ಮುದು ಡಿಕೊಂಡಿರುವುದಿಲ್ಲವೆಂದು ಆ ಮರವು ಪ್ರಸಿದ್ಧಿಯಾಗಿದೆ. ನಂತರ ಆಳ್ವಾರರು ಆ ಬುದ್ಧವಿಗ್ರಹವನ್ನು ಇರಿಸಿದ್ದ ಹೊಲದ ಯಜಮಾನನು ಬಂದು ಈ ಆಳ್ವಾರರನ್ನು ನೋಡಿ, ನೀನು ಯಾರು? ಎಂದು ಕೇಳಿದಾಗ ಅವರು ನಾನು ಈ ಕ್ಷೇತ್ರಕ್ಕೆ ಅಧಿಪತಿ ಎಂದು ಹೇಳಿದಾಗ ಆತ ಅದು ಹೇಗೆ ಸಾಧ್ಯ? ನಾನು ಈ ಹೊಲದ ಯಜಮಾನ ನೀನು ಹೇಗೆ ಆಗುತ್ತೀ? ಎಂದು ಗಲಾಟೆ ಮಾಡಿದಾಗ ಎಂತಹಾ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ಊರಿನವರನ್ನೆಲ್ಲಾ ಕರೆದು ಒಂದು ಸಭೆಯನ್ನು ಏರ್ಪಡಿಸಿ, ಈ ಹೊಲಕ್ಕೆ ನಾನೇ ಯಜಮಾನ, ಎನ್ನುತ್ತಾ ಆ ಯಜಮಾನ ತನ್ನ ಹೊಲದ ಪತ್ರವನ್ನು ತೋರಿಸಿದಾಗ, ಅದರಲ್ಲಿ ಇದ್ದ ತಿರುಮಂಗೈ ಆಳ್ವಾರ ರನ್ನು ಪತ್ರವನ್ನು ತೋರಿಸಬೇಕೆಂದು ಹೇಳಿದಾಗ, ಅವರು ಶ್ರೀರಂಗದಲ್ಲಿದೆ. ನಾನು ಅದನ್ನು ತಂದು ತೋರಿಸುತ್ತೇನೆಂದು ಹೇಳಿದಾಗ, ಅವರೆಲ್ಲರೂ ಅವರಿಗೆ ಒಂದು ಅವಕಾಶವನ್ನು ನೀಡ ಬೇಕೆಂದು ಹೇಳಿದಾಗ, ಆ ಹೊಲದ ಯಜಮಾನ ಅದಕ್ಕೆ ಒಪ್ಪಿದ. ಇಲ್ಲಿಯವರೆಗೂ ಆ ಸ್ಥಳದ ಯಜಮಾನ ನೊಂದಿಗೆ ಉಂಟಾದ ವಿವಾದವು ಮುಗಿದಿಲ್ಲ. ಆದ್ದರಿಂದ ಅದು ಮುಗಿಯದ ವಿವಾದವಾದ್ದರಿಂದ ತಿರುಕ್ಕಣ್ಣಂಗುಡಿ ಎಂಬ ಹೆಸರಿ ನಿಂದ ಪ್ರಸಿದ್ಧಿಯಾಗಿದೆ.

ಹಾಗೇ ಊರಾಕಿಣರು ಅಂದರೆ ಊರದ ಬಾವಿ ಎಂದರ್ಥ. ಇದಕ್ಕೆ ಒಂದು ಕಥೆ ಇದೆ. ಆಳ್ವಾರರು ತಾವು ವಾದ ಮಾಡಿದ ನಂತರ . ಈ ಒಂದು ದಿನ ನಾನು ಇಲ್ಲಿ ಇರುವುದಕ್ಕೆ ಅನುಮತಿಯನ್ನು ನೀಡಿ ಎಂದು ಪ್ರಾರ್ಥಿಸಿ ದಾಗ, ಅವರು ಒಪ್ಪಿದರು. ಅಲ್ಲಿಯವರೆಗೂ ಆಳ್ವಾರರು ಅವರೊಂದಿಗೆ ಹೋರಾಡಿದ ಸಂದರ್ಭದಲ್ಲಿ ಬಹಳ ಬಾಯಾರಿಕೆಯಾಯಿತು. ಅದೇ ಸಮಯದಲ್ಲಿ ಅಲ್ಲಿದ್ದ ಸ್ತ್ರೀಯರು ಪಕ್ಕದಲ್ಲಿರುವಂತಹಾ ಬಾವಿಯಿಂದ ನೀರನ್ನು ತೋಡುತ್ತಿರುವಾಗ ನನಗೆ ಬಹಳ ಬಾಯಾರಿಕೆಯಾಗಿದೆ, ಬಾಯೆಲ್ಲಾ ಒಣಗಿಹೋಗಿದೆ, ದಯವಿಟ್ಟು ನನಗೆ ನೀರು ಕೊಡಿ ಎಂದು ಕೇಳಿದರು. ಆದರೆ ಆ ಸ್ತ್ರೀಯರು ನಮ್ಮ ಊರಿನವರೊಂದಿಗೆ ನೀನು ಜಗಳ ವಾಡುತ್ತಿರುವೆ ಆದ್ದರಿಂದ ನಾವು ನಿನಗೆ ನೀರನ್ನು ಕೊಡುವುದಿಲ್ಲ ಎಂದು ಗದರಿಸಿದರು. ಆಗ ಆಳ್ವಾರರಿಗೆ ಕೋಪ ಬಂದು ಇನ್ನು ಈ ಬಾವಿಯಲ್ಲಿ ನೀರು ಊರದೇ ಇರಲಿ ಎಂದು ಶಾಪವನ್ನು ನೀಡಿದರಂತೆ. ಅಂದಿನಿಂದ ಇಂದಿನವರೆಗೂ ಆ ಬಾವಿ ಬರಡಾಗಿದೆ. ಹಾಗೇ ಅಲ್ಲಿದ್ದ ಬಕುಳ ವೃಕ್ಷವು ಸಾಕ್ಷಾತು ಸ್ವಾಮಿಯನ್ನು ನೆನಪಿಸುತ್ತದೆ. ಇಂದಿಗೂ ಆ ಮರವು ಎಳೆಯ ದಾಗಿದೆ. ಈ ಪ್ರಕಾರ ಅದ್ಭುತವಾಗಿರುವಂತಹಾ ಈ ಕ್ಷೇತ್ರಶ್ಯಾಮಲಮೇನಿ ಪೆರುಮಾಳ್ ಮತ್ತು ಅರವಿಂದವಲ್ಲಿ ದೇವಿಯರೊಂದಿಗೆ ಭಕ್ತರನ್ನು ಅನು ಗ್ರಹಿಸುತ್ತಿದೆ.

ತಿರುಮಂಗೈಳ್ವಾರರು ಈ ಸ್ವಾಮಿಗೆ ಮಂಗಳಾಶಾಸನವನ್ನು ರಚಿಸಿ ದ್ದಾರೆ. ವೈಖಾನಸ ಆಗಮ ಶಾಸ್ತ್ರದ ಪ್ರಕಾರ ದೇವದೇವನು ಇಲ್ಲಿ ಆರಾಧನೆ ಯನ್ನು ಪಡೆಯುತ್ತಿದ್ದಾನೆ. ಈ ಕ್ಷೇತ್ರಕ್ಕೆ ಬಂದು ಯಾರಾದರೂ ಸ್ವಾಮಿ ಯನ್ನು ಸೇವಿಸುತ್ತಾರೋ ಅಂತಹವರಿಗೆ ಸಕಲ ಸೌಭಾಗ್ಯಗಳೂ ದೊರೆಯು ತ್ತದೆ ಎಂಬ ಪ್ರತೀತಿ ಇದೆ. ಆದ್ದರಿಂದ ನಾವೂ ಈ ದೇವದೇವನನ್ನು ಸ್ಮರಿಸಿ ಆತನನ್ನು ದರ್ಶಿಸಿ ಪೂಜಿಸಿ ಧನ್ಯರಾಗೋಣ.

ತಿರುಮಲ ತಿರುಪತಿ ದೇವಸ್ಥಾನಗಳು



# ಶ್ರೀ ಬಾಲಾಜಿ ದಿವ್ಯಾಂಗರ ಶಸ್ತ್ರಚಿಕಿತ್ಸೆ, ಪರಿಶೋಧನೆ ಮತ್ತು ಪುನರಾವಾಸ ಕೇಂದ್ರ

# (ಬರ್ಡ್)







ಪೋಲಿಯೋ ಮೆಲ್ಲಿಟಸ್,ಸೆರೆಬ್ರಲ್ ಪಾಲ್ಸಿ, ಜನ್ಮತಃ ಅಸ್ವಸ್ಥತೆ ಗಳು, ಬೆನ್ನು ಮೂಳೆಯ ಗಾಯಗಳು ಮತ್ತು ಮೂಳೆಗಳು, ಕೀಲು ನೋವಿನಿಂದ ಬಳಲುತ್ತಿರುವವರು ಮತ್ತು ಅಂಗವೈಕಲ್ಯ ರೋಗಿಗಳಿಗೆ ಸಂಪೂರ್ಣ ಉಚಿತ ಸೇವೆಗಳನ್ನು ಒದಗಿಸಲು ಅತ್ಯಾಧುನಿಕ ವೈದ್ಯಕೀಯ ಉಪಕರಣಗಳೊಂದಿಗೆ ಬರ್ಡ್ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಈ ವೈದ್ಯ ಕೇಂದ್ರಕ್ಕೆ ಮಾನವೀಯ ದೃಷ್ಟಿಕೋನದಿಂದ ಈ ವೈದ್ಯಕೀಯ ಸಂಸ್ಥೆಗೆ ಸಹಾಯ ಮಾಡಲು ನಿಮ್ಮ ಕೈಲಾದಷ್ಟು ಸಹಾಯದ ರೂಪದಲ್ಲಿ "ಮಾನವ ಸೇವೆ ಮಾಧವಸೇವೆ"

ಆರ್ಟಿಕಲ್ 80 (ಜಿ) ಅಡಿಯಲ್ಲಿ ಆದಾಯ ತೆರಿಗೆ ವಿನಾಯಿತಿ ನೀಡಲಾಗಿದೆ.

**ನಿಮ್ಮ ವಿವರಗಳನ್ನು:** ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ಹೆಸರಿನಲ್ಲಿ ಡಿಮಾಂಡ್ ಡ್ರಾಫ್ಟ್/ ಚೆಕ್ಕುಗಳನ್ನು ಕಳುಹಿಸಬಹುದು.

**ವಿಳಾಸ:** ಉಪಕಾರ್ಯನಿರ್ವಹಣಾಧಿಕಾರಿ (ದಾನಿಗಳ ಇಲಾಖೆ),
ಕೇಂದ್ರೀಕೃತ ದಾನಿ ನಿರ್ವಹಣಾ ಶಾಖೆ,ಆದಿಶೇಷು ವಿಶ್ರಾಂತಿ ಗೃಹ,
ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ,
ಕ್ಯಾಂಪ್ ಆಫೀಸ್ ಪಕ್ಕದಲ್ಲಿ ತಿರುಮಲೆ,
ದೂರವಾಣಿ ಸಂಖ್ಯೆ 0877- 2263472

ಅಥವಾ

ನಿರ್ದೇಶಕರು, ಬರ್ಡ್‌ಟ್ರಸ್ಟ್, ತಿರುಮಲೆ ತಿರುಪತಿ ದೇವಸ್ಥಾನಗಳು,
ತಿರುಪತಿ - 517 501
ದೂರವಾಣಿ ಸಂಖ್ಯೆ: 0877 - 2264025
ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 0877 -2264619

website: www.tirumala.org.
e-mail :- officebirrd@gmail.com
MOBILE APP: BIRRD HOSPITAL



## ಡಿಸೆಂಬರ್ ತಿಂಗಳ

# ರಾಶಿ ಫಲಗಳು




ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್


**ಮೇಷ**

ನಿಮ್ಮ ದೃಢ ಸಂಕಲ್ಪ ವೃದ್ಧಿಗೊಂಡು ನಿಮ್ಮನ್ನು ಗುರಿಗೆ ಹತ್ತಿರ ಕೊಂಡೊಯ್ಯಲಿದೆ. ನಿಮ್ಮ ವಿಜಯಕ್ಕೆ ನಿಮ್ಮ ಸಹೋದರರು ಬಹಳಾ ಸಹಕರಿಸುತ್ತಾರೆ. ಆರೋಗ್ಯ ಸಂತೃಪ್ತಿಕರವಾಗಿರುತ್ತದೆ.ನಿಮ್ಮ ಆದಾಯಗಳು ಅನೂಹ್ಯ ರೀತಿಯಲ್ಲಿ ಹೆಚ್ಚಳವಾಗುತ್ತದೆ.ನಿರಪರಾಧವಾಗಿ ಕಲಹಗಳು, ಋಣಗಳಿಂದ ವ್ಯಥೆ ತಪ್ಪಲಾರದು.

**ವೃಷಭ**

ಮಾತೃ ಕಳತ್ರ ಸಂಬಂಧಗಳಲ್ಲಿ ಕಲಹ, ಉದರ, ಜನನಾಂಗ ಸಂಬಂಧಿ ಅನಾರೋಗ್ಯ ಸೂಚನೆಗಳು, ಉದ್ಯೋಗದಲ್ಲಿ ಕ್ರೋಧಾವೇಶದಿಂದ ಮೇಲಿನ ಅಧಿಕಾರಿಗಳೊಂದಿಗೆ, ಸಹೋದ್ಯೋಗಿಗಳೊಂದಿಗೆ ತೊಂದರೆಗಳು ಒದಗಿ ಬರುತ್ತದೆ.ಈ ಮಾಸದಲ್ಲಿ ರವಿ-ಕುಜಗ್ರಹ ಸಂಚಾರ ಅನುಕೂಲಕರವಾಗಿಲ್ಲ. ದೋಷ ನಿವಾರಣೆಗಾಗಿ ಸುಬ್ರಮಣ್ಯ ಸೂರ್ಯಾರಾಧನೆ ಒಳ್ಳೆಯದು.

**ಮಿಥುನ**

ಸಂತೋಷ, ಸಂತೃಪ್ತಿ, ಸಂಪದ ಲಾಭಗಳುಂಟಾಗುತ್ತವೆ. ನೀವು ಸ್ನೇಹಿತರು ಹಾಗೂ ಬಂಧುಗಳಿಂದ ಗೌರವ ಹಾಗೂ ಗುರುತಿಸಲ್ಪಡುವಿರಿ. ಕನಸ್ಸು ಸಹ ಖಂಡಿತವಾಗಿಯೂ ಸಂಪೂರ್ಣವಾಗುತ್ತದೆ.ಜೀವನ ಸಂಗಾತಿಯೊಂದಿಗೆ ಕೆಲವು ವಿವಾದಗಳು ಉಳಿದಿರುತ್ತವೆ ಆದರೆ ನೀವು ತಿಳುವಳಿಕೆಯಿಂದ ಈ ತೊಂದರೆಯನ್ನು ಪರಿಹರಿಸುತ್ತೀರ.

**ಕರ್ಕಾಟಕ**

ಗ್ರಹಸ್ಥಿತಿ ಅನುಕೂಲಕರವಾಗಿವೆ. ಸ್ನೇಹಿತರಿಂದ ಲಾಭ ವ್ಯಾಪಾರ ವೃದ್ಧಿ ಶತ್ರುಗಳ ಮೇಲೆ ಜಯ, ಧೈರ್ಯ ಹಾಗೂ ಅದೃಷ್ಟ ಬೆಳವಣಿಗೆ ಶುಭ ವಾರ್ತೆಗಳು ಕೂಡಿಬರುತ್ತದೆ. ನಾಯಕತ್ವಗಳಿಂದ ಸಹಾಯವಾಗಲಿದೆ. ನಿಮ್ಮ ಒಡಹುಟ್ಟಿದವರು ನಿಮ್ಮೊಂದಿಗೆ ಒಳ್ಳೆಯ ಸಮಯವನ್ನು ಕಳೆಯಲು ಇಷ್ಟ ಪಡುತ್ತಾರೆ.

**ಸಿಂಹ**

ನೀವು ಹೊಸ ಬಟ್ಟೆ ಹಾಗೂ ಉಪಕರಣಗಳನ್ನು ಖರೀದಿ ಮಾಡುವಿರಿ. ಈ ಸಮಯದಲ್ಲಿ ನೀವು ರತ್ನಗಳು ಹಾಗೂ ಆಭರಣಗಳನ್ನು ಕೊಳ್ಳಲು ನಿಮ್ಮ ಹಣವನ್ನು ವ್ಯಯಿಸುವ ಅವಕಾಶವಿದೆ. ಪ್ರಯಾಣ ಸಮಯದಲ್ಲಿ ಪ್ರೇಮ ವ್ಯವಹಾರಗಳು ವರ್ಧನೆಯಲ್ಲಿರುತ್ತವೆ. ಆರ್ಥಿಕವೃದ್ಧಿ , ನೂತನ ನಿರ್ಮಾಣ ಮಾಡಲು ಅಥವಾ ಖರೀದಿಸಲು ಮುನ್ನಡೆಯುವಿರಿ.

**ಕನ್ಯ**

ಈ ಮಾಸ ಆದಾಯ ವೃದ್ಧಿಗೆ ಹೊಸ ಅವಕಾಶಗಳನ್ನು ತರುತ್ತವೆ. ವಿದ್ಯೆಯ ವಿಷಯಗಳಲ್ಲಿ ವಿರಾಜಿಸುವಿರಿ. ನೀವು ಹೊಸ ವಿಷಯಗಳನ್ನು ಅಧ್ಯಯನ ಮಾಡುವಿರಿ ಮತ್ತು ಹೊಸ ನೈಪುಣ್ಯಗಳನ್ನು ಕಲಿತುಕೊಳ್ಳುವಿರಿ ಸ್ಪರ್ಧೆ ಪರೀಕ್ಷೆಗಳಲ್ಲಿ ಖಚಿತವಾಗಿ ವಿಜಯ ಸಾಧ್ಯವಾಗುತ್ತದೆ. ಒಳ್ಳೆಯ ಕೀರ್ತಿ ಸಹ ಬರುವ ಅವಕಾಶವಿದೆ. ನೀವು ರೀಯಲ್ ಎಸ್ಟೇಟ್‌ನಲ್ಲಿ ಹಣ ಹೂಡಿಕೆ ಮಾಡಬಹುದು.

**ತುಲಾ**

ನಿಮ್ಮ ವಾಗ್ಚಾತುರ್ಯದಿಂದ ಗೌರವ ಹೊಂದುವಿರಿ. ಉದ್ಯೋಗಗಳಲ್ಲಿ ಪ್ರಮೋಷನ್ ಅಥವಾ ಸಂಬಳ ಹೆಚ್ಚಳವಾಗುವ ಅವಕಾಶವಿದೆ. ವೃತ್ತಿಗಳಲ್ಲಿ ಪ್ರಗತಿ, ಆನಂದ, ಒಳ್ಳೆಯ ಆರೋಗ್ಯ ಮತ್ತು ಸಂಪದಗಳು ಬೆಳೆಯುವ ಕಾಲ. ಈ ಸಮಯದಲ್ಲಿ ನೀವು ನಿಮ್ಮ ಒಡಹುಟ್ಟಿದವರ ಆರೋಗ್ಯ ವಿಷಯದಲ್ಲಿ ಜಾಗರೂಕರಾರಿಬೇಕು.

**ವೃಶ್ಚಿಕ**

ಗೃಹದಲ್ಲಿ ಮಂಗಳಕಾರ್ಯ ಶೋಭೆ, ಮಂಗಳ ತೋರಣಗಳು, ಇದು ನಿಮ್ಮ ಆದಾಯಕ್ಕೆ ಸೂಕ್ತವಾಗಿದೆ. ಈ ಸಮಯದಲ್ಲಿ ನೀವು ನಿಮ್ಮ ಸಹೋದ್ಯೋಗಿ ಹಾಗೂ ಸ್ನೇಹಿತರಿಂದ ಬಹಳ ಪ್ರಶಂಸೆಗಳನ್ನು ಪಡೆಯುವಿರಿ. ನಿಮ್ಮ ಅಭ್ಯಾಸ - ಗುರಿಗಳು ಸಹಾ ನೆರವೇರುತ್ತವೆ. ನೀವು ಸ್ಫೂರ್ತಿ ದಾಯಕವಾದ ವ್ಯಕ್ತಿಗಳ ಸಂಗದಲ್ಲಿರುವಿರಿ ಹಾಗೂ ಲಾಭದಾಯಕವಾಗಿರಲಿದೆ.

**ಧನಸ್ಸು**

ಸಂಸ್ಥಾಗತವಾದ ಖರ್ಚುಗಳನ್ನು ಕಡಿಮೆ ಮಾಡುವ ಪ್ರಯತ್ನ ಮಾಡುವಿರಿ ಕ್ರಮ ಶಿಕ್ಷಣಗಳನ್ನು ಧೈರ್ಯದಿಂದ ನೆರವೇರಿಸಿ ವಿಜಯವನ್ನು ಸಾಧಿಸುವಿರಿ. ಸಂಗಾತಿಯ ವ್ಯವಹಾರಗಳಲ್ಲಿ ಒಂದು ಕಣ್ಣಿಡುತ್ತಾ ದ್ವೇಷ,ಕ್ರೋಧ, ಹಾನಿಗಳಿಂದ ವ್ಯವಸ್ಥೆಗಳನ್ನು ನಿಯಂತ್ರಣದಲ್ಲಿ ತಂದುಕೊಳ್ಳುವಿರಿ. ಗೃಹ ವಾತಾವರಣದಲ್ಲಿ ಸೋದರರಿಂದ ಸಮಸ್ಯೆಗಳು ಬರುತ್ತವೆ.

**ಮಕರ**

ಸಮಸ್ತ ದೋಷಗಳು ತೊಲಗಿ ಸಮಸ್ತ ಐಶ್ವರ್ಯಗಳು ಕೈಗೂಡುತ್ತವೆ. ಹೆಚ್ಚಿನ ಶ್ರಮವಿಲ್ಲದೇ ವ್ಯವಹಾರಗಳು ಮುಂದುವರಿಯುತ್ತದೆ. ಕುಟುಂಬ ವಾತಾವರಣ ಪ್ರೋತ್ಸಾಹಕರವಾಗಿದೆ.ಮನೆಯಲ್ಲಿ ಸಂಭ್ರಮಗಳಿಂದ ಬಂಧುಗಳು ವಾಲಗ ಮಾಡುತ್ತಾರೆ. ಹಿಂದಿನ ಸಮಸ್ಯೆ ಗಳು ಮತ್ತೆ ತಲೆದೋರಲಿದೆ.ಗೃಹ ಖರೀದಿ ಮಾಡುವಿರಿ. ವಿದ್ಯಾರ್ಥಿಗಳು ಓದಿನಲ್ಲಿ ಮುಂದಿರುವಿರಿ.

**ಕುಂಭ**

ನಿಮ್ಮ ಅಧಿಕಾರ ವಿಸ್ತರಿಸಲಿದೆ. ಅಧಿಕಾರೀ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ.ಪ್ರಜಾ ಸಂಬಂಧಗಳು ಬೆಸೆದುಕೊಳ್ಳಲು ನೀವು ಮಾಡುವ ಪ್ರಯತ್ನ ಫಲಿಸುತ್ತದೆ. ಅಧಿಕಾರದಲ್ಲಿರುವ ವ್ಯಕ್ತಿಗಳ ಪ್ರಭಾವ ನಿಮ್ಮ ಮೇಲಿರುತ್ತದೆ. ಭೋಗ - ಭಾಗ್ಯಗಳನ್ನು ಭವಿಸುವಿರಿ. ದೈವಬಲಂ ಬೆಳೆಯುತ್ತದೆ.ಪರಿಶೋಧನೆಯ ರಂಗದಲ್ಲಿ ಸಂಬಂಧಿಸಿದ ನೂತನ ಕಾರ್ಯಗಳನ್ನು ಕಂಡುಕೊಳ್ಳುವಿರಿ.

**ಮೀನ**

ನಿಮ್ಮ ಅಧಿಕಾರ ವಿಸ್ತಾರಗೊಳ್ಳಲಿದೆ. ಪ್ರಜಾ ಸಂಘಟನೆಗಾಗಿ ನೀವು ನಡೆಸುವ ಪ್ರಯತ್ನ ಫಲಿಸಲಿದೆ. ಅಧಿಕಾರದಲ್ಲಿರುವ ವ್ಯಕ್ತಿಗಳ ಪ್ರಭಾವ ನಿಮ್ಮ ಮೇಲಿರುತ್ತದೆ. ಭೋಗ ಭಾಗ್ಯಗಳನ್ನುನಭವಿಸುವಿರಿ. ಮಕ್ಕಳು ವಿಜಯ ಸಾಧಿಸುವರು ಮಾನಸಿಕ ಪ್ರಶಾಂತತೆ ಉಂಟಾಗುತ್ತದೆ. ಶುಭವಾರ್ತೆಗಳು ಬರಲಿವೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

- ಡಾ. ಅನಸೂಯ ಎಸ್.ರಾಜೀವ್

**1.ಮಾರ್ಗಶಿರ ಮಾಸದ ವಿಶೇಷತೆ ಏನು?**

**ಉತ್ತರ:** ಮಾಸಾನಾಮ್ ಮಾರ್ಗಶೀರ್ಷೋಹಮ್ ಎಂದು ಗೀತೆಯಲ್ಲಿ ಕೃಷ್ಣ ಹೇಳಿರುತ್ತಾನೆ. ಹನ್ನೆರಡು ಮಾಸಗಳಲ್ಲಿ ಭಗವಂತನಿಗೆ ಪ್ರಿಯವಾದ ಮಾಸ ಮಾರ್ಗಶಿರ ಮಾಸ ಎಂದು ಕರೆಯಲಾಗುತ್ತದೆ. ಮಾರ್ಗಶಿರ ಮಾಸದ ದೇವತೆ ಕೇಶವ. ಹೀಗಾಗಿ ಈ ಮಾಸದಲ್ಲಿ ವಿಷ್ಣುದೇಗುಲಗಳಿಗೆ ಭೇಟಿ, ವಿಷ್ಣುಸಹಸ್ರನಾಮ ಪಠಣ ಅತ್ಯಂತ ಪುಣ್ಯಪ್ರದ ಗೋಪಿಕೆಯರು ಶ್ರೀ ಕೃಷ್ಣನ ತಂದೆಯಾದ ನಂದಗೋಪನ ಜೊತೆ ಮಾರ್ಗಶಿರ ಮಾಸದ ಬ್ರಾಹ್ಮೀ ಮುಹೂರ್ತದಲ್ಲಿ ಭಗವಂತನ ಆರಾಧನೆ ಮಾಡಿದ್ದರಂತೆ ಇದರಿಂದ ಭಗವಂತನ ವಿಶೇಷ ಅನುಗ್ರಹಕ್ಕೆ ಪಾತ್ರರಾಗಿದ್ದರು ಎನ್ನ ಲಾಗಿದೆ. ಪ್ರಾಚೀನ ಕಾಲದಲ್ಲಿ ಹೊಸವರ್ಷದ ಆರಂಭವನ್ನು ಮಾರ್ಗಶಿರ ಮಾಸದಿಂದಲೇ ಆರಂಭವೆಂದು ಪರಿಗಣಿಸಲಾಗಿತ್ತು. ಮಾರ್ಗಶಿರ ಮಾಸ ದಲ್ಲಿ ಸನಾತನ ಸಂಸ್ಕೃತಿಯ ಎರಡು ಪ್ರಮುಖ ವಿವಾಹಗಳು ನಡೆದವು. ಒಂದು ಶಿವವಿವಾಹ, ಇನ್ನೊಂದು ಶ್ರೀರಾಮ ಕಲ್ಯಾಣ. ಅಂದಿನಿಂದ ಈ ತಿಂಗಳನ್ನು ಅತ್ಯಂತ ಮಹತ್ವವೆಂದು ತಿಳಿಯಲಾಗಿದೆ. ಮಾರ್ಗಶಿರ ಮಾಸ ದಲ್ಲಿ ಅನ್ನದಾನ ಅತ್ಯಂತ ಪುಣ್ಯದಾಯಕ.

**2.ಧನುರ್ಮಾಸದ ಆಚರಣೆಯ ವೈಶಿಷ್ಟ್ಯವೇನು?**

**ಉತ್ತರ :** ಧನುರ್ಮಾಸ ಡಿಸೆಂಬರ್ 16 ರಿಂದ ಜನವರಿ 14 ರ ವರೆಗೆ ಇರುತ್ತದೆ. ಉತ್ತರಾಯಣ ಪುಣ್ಯಕಾಲದ ಆರು ತಿಂಗಳುಗಳು ದೇವತೆಗಳಿಗೆ ಹಗಲಾದರೆ ದಕ್ಷಿಣಾಯನದ ಆರು ತಿಂಗಳು ದೇವತೆಗಳಿಗೆ ರಾತ್ರಿಯಾ ಗಿರುತ್ತದೆ. ದಕ್ಷಿಣಾಯನದ ಕಡೆಯ ತಿಂಗಳೇ ಧನುರ್ಮಾಸ. ಅಂದರೆ ಅದು ದೇವತೆಗಳಿಗೆ ಹಗಲು ಪ್ರಾರಂಭವಾಗುವ ಮುಂಚಿನ ಸಮಯ ಅಂದರೆ ಬ್ರಾಹ್ಮಿ ಮುಹೂರ್ತ. ಹಾಗಾಗಿ ಧನುರ್ಮಾಸದಲ್ಲಿ ದೇವರ ಪೂಜೆಗೆ ತುಂಬಾ ಮಹತ್ವಕೊಡಲಾಗುತ್ತದೆ. ಅದರಲ್ಲೂ ವಿಶೇಷವಾಗಿ ಲಕ್ಷ್ಮೀ ನಾರಾಯಣರ ಪೂಜೆ ಮಾಡುವುದು ಶ್ರೇಯಸ್ಕರ. ಧನುರ್ಮಾಸ ಎಂದರೆ ಸೂರ್ಯನು ಧನುರಾಶಿಗೆ ಪ್ರವೇಶಿಸುವುದು. ಧನುಸ್ಸೆಂದರೆ ಬಿಲ್ಲು, ಡಿಸೆಂಬರ್ ತಿಂಗಳು ಮೈಕೊರೆವ ಚಳಿಗಾಲ. ಮನುಷ್ಯ ತನ್ನ ದೇಹ ವನ್ನು ಬಿಲ್ಲಿನಂತೆ ಬಾಗಿಸಿ ಮುದುರಿ ಮಲಗುತ್ತಾನೆ. ಆದ್ದರಿಂದಲೇ ಈ ಮಾಸ ಧನುರ್ಮಾಸವೆನ್ನಲು ಅನ್ವರ್ಥವಾಗಿರುತ್ತದೆ. ಧನುರ್ಮಾಸದಲ್ಲಿ ನಸುಕಿನಲ್ಲೇ ಎದ್ದು ತಣ್ಣೀರುಸ್ನಾನ ಮಾಡಿ ನಿತ್ಯ ಕರ್ಮಾ ನುಷ್ಠಾನಗಳನ್ನು ನಿಷ್ಠೆಯಿಂದ ನೆರವೇರಿಸಿ ವಿಶೇಷವಾಗಿ ಮಹಾಲಕ್ಷ್ಮೀ ಸಮೇತನಾದ ಮಹಾ ವಿಷ್ಣುವನ್ನು ಪೂಜಿಸಿ ಹುಗ್ಗಿಯನ್ನು ನಿವೇದಿಸಬೇಕು. ಹೀಗೆ ಮಾಡುವು ದರಿಂದ ಮಹಾಪುಣ್ಯ ಸಿಗುತ್ತದೆ.

**3.ವೈಕುಂಠ ಏಕಾದಶಿಯ ಮಹತ್ವವೇನು?**

**ಉತ್ತರ:** ಹಿಂದೆ ಗೋಕುಲವೆಂಬ ನಗರದಲ್ಲಿ ವೈಖಾನಸನೆಂಬ ರಾಜರ್ಷಿಗೆ ಒಂದು ದಿನ ಇದ್ದಕ್ಕಿದ್ದಂತೆ ತನ್ನ ತಂದೆ ಸತ್ತ ಬಳಿಕ ಪ್ರೇತತ್ವ ನಿವಾರಣೆ ಹೊಂದದೆ ನರಕವನ್ನು ಅನುಭವಿಸುತ್ತಿರುವುದಾಗಿ ಅವನ ದಿವ್ಯದೃಷ್ಟಿಗೆ ಗೋಚರವಾಯಿತು. ಖಿನ್ನನಾದ ರಾಜನು ಪಂಡಿತರನ್ನು ಕುರಿತು ತನ್ನ ತಂದೆಯ ಆತ್ಮವನ್ನು ನರಕದಿಂದ ಪಾರು ಮಾಡುವ ಬಗೆಯನ್ನು ಕೇಳಿದನು. ಆಗ ಪಂಡಿತರು ಮಾರ್ಗಶಿರ ಶುಕ್ಲ ಏಕಾದಶಿ ಆಚರಣೆಯ ಫಲವಾಗಿ ಅವನ ತಂದೆಯು ನರಕದಿಂದ ಪಾರಾಗುವನೆಂದರು. ರಾಜನು ವೈಕುಂಠಏಕಾದಶಿ ಯನ್ನು ಆಚರಿಸಿ ಸೂಕ್ತ ದಾನಾದಿಗಳನ್ನು ಮಾಡುತ್ತಿದ್ದಂತೆ ಅವನ ತಂದೆಯ ದೇಹವು ನರಕದಿಂದ ಬಿಡಲ್ಪಟ್ಟು ಮುಂದೆ ಬೇರೆ ದೇಹವು ಪ್ರಾಪ್ತವಾಗಿ ಸ್ವರ್ಗವನ್ನು ಸೇರಿದರೆಂದು ಬ್ರಹ್ಮಾಂಡ ಪುರಾಣದಲ್ಲಿ ತಿಳಿಸಿರುತ್ತಾರೆ.

**4.ಮಹಾವಿಷ್ಣುವಿನ ಕೈಯಲ್ಲಿ ಶೋಭಿತವಾಗಿರುವ ಸುದರ್ಶನ ಚಕ್ರ ಹಾಗೂ ಗದೆಯ ಮಹತ್ವವೇನು?**

**ಉತ್ತರ:** ಋಗ್ವೇದದಲ್ಲಿ ತಿಳಿಸಿರುವ ಚಕ್ರವು ಸೂರ್ಯನ ಪ್ರತೀಕವಾಗಿದೆ. ಸೂರ್ಯನೆಂದರೆ ಸಮಯದ ಸಂಕೇತ. ಕೌಶೀತಕಿ ಬ್ರಾಹ್ಮಣದಲ್ಲಿ ದೇವರ ಪ್ರಪಂಚ ಪರ್ಯಟನೆಯ ಸಮಯವನ್ನು ತಿಳಿಸುತ್ತದೆ ಎಂದು ಹಿಂದೂ ಪುರಾ ಣಗಳ ಪ್ರಕಾರ ವಿಷ್ಣುವಿನ ಕೈಯಲ್ಲಿರುವ ಚಕ್ರವು ಯುದ್ಧಮಾಡುವ ಆಯುಧ ವಾಗಿದೆ. ಈ ಸುದರ್ಶನ ಚಕ್ರದಲ್ಲಿ ಆರು ಕಡ್ಡಿಗಳಿರುತ್ತದೆ. ಚಕ್ರವು ಸೂರ್ಯ ನನ್ನು ಪ್ರತಿನಿಧಿಸಿದರೆ ಆರು ಕಡ್ಡಿಗಳು ಆರು ಋತುವನ್ನು ಪ್ರತಿ ನಿಧಿಸುತ್ತವೆ. ತೊಡಕುಗಳನ್ನು ನಿವಾರಿಸಿ ಉದ್ಧಾರದ ಹೆದ್ದಾರಿಯಲ್ಲಿ ಮುನ್ನಡೆಸ ಬಲ್ಲೆ ಎಂಬು ದರ ಸಂಕೇತ ಚಕ್ರಧಾರಿಯದ್ದಾಗಿದೆ. ಶ್ರೀ ವಿಷ್ಣುವಿನ ಗದೆಯನ್ನು ಕೌಮೋದಕಿ ಎಂದು ಕರೆಯುವರು. ವಿಶ್ವಕರ್ಮನು ವಿಷ್ಣುವಿನ ಗದೆಯನ್ನು ತಯಾರಿಸಿ ಕೊಟ್ಟನು. ಹೇಗೆಂದರೆ ಗದಾಸುರನೆಂಬ ರಾಕ್ಷಸನ ಮೂಳೆಗಳಿಂದ ತಯಾರು ಮಾಡಿಕೊಟ್ಟನು.

**5.ಲಕ್ಷ್ಮೀನಾರಾಯಣರ ಕರಗಳಲ್ಲಿ ರಾರಾಜಿಸುವ ಕಮಲದ ಸಂದೇಶವೇನು?**

**ಉತ್ತರ :** ದೇವರ ಕೈಯಲ್ಲಿ ಹಿಡಿದಿರುವ ಪದ್ಮವು ಸೂರ್ಯನ ಸಂಕೇತ. ಪದ್ಮವು ವಿಷ್ಣುವಿನ ನಾಭಿಯಿಂದ ಹೊರಟು ಬ್ರಹ್ಮನ ಆಸನವಾಗಿ ಇರುತ್ತದೆ. ಲಕ್ಷ್ಮಿಯು ಕೈಯಲ್ಲಿ ಪದ್ಮ ಆಸನವಾಗಿ ಪದ್ಮ ಮಾಲೆಯಾಗಿ ಪದ್ಮವನ್ನು ಧರಿಸು ತ್ತಾಳೆ. ಹಾಗಾಗಿ ಪದ್ಮದಿಂದ ಆವೃತವಾಗಿರುವ ಲಕ್ಷ್ಮೀಯನ್ನು ಪದ್ಮಾವತಿ ಎಂದೂ ಕರೆಯುತ್ತಾರೆ. ಲಕ್ಷ್ಮಿಯು ಕೈಯಲಿರುವ ಪದ್ಮವು ಜ್ಞಾನಾನಂದ ಭಾಗ್ಯ ವನ್ನು ಕರುಣಿಸಿ ಕಾಪಾಡಬಲ್ಲೆ ಎಂಬ ಸಂದೇಶವನ್ನು ಕೊಡುತ್ತದೆ. ಲಕ್ಷ್ಮಿಯು ಆಸೀನಳಾಗಿರುವಂತ ಕಮಲವು ಹೃದಯ ಕಮಲದಲ್ಲಿ ನೆಲೆ ನಿಂತು ವೃದ್ಧಿ ಸಮೃದ್ಧಿಗಳ ಸೂತ್ರಧಾರಳಾಗಬಲ್ಲೆ ಎಂಬ ಸಂದೇಶವನ್ನು ನೀಡುತ್ತದೆ.

# ಎಂದೆಂದಿಗೂ ಒಗ್ಗಟ್ಟಿನಲ್ಲಿ ಬಲವಿದೆ

- ಎ.ಆರ್. ರಘುರಾಮ
9916138436





ಒಗ್ಗಟ್ಟು ಶಕ್ತಿಯ ಸಂಕೇತ. ಸಾಮರ್ಥ್ಯದ ಬಿಂಬ ಬಲದ ಪ್ರತಿರೂಪ. ಹಾಗಾಗಿಯೇ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆ ಹುಟ್ಟಿ ಕೊಂಡಿತು. ಬಾಲ್ಯ, ಯೌವ್ವನ ವೃದ್ಧಾಪ್ಯ - ಹೀಗೆ ಬದುಕಿನ ಎಲ್ಲ ಹಂತದಲ್ಲೂ ನಮ್ಮ ಮನೆ, ಕುಟುಂಬ, ರಾಜ್ಯ, ದೇಶ ವಾಸಿಗಳಲ್ಲಿ ಒಗ್ಗಟ್ಟು ಇದ್ದರೆ ದುಷ್ಟ ಶಕ್ತಿಗಳು ನಮ್ಮನ್ನು ಮುಟ್ಟಲಾರವು, ತಟ್ಟಲಾರವು.

ಒಂದು ಕಾಡಿನಲ್ಲಿ ಸಿಂಹ ಮತ್ತು ಹಸು ಗೆಳೆತನದಿಂದ ಇದ್ದವು. ಇದನ್ನು ನೋಡಿ ಸಹಿಸಲಾಗದ ನರಿಯೊಂದು ಉಪಾಯ ಹೂಡಿತು.

ಹುಲ್ಲು ಮೇಯುತ್ತಿದ್ದ ಹಸುವಿನ ಹತ್ತಿರ ಬಂದು ಗೋಮಾತೆ ನೀನೆಷ್ಟು ಪವಿತ್ರವಾದ ಪ್ರಾಣಿ. ನಿನ್ನ ಬಗ್ಗೆ ಆ ಮುದಿ ಸಿಂಹ ಇಲ್ಲಸಲ್ಲದ ಮಾತುಗಳನ್ನು ಆಡುತ್ತಾ ಕುಳಿತಿತ್ತು. ದಿಕ್ಕಿಲ್ಲದ ದರಿದ್ರಕ್ಕೆ ನಾನು ಮಿತ್ರತ್ವ ಕೊಟ್ಟಿದ್ದೇನೆ ಎಂದು ಕೊಚ್ಚಿ ಕೊಳ್ಳುತ್ತಿತ್ತು. ಮೊದಲೇ ಅದು ಉಗ್ರಪ್ರಾಣಿ. ಅದು ಸದಾ ನಿನ್ನ ಬಗ್ಗೆ ಕತ್ತಿ ಮಸೆಯುತ್ತಿರುವುದು ನಿನಗೆ ಗೊತ್ತಿಲ್ಲ ಎಂದು ಹಸುವಿನ ಮನದಲ್ಲಿ ಹುಳಿ ಹಿಂಡಿತು.

ಮರುದಿನ ಸಿಂಹ ಏಕಾಂಗಿಯಾಗಿ ಇದ್ದಾಗ ಅದರ ಬಳಿ ತೆರಳಿದ ನರಿರಾಯ, ಕಾಡಿನ ರಾಜನೇ ನಿನ್ನ ಘನತೆಗೆ ಮಸಿ ಬಳಿಯುವ ಕೆಲಸವನ್ನು ಆ ಹಸು ಮಾಡುತ್ತಿದೆ. ನಿನ್ನೆ ಕೆರೆಯ ಬಳಿ ಎಲ್ಲ ಪ್ರಾಣಿಗಳೂ ನೀರು ಕುಡಿಯುತ್ತಿದ್ದಾಗ ಅದು ನಿನ್ನ ಬಗ್ಗೆ ಕ್ಷುಲ್ಲಕವಾಗಿ ಮಾತನಾಡಿತು. ನಮ್ಮ ರಾಜನಿಗೆ ಗಾಂಭೀರ್ಯವೇ ಇಲ್ಲ,ವಯ್ಯಸ್ಸಾದ ಮುದುಕ ಎಂದು ಟೀಕಿಸಿ ನಿನ್ನ ತೇಜೋವಧೆ ಮಾಡಿತು. ಸಣ್ಣ ಪ್ರಾಣಿಗಳ ಜತೆ ಸಖ್ಯ ಮಾಡಿದರೆ ಇದೇ ಗತಿ ಎಂದು ಕೆರಳುವಂತೆ ಹೇಳಿತು. ಇದರಿಂದ ಕೋಪಗೊಂಡ ಸಿಂಹ ಹಸುವನ್ನು ಹುಡುಕಿಕೊಂಡು ಭರದಿಂದ ಓಡಿತು. ಧಾವಿಸಿ ಬಂದ ಕೆಂಗಣ್ಣಿನ ಸಿಂಹನನ್ನು ನೋಡಿದ ಹಸುವಿಗೆ ನರಿ ಹೇಳಿದ್ದು ಸರಿ ಎನಿಸಿ ತನ್ನ ಕೋಡುಗಳಿಂದ ಸಿಂಹವನ್ನು ತಿವಿಯಲು ಮುಂದಾಯಿತು. ಇಬ್ಬರೂ ವಿವೇಚನೆಯನ್ನು ಮಾಡಲಿಲ್ಲ. ಸಿಂಹ ಹಸುವಿನ ಮೇಲೆರಗಿ ಕೊಂದು ತಿಂದಿತು. ಜನ್ಮತಃ ವೈರತ್ವ ಪಡೆದಿರುವ ಪ್ರಾಣಿ ಗಳೆರಡು ಮಿತ್ರರಾಗಿದ್ದರೂ ಚಾಡಿ ಮಾತಿಗೆ ಕಿವಿಗೊಟ್ಟು ವ್ಯವಧಾನವನ್ನು ಕಳೆದು ಕೊಂಡವು. ಒಗ್ಗಟ್ಟನ್ನು ಮುರಿಯಲು ನರಿ ರೂಪಿಸಿದ ತಂತ್ರ ಯಶಸ್ವಿಯಾಯಿತು. ಹಲವು ದಿನಗಳ ಪರಿಶ್ರಮದಿಂದ ನಾವು ಕಟ್ಟಿಕೊಂಡ ಮಿತ್ರತ್ವಕ್ಕೆ ಭಂಗ ತರುವ ಜನರೂ ನಮ್ಮ ಸಮಾಜದಲ್ಲಿ ಇರುತ್ತಾರೆ. ನಾವು ಅವರನ್ನು ಹೇಗೆ ನಿಭಾಯಿಸುತ್ತೇವೆ. ಬಾಂಧವ್ಯವನ್ನು ಹೇಗೆ ರೂಪಿಸಿ ಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ ಇನ್ನೊಂದು ಪ್ರಸಂಗ ನೋಡಿ. ಬಲೆಯಲ್ಲಿ ಸಿಲುಕಿಕೊಂಡ ಪಾರಿವಾಳದ ಹಿಂಡು ದಿಕ್ಕು ತೋಚದೇ ಕುಳಿತಿದ್ದವು. ಎಲ್ಲರೂ ಒಟ್ಟಾಗಿ ಹಾರೋಣ ಎಂದು ಹಿಂಡಿನ ನಾಯಕ ಕರೆ ನೀಡಿತು. ಎಲ್ಲ ಪಾರಿವಾಳದ ಜೀವ ಉಳಿಯಿತು ಎಂಬ ಕತೆಯನ್ನು ಪಂಚತಂತ್ರ ಕೇಳಿದ್ದೇವೆ. ಒಂದು ಕಡ್ಡಿಯನ್ನು ಸುಲಭವಾಗಿ ಮುರಿದು ಬಿಡಬಹುದು. ಆದರೆ ಹಲವು ಕಡ್ಡಿಗಳಿರುವ ಒಂದು ಕಟ್ಟನ್ನು ಮುರಿಯಲಾಗದು. ಎಳವೆಯಲ್ಲೇ ಈ ಕತೆಗಳು ನಮಗೆ ಪ್ರೇರಣೆ ಯಾಗಬೇಕು. ಒಗ್ಗಟ್ಟಿಗೆ ಮಾರಕವಾಗುವ ಶತ್ರು, ದೇಹಕ್ಕೆ ಮುಳುವಾಗುವ ರೋಗ ಎರಡನ್ನೂ ಬಗ್ಗು ಬಡಿಯ ಬೇಕು. ಏಕಾಂಗಿ ಪರಿಶ್ರಮ,ಹೋರಾಟ ಸಾಧನೆಗಿಂತ ಸಾಮೂಹಿಕ ಪ್ರಕ್ರಿಯೆಗೆ ಹೆಚ್ಚು ಬಲ. ಶೀಘ್ರ ಫಲ ಸಜ್ಜನ ಶಕ್ತಿಯನ್ನು ಬಿಂಬಿಸುವ ಸ್ನೇಹ ಸಾಗರದಲ್ಲಿ ನಾವೊಂದು ಬಿಂದುವಾದರೂ ಸಾಕು. 'ಸಂಘೇ ಶಕ್ತಿ ಕಲಿಯುಗೇ' ಎಂಬ ಬೀಜಮಾತು ಬಾಲ್ಯದಿಂದಲೇ ಬದುಕಿನ ಅಂಗವಾಗಲಿ.

ಈ ಗೊಂಬೆಗೆ
ಚುಕ್ಕಿಯನ್ನು ಸೇರಿಸಿ
ಹಾಗೂ ಬಣ್ಣವನ್ನು
ತುಂಬಿರಿ.....







ಈ
ಗೊಂಬೆಯನ್ನು
ನೋಡಿ
ಬಣ್ಣವನ್ನು
ತುಂಬಿರಿ.








ಪೆರಿಯಾಳ್ವಾರ್‌ನ ಮಗಳ ಕೈಯಲ್ಲಿ
ಗಿಳಿ ಕತ್ತಿನಲ್ಲಿ ಹಾಕಿದ ಮಾಲೆ ಶ್ರೀಕೃಷ್ಣ
ನನ್ನು ಸುತ್ತಿಸುವ, ಶ್ರೀರಂಗನಾಥ
ದೇವರಲ್ಲಿ ಐಕ್ಯವಾದವಳು ..........

..............










ಇದರಲ್ಲಿರುವ ದೇವರಿಗೆ
ಯಾರು ಭಕ್ತರು ಎಂದು
ಕಂಡು ಹಿಡಿಯಿರಿ ಮಕ್ಕಳೇ
ನೋಡೋಣ





ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಕಂ ನೆ ಬೊ ನ ದ ಗೆ

ಶ್ವಾ ಗ ಆ ಡು ಹಾ ಳ

ಉತ್ತರಗಳು:
ಆನೆ ಕಂಡು ಶ್ವಾನ ಬೊಗಳದ ಹಾಗೆ

## ದಾರಿ ತೋರಿಸಿ



| | | | | | | |
|---|---|---|---|---|---|---|
| | | 13 | 17 | 18 | 16 | 19 |
| | | ← | 20 | 19 | 11 | 17 |
| 10 | 18 | 13 | 12 | 18 | 15 | 19 |
| 19 | 17 | 15 | 16 | 17 | 11 | 13 |
| 16 | 20 | 14 | 16 | 15 | 18 | 17 |
| 18 | 11 | 13 | 12 | 18 | 20 | 15 |
| 15 | 20 | 19 | 11 | ← | | |



ಅರ್ಜುನನು
ಶ್ರೀಕೃಷ್ಣಪರಮಾತ್ಮನಲ್ಲಿ
ಸೇರಲು ಯಾವ
ದಾರಿಯಲ್ಲಿ
ಹೋಗುತ್ತಾರೆ
ತೋರಿಸಿ ಮಕ್ಕಳೇ.




ಇಲ್ಲಿರುವ ಸ್ಥಳಗಳು
ಯಾವ ರಾಜ್ಯದಲ್ಲಿ
ಇದೆಯೆಂದು ಮಕ್ಕಳೇ
ಹೇಳಿ ನೋಡೋಣ

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸಪ್ರಶ್ನೆಗಳು

01.ಭೀಮಸೇನನು ಯಾವ ರಾಕ್ಷಸನನ್ನು ಸಂಹರಿಸಿದನು? ..............................

02.ಪರಮಕರುಣಾಳು ಯಾರು? ..............................

03.ಭಾಸ್ಕರನ ಪುತ್ರರು ಯಾರು? ..............................

04.ಯಾರನ್ನು ಬಿಟ್ಟು ಪಟ್ಟಣಕ್ಕೆ ಹೋಗಲು ಮನಸ್ಸಾಗಲಿಲ್ಲ? ..............................

05. ಶ್ರೀಮನ್ನಾರಾಯಣನು ಯಾವ ಸ್ವರೂಪನು?..............................

06.ನಿರಂತರ ಪ್ರೇಮ ಪ್ರವಾಹಕ್ಕೆ ಏನೆಂದು ಹೆಸರು? ..............................

07. ಯಾವ ಮಾಸದಲ್ಲಿ ರಾಮನಿಗೆ ರಥೋತ್ಸವ ನಡೆಯುತ್ತದೆ?..............................

08. ಹರಪ್ಪನಹಳ್ಳಿ ಯಾವ ಜಿಲ್ಲೆಯಲ್ಲಿದೆ? ..............................

09. ಬಸವನ ಗುಡಿಯ ಮತ್ತೊಂದು ಹೆಸರೇನು? ..............................

10. ವೈಕುಂಠ ಏಕಾದಶಿಯ ಮತ್ತೊಂದು ಹೆಸರೇನು? ..............................

11. ಉಗ್ರನರಸಿಂಹ ದೇವಾಲಯ ಎಲ್ಲಿದೆ?..............................

12.ಶ್ರೀಹರಿಯ ಯಾರಿಗೆ ಚಿಕ್ಕ ಶ್ರೀಶೈಲ ಪೂರ್ಣರನ್ನು ಪರಿಚಯಿಸಿದರು? ..............................

13. ಯಾವ ದೇವರಿಗೆ ಲಿಂಗ ರೂಪದಲ್ಲಿ ಪೂಜೆಯನ್ನು ಸಲ್ಲಿಸಲಾಗುತ್ತದೆ?..............................

14. ತಿರುಕಣ್ಣಂಗುಡಿಯಲ್ಲಿರುವ ಮೂಲ ಮೂರ್ತಿಯ ಹೆಸರೇನು? ..............................

15. ಕೋಪಗೊಂಡ ಸಿಂಹವು ಯಾವ ಪ್ರಾಣಿಯನ್ನು ಹುಡುಕಿಕೊಂಡು ಬಂದಿತು? ..............................

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.12.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

17 ಕ್ವಿಜ್

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ, ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ: |






**ಮಕ್ಕಳೇ ಈ ಚಕ್ರವನ್ನು ತಿರುಗಿಸಿದಾಗ ಬಂದ ಪ್ರಶ್ನೆಗೆ ಉತ್ತರವನ್ನು ಆ ಬಣ್ಣದ ಹತ್ತಿರ ತುಂಬಿರಿ**

ಕೌಸಲ್ಯ ,ಸೀತಾದೇವಿ, ಗುಹುಡು, ಜಟಾಯು, ಹನುಮಂತ, ಭರತ, ಅಯೋಧ್ಯ ,ಶ್ರೀಲಂಕಾ





**ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.**

ಮೀನು, ಬಾತು, ದೋಣಿಯ ದಾರ, ಕಮಲ, ಅಳೆಗಳು, ಪಕ್ಷಿ, ಬಾವುಟ

# ಕತ್ತೆಯೇ ಗುರು!

ಚಿತ್ರಕಥೆ

ಕಥೆ : ತಮಿಳು ಮೂಲ : ಎ. ಶ್ರೀನಿಧಿ
ಅನುವಾದ : ಶ್ರೀಮತಿ. ಎಸ್. ಸುರೇಖ
ಚಿತ್ರಗಳು : ಶ್ರೀಮತಿ.ಟಿ.ಕಮಲಕಣ್ಣನ್

ಗುರಕುಲದಲ್ಲಿ ಗುರು ಶಿಷ್ಯರಿಗೆ ವಿದ್ಯಾಭ್ಯಾಸವನ್ನು ಭೋದಿಸಿದ ಮೇಲೆ ಅವರ ಜೊತೆ ಸ್ವಲ್ಪ ಸಮಯ ಗುರುಗಳು ಶಿಷ್ಯರೊಂದಿಗೆ ಸಂಭಾಷಣೆಯನ್ನು ಮುಂದುವರೆಸುತ್ತಾರೆ. ಒಂದು ದಿನ ಶಿಷ್ಯರೆಲ್ಲರೂ ಗುರುವಿನ ಹತ್ತಿರ ...





ಬೆಳಗ್ಗೆ ಒಂದು ಕತ್ತೆಯ ಮೇಲೆ ಬಹಳಷ್ಟು ಬಟ್ಟೆಗಳನ್ನು ಹೊತ್ತುಕೊಂಡು ಹೋಗುತ್ತಿತ್ತು. ಅದರಲ್ಲಿ ಕೊಳೆ ಬಟ್ಟೆಗಳು ವಾಸನೆ ಬರುತ್ತಿದ್ದವು. ಅದು ಅರಮನೆಯಿಂದ ತಂದ ಬಟ್ಟೆಗಳು ಹಾಗೂ ಸೈನಿಕರ ಬಟ್ಟೆಗಳು ಹಾಗೂ ಗ್ರಾಮ ಪ್ರಜೆಗಳ ಬಟ್ಟೆಗಳು ಇವುಗಳನ್ನು ಹೊತ್ತುಕೊಂಡು ಹೋಗುತ್ತಿತ್ತು. ಆ ಬಟ್ಟೆಗಳಿಂದ ಅಹಿತಕರ ವಾಸನೆಯನ್ನು ಹೊಂದಿತ್ತು ಆದರೆ ಕತ್ತೆ ಇದ್ಯಾವುದನ್ನು ಯೋಚಿಸಲಿಲ್ಲ ಅದು ಅರಮನೆಯದಾಗಿರಲೀ, ಸ್ಥಳೀಯರದಾಗಿರಲೀ, ಅದು ಸುಗಂಧ ಅಥವಾ ಅಹಿತಕರ ವಾಸನೆಯಾಗಿರಲೀ ಅದು ತನ್ನ ಕರ್ತವ್ಯವನ್ನು ಮಾಡುತ್ತಿತ್ತು. ಆದರೆ ಕತ್ತೆಯು ಗರ್ವಪಡಲಿಲ್ಲ, ಕೊಳೆ ಹಾಗೂ ದುರ್ವಾಸನೆಯಿಂದಾಗಿ ಕತ್ತೆಯ ಮಾಲೀಕರು ಮೂಗು ಮುಂಚಿಕೊಂಡು ಹೋಗುತ್ತಿದ್ದನು.

ಸಂಜೆ ಕತ್ತೆಯು ಹಿಂದಿರುಗಿ ಬರುವಾಗ ಒಳ್ಳೆ ಸುವಾಸನೆಯಿಂದ ಕೂಡಿದ ಒಗೆದ ಬಟ್ಟೆಯನ್ನು ತನ್ನ ಬೆನ್ನಿನ ಮೇಲೆ ಹೊತ್ತುಕೊಂಡು ಹೋಗುತ್ತಿದೆ. ಆದರೆ ಆ ಬಟ್ಟೆ ಒಗೆಯುವವನು ಬೆಳಗ್ಗೆಗಿಂತ ಈಗ ಸಂತೋಷದಿಂದ ಹೋದನು. ಆದರೆ ಕತ್ತೆ ಬೆಳಗ್ಗೆ ಹಾಗೂ ಸಂಜೆ ಒಂದೇ ಭಾವನೆಯಲ್ಲಿ ತನ್ನ ವೃತ್ತಿ ಧರ್ಮವನ್ನು ಪ್ರಾಮಾಣಿಕತೆಯಿಂದ ಮಾಡುತ್ತಿತ್ತು.



**ನೀತಿ :** ಇದರಿಂದ ನಮಗೆ ತಿಳಿದ ನೀತಿ ಎಂದರೆ ಕಷ್ಟದಲ್ಲಿ, ಸುಖದಲ್ಲಿ ಯಾವಾಗಲೂ ಒಂದೇ ಭಾವನೆಯಲ್ಲಿ ನಮ್ಮ ಮನಸ್ಸು ಇರಬೇಕು ಎಂದು ನಾನು ಈ ಕತ್ತೆಯಿಂದ ತಿಳಿದುಕೊಂಡೆ ಆದ್ದರಿಂದ ಕತ್ತೆಯೂ ಕೂಡ ಒಂದು ಗುರು ಎಂದು ಹೇಳಿದರು.



## ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯು ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮವಿಳಾಸ -''ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507''.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

---

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

**ತಿರುಪತಿಯ ಶ್ರೀ ವೆಂಕಟೇಶ್ವರ ಆಯುರ್ವೇದ ಕಾಲೇಜ್, ಕೇಂದ್ರ ಆಯುಷ್ ಸಚಿವಾಲಯ, ನವದೆಹಲಿ ಮತ್ತು ಅಖಿಲ ಭಾರತ ಆಯುರ್ವೇದ ಮಹಾಸಮ್ಮೇಳನವು ನವದೆಹಲಿಯ ಸಂಯುಕ್ತ ಆಶ್ರಯದಲ್ಲಿ 3 ದಿನಗಳ "ಆಯುರ್ವೇದ ಪರ್ವ - 2023" ಕಾರ್ಯಕ್ರಮವು 27-10-2023 ರಂದು ಕಚ್ಛಾಪಿ ಆಡಿಟೋರಿಯಂನಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ರವರು ಈಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ತಿ.ತಿ.ದೇ., ಶ್ರೀಶ್ರೀನಿವಾಸ ಆಯುರ್ವೇದ ಫಾರ್ಮಸಿಯ ಜೆ.ಇ.ಒ. "ರುಮಾಶಾಪ್ ಪೇಸ್ ಬಾಮ್" ಅನ್ನು ಬಿಡುಗಡೆ ಮಾಡಿದರು. ಕೇಂದ್ರ ಆಯುಷ್ ಸಚಿವಾಲಯದ ಕಾರ್ಯದರ್ಶಿ ಶ್ರೀ ಬಿಸ್ವಜಿತ್ ಸಿಂಗ್, ರಾಷ್ಟ್ರೀಯ ಆಯುರ್ವೇದ ವಿದ್ಯಾಪೀಠದ ಅಧ್ಯಕ್ಷರು ಡಾ॥ ದೇವೇಂದ್ರ ತ್ರಿಗುಣ, ಆಯುಷ್ ಸಲಹೆಗಾರರು ಡಾ॥ಮನೋಜ್ ನೇಸಾರಿ, ಎನ್.ಸಿ.ವಿ.ಎಂ. ಅಧ್ಯಕ್ಷರು ಡಾ॥ ಜಯಂತ್ ಡಿಯೋ ಪೂಜಾರಿ, ಎಸ್.ವಿ. ಆಯುರ್ವೇದ ಕಾಲೇಜಿನ ಪ್ರಾಂಶುಪಾಲರು ಡಾ॥ ರೇಣುದೀಕ್ಷಿತ್, ಅಧ್ಯಾಪಕರು ಡಾ॥ ವಿಜಯಭಾಸ್ಕರ್ ರೆಡ್ಡಿ, ಡಾ॥ ರಮೇಶ್‌ಬಾಬು, ಡಾ॥ನಾರಪ್ಪರೆಡ್ಡಿ, ಡಾ॥ ಶ್ರೀಹರ್ಷ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.**
















SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-11-2023 and Posting at Tirupati RMS.Regd. with the Registrar of Newspapers for India
underRNI. No. APKAN/2021/80589. Postal Regd.No.TRP/156/2021-2023
"Licenced toPost Without Prepayment No. PMGK/RNP/WPP-04(6)/2021-2023"
Posting on 20th of Every Month.




# ಗೀತಾ ಜಯಂತಿ

# 23-12-2023